ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

43

ಮಾರ್ಚ್ 9 ಗುರುವಾರ 2023

ಸಂಪುಟ: 43 | ಸಂಚಿಕೆ: 319 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ವಿಜಯ ಸಂಕಲ್ಪ ಯಾತ್ರೆ ನಂತರ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಲು ಬಿಜೆಪಿ ನಿರ್ಧಾರ

- ಯಾತ್ರೆಯ ವೇಳೆ ರಾಜ್ಯದ ಜನರ ಅಭಿಪ್ರಾಯದಂತೆ ಅಭ್ಯರ್ಥಿ ಆಯ್ಕೆ ಆದ್ಯತೆ
- ಇದಕ್ಕಾಗಿ ನಡೆಯುತ್ತಿದೆ ಮಹತ್ವದ ಅಂತಿಮ ಸಮೀಕ್ಷೆ

ಬೆಂಗಳೂರು, ಮಾ.8 (ಕೆಎಂಶಿ)–ವಿಧಾನಸಭಾ ಚುನಾವಣೆಗೆ ಜೆಡಿಎಸ್ ಈಗಾಗಲೇ ಮೊದಲ ಪಟ್ಟಿ ಬಿಡುಗಡೆ ಮಾಡಿದೆ. ಕಾಂಗ್ರೆಸ್‌ನಲ್ಲಿ ಅಭ್ಯರ್ಥಿಗಳ ಆಯ್ಕೆ ಕಸರತ್ತು ನಡೆಯುತ್ತಿದೆ. ಆದರೆ, ಆಡಳಿತಾರೂಢ ಬಿಜೆಪಿ ಸಮೀಕ್ಷೆ ನಂತರ ತನ್ನ ಅಭ್ಯರ್ಥಿಗಳ ನಿರ್ಧರಿಸಲಿದೆ.

ಬಿಜೆಪಿ ವಿಜಯಸಂಕಲ್ಪ ಯಾತ್ರೆಯಲ್ಲಿ ಜನತೆಯ ಅಭಿಪ್ರಾಯ ಸಂಗ್ರಹ ಹಾಗೂ ಮುಂದಿನ ಚುನಾವಣೆಯಲ್ಲಿ ಗೆಲ್ಲಬಹುದಾದ ಕ್ಷೇತ್ರಗಳ ಬಗ್ಗೆ ಅಂತಿಮ ಸುತ್ತಿನ ಸಮೀಕ್ಷೆ ನಡೆಸಿ, ದೆಹಲಿಯಲ್ಲಿ ಆಯ್ಕೆ ಪ್ರಕ್ರಿಯೆ ನಡೆಯಲಿದೆ.

ಯಾತ್ರೆಯಿಂದ ಆಗುವ ಲಾಭ–ನಷ್ಟದ ಜೊತೆಗೆ ಸರ್ಕಾರ ಹಾಗೂ ಪಕ್ಷದ ಹಾಲಿ ಶಾಸಕರ ಕಾರ್ಯವೈಖರಿ ಬಗ್ಗೆ ಜನರ ಅಭಿಪ್ರಾಯ ಏನಿದೆ ಎಂಬ ಮಾಹಿತಿಯನ್ನು ಕೇಂದ್ರ ಬಿಜೆಪಿ ಪಡೆಯುತ್ತಿದೆ.

ಈಗಾಗಲೇ ಚುನಾವಣಾ ಪೂರ್ವ ಏಳು ಸಮೀಕ್ಷೆಗಳನ್ನು ಬಿಜೆಪಿ ಹಾಗೂ ಮಿತ್ರಸಂಘಟನೆಗಳು ನಡೆಸಿದ್ದರೂ, ಜನರ ನಾಡಿಮಿಡಿತ ಪೂರ್ಣವಾಗಿ ತಿಳಿದುಕೊಳ್ಳಲು ಸಾಧ್ಯವಾಗಿಲ್ಲ. ಹೀಗಾಗಿ, ವಿಧಾನಸಭಾ ಚುನಾವಣಾ ವೇಳಾಪಟ್ಟಿ ಪ್ರಕಟವಾಗುವುದಕ್ಕೂ ಮುನ್ನವೇ ಮತ್ತೊಂದು ಸಮೀಕ್ಷೆ ನಡೆಸಿ, ಆ ವರದಿ ಆಧಾರದ ಮೇಲೆ ಪಕ್ಷದ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ವರಿಷ್ಠರು ಮುಂದಾಗಿದ್ದಾರೆ. ಗುಜರಾತ್ ಮಾದರಿಯಲ್ಲಿ ಕ್ಷೇತ್ರದಲ್ಲಿ ಪ್ರಭಾವ ಕಳೆದುಕೊಂಡಿರುವ ಹಾಗೂ ಜನವಿರೋಧಿಯಾಗಿರುವ ಹಾಲಿ ಶಾಸಕರಿಗೆ ಟಿಕೆಟ್ ನೀಡದಿರಲು ತೀರ್ಮಾನಿಸಿದ್ದು, ಅಂತಹ ಕ್ಷೇತ್ರಗಳಲ್ಲಿ ಪರ್ಯಾಯ ಯಾರು ಎಂಬುದರ ಬಗ್ಗೆಯು ಈ ಅಂತಿಮ ಸಮೀಕ್ಷೆಯಲ್ಲಿ ಮಾಹಿತಿ ಸಂಗ್ರಹ ಮಾಡಲಾಗುವುದು. ಜಾತೀವಾರು ಪ್ರಾಬಲ್ಯವಿರುವ ಕ್ಷೇತ್ರಗಳಲ್ಲಿ ಈ ಬಾರಿ ಚುನಾವಣೆಯಲ್ಲಿ ಪರಿಣಾಮ ಬೀರಬಹುದಾದ ಪ್ರಮುಖ ವಿಚಾರಗಳು. ಅಭ್ಯರ್ಥಿಗಳು, ನಾಯಕತ್ವ, ಸರ್ಕಾರದ ಅಭಿವೃದ್ಧಿ ಈ ಅಂಶಗಳ ಮೇಲೆ ಅಂತಿಮ ಸುತ್ತಿನ ಸಮೀಕ್ಷೆ ನಡೆಯಲಿದೆ. ರಾಜ್ಯ ನಾಯಕರನ್ನೊರತುಪಡಿಸಿ, ದೆಹಲಿ ವರಿಷ್ಠರ ನಿರ್ದೇಶನದಂತೆ ಸರ್ವ ಸ್ವತಂತ್ರವಾಗಿ ವಾಸ್ತವಾಂಶ ಆಧಾರದ ಮೇಲೆ ಸಮೀಕ್ಷೆ ನಡೆಯಲಿದ್ದು, ನೈಜ ಪರಿಸ್ಥಿತಿ ತಿಳಿಸುವಂತೆ ತಂಡಕ್ಕೆ ಸೂಚನೆ ನೀಡಲಾಗಿದೆ. ರಾಜ್ಯ ಅಥವಾ ಜಿಲ್ಲಾ ನಾಯಕರನ್ನು ಈ ತಂಡ ಸಂಪರ್ಕ ಮಾಡುವುದಿಲ್ಲ. ನೇರವಾಗಿ ಕ್ಷೇತ್ರದ ಮತದಾರರ ಬಳಿಯೇ ಅಭಿಪ್ರಾಯ ಸಂಗ್ರಹ ಮಾಡಿ, ಪ್ರತಿ ಕ್ಷೇತ್ರದ ಪ್ಲಸ್ ಹಾಗೂ ಮೈನಸ್ ಅಂಶಗಳನ್ನು ಪಟ್ಟಿ ಮಾಡಿ, ವರಿಷ್ಠರಿಗೆ ಕೊಡಲಿದೆ.

ಆನಂತರ ವರಿಷ್ಠರು ದೆಹಲಿಯಲ್ಲಿ ಟಿಕೆಟ್ ಹಂಚಿಕೆ ಅಂತಿಮಗೊಳಿಸಲಿದ್ದು, ಯಾವುದೇ ನಾಯಕರ ಶಿಫಾರಸ್ಸು, ಒತ್ತಡ, ಪ್ರಭಾವಕ್ಕೆ ಈ ಬಾರಿ ಅವಕಾಶವಿರುವುದಿಲ್ಲ.

ಪ್ರಧಾನಿ ನರೇಂದ್ರ ಮೋದಿ, ಅಮಿತ್ ಷಾ, ಸಂತೋಷ್, ಜೆ.ಪಿ. ನಡ್ಡಾ ಸಮ್ಮುಖದಲ್ಲೇ ಪಟ್ಟಿ ಅಂತಿಮಗೊಳಿಸಿ, ರಾಜಕೀಯ ವ್ಯವಹಾರಗಳ ಸಮಿತಿಯ ಮುಂದಿಟ್ಟು, ಒಪ್ಪಿಗೆ ಪಡೆಯಲು ನಿರ್ಧರಿಸಲಾಗಿದೆ. ಯಾವುದೇ ನಾಯಕರು ಪ್ರಚಾರದ ಸಂದರ್ಭದಲ್ಲಿ ಹಾಲಿ ಶಾಸಕರೂ ಸೇರಿದಂತೆ ಇವರೇ ಅಭ್ಯರ್ಥಿ ಎಂದು ಹೇಳುವಂತಿಲ್ಲ. ಬಿಜೆಪಿ ಹಾಗೂ ನರೇಂದ್ರ ಮೋದಿ ನಾಯಕತ್ವ ಬೆಂಬಲಿಸಿ ಎಂಬುದಷ್ಟೇ ಘೋಷಣೆಯಾಗಿರಬೇಕು ಎಂಬ ನೇರ ನಿರ್ದೇಶನ ಸಹ ನೀಡಲಾಗಿದೆ.

ಜೆಡಿಎಸ್ ಅಧಿಕಾರಕ್ಕೆ ಬಂದರೆ ರೈತರ ಮಕ್ಕಳ ಮದುವೆಯಾದವರಿಗೆ 2 ಲಕ್ಷ ರೂ. ಸಹಾಯಧನ



ತುಮಕೂರು, ಮಾ.8– ಜೆಡಿಎಸ್ ಸರ್ಕಾರ ಅಧಿಕಾರಕ್ಕೆ ಬಂದರೆ, ರೈತರ ಮಕ್ಕಳನ್ನು ಮದುವೆಯಾಗುವ ಹೆಣ್ಣು ಮಕ್ಕಳಿಗೆ 2 ಲಕ್ಷ ರೂ. ಸಹಾಯಧನ ನೀಡುವ ಯೋಜನೆ ತರಲಾಗುವುದು ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಘೋಷಣೆ ಮಾಡಿದ್ದಾರೆ. ತುಮಕೂರಿನ ಹಾಲ್ಕುರಿಕೆ ಗ್ರಾಮದಲ್ಲಿ ನಡೆದ ಜೆಡಿಎಸ್ ಪಂಚರತ್ನ ರಥಯಾತ್ರೆ ವೇಳೆ ಮಾತನಾಡಿದ ಅವರು, ರೈತರ ಮಕ್ಕಳಿಗೆ ಯಾರೂ ಹೆಣ್ಣು ಕೊಡುವುದಿಲ್ಲ. ಆದ್ದರಿಂದ ಹಳ್ಳಿಯ ರೈತರ ಮಕ್ಕಳ ಜೊತೆ ಮದುವೆಯಾದರೆ 2 ಲಕ್ಷ ರೂ. ಕೊಡುವ ಯೋಜನೆ ಜಾರಿಗೆ ತರಲಾಗುವುದು ಎಂದು ಭರವಸೆ ನೀಡಿದ್ದಾರೆ.

ಹಿರಿಯ ಸಾಹಿತಿ ಮಲೆಯೂರು ಗುರುಸ್ವಾಮಿ ಇನ್ನಿಲ್ಲ



ಮೈಸೂರು, ಮಾ.8–ಕನ್ನಡದ ಹಿರಿಯ ಸಾಹಿತಿ, ವಿಮರ್ಶಕ, ಕಾದಂಬರಿಕಾರರೂ ಆದ ಪ್ರೊ.ಮಲೆಯೂರು ಗುರುಸ್ವಾಮಿ(76) ಅವರು ಅಲ್ಪಕಾಲದ ಅಸ್ವಸ್ಥತೆ ನಂತರ ಇಂದು ಮಧ್ಯರಾತ್ರಿ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ನಿಧನರಾದರು.

ಮೃತರು ಪತ್ನಿ ಕೆ.ಎಸ್.ಜಯಂತಿ, ಪುತ್ರಿ ಜಿ.ಅನನ್ಯ ಹಾಗೂ ಅಪಾರ ಬಂಧುಗಳು, ಮಿತ್ರರು ಹಾಗೂ ಸಾಹಿತ್ಯ ಬಳಗವನ್ನು ಅಗಲಿದ್ದಾರೆ. ಮೂಲತಃ ಚಾಮರಾಜನಗರ ಜಿಲ್ಲೆಯ ಮಲೆಯೂರು ಗ್ರಾಮದವರಾದ ಇವರು, ಮೈಸೂರು ಹೊರವಲಯದ ಹಿನಕಲ್ ನಿವಾಸಿ. ಇವರ ಅಂತ್ಯಕ್ರಿಯೆ ನಾಳೆ(ಮಾ.9) ಚಾಮರಾಜನಗರ ಜಿಲ್ಲೆ ಮಲೆಯೂರಿನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ನಾಳೆ ಬೆಳಗ್ಗೆ ಕೆಲಕಾಲ ಅವರ ನಿವಾಸದಲ್ಲಿ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ಅವಕಾಶವಿದ್ದು, ನಂತರ ಅವರ ಸ್ವಗ್ರಾಮಕ್ಕೆ ಕೊಂಡೊಯ್ಯಲಾಗುವುದು ಎಂದು ಅವು ಹೇಳಿವೆ. ಮಲೆಯೂರು ಗುರುಸ್ವಾಮಿಯವರು ಮಲೆ ಮಹದೇಶ್ವರ ಬೆಟ್ಟದ ಜಾನಪದ ಸಂಶೋಧನಾ ಕೇಂದ್ರದ ಸದಸ್ಯರಾಗಿ ಕರ್ನಾಟಕ ರಾಜ್ಯ ಗೆಜೆಟಿಯರ್ಸ್ ಸದಸ್ಯರು, ಗ್ರಾಮ ವಿಶ್ವಕೋಶದ ಜಿಲ್ಲಾ ಸಂಪಾದಕರು. ಮೈಸೂರು ವಿಶ್ವವಿದ್ಯಾನಿಲಯದ ಬಸವ ಪೀಠದ ಪ್ರಾಧ್ಯಾಪಕರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಇವರಿಗೆ ರಾಜ್ಯೋತ್ಸವ ಸೇರಿದಂತೆ ಹಲವು ಪುರಸ್ಕಾರ ದೊರೆತಿವೆ.

ಇಂದಿನಿಂದ ದ್ವಿತೀಯ ಪಿಯು ಪರೀಕ್ಷೆ

ಮೈಸೂರು ನಗರದಲ್ಲಿ 26 ಸೇರಿ ಜಿಲ್ಲಾದ್ಯಂತ 50 ಕೇಂದ್ರಗಳಲ್ಲಿ ಸಿದ್ಧತೆ, 35020 ಮಂದಿ ಪರೀಕ್ಷೆಗೆ ನೋಂದಣಿ



ಮೈಸೂರು, ಮಾ.8(ಆರ್‌ಕೆ)– ನಾಳೆ(ಮಾ.9)ಯಿಂದ ರಾಜ್ಯಾದ್ಯಂತ 2022–23ನೇ ಸಾಲಿನ ದ್ವಿತೀಯ ಪಿಯು ವಾರ್ಷಿಕ ಪರೀಕ್ಷೆಗಳು ಆರಂಭವಾಗಲಿವೆ.

ಮೈಸೂರು ಮಹಾರಾಜ, ಮಹಾರಾಣಿ, ಸದ್ವಿದ್ಯಾ, ಮರಿಮಲ್ಲಪ್ಪ, ಡಿ.ಬನುಮಯ್ಯ, ವಿದ್ಯಾವರ್ಧಕ, ಮಹಾಜನ, ಸೇಂಟ್ ಜೋಸೆಫ್, ಶಾರದಾ ವಿಲಾಸ, ಸೇಂಟ್ ಫಿಲೋಮಿನಾ ಹೀಗೆ 26 ಸೇರಿದಂತೆ ಜಿಲ್ಲೆಯಾದ್ಯಂತ ಒಟ್ಟು 50 ಕೇಂದ್ರಗಳಲ್ಲಿ ವ್ಯವಸ್ಥೆ ಮಾಡಲಾಗಿದೆ ಎಂದು ಪದವಿಪೂರ್ವ ಮತ್ತು ವೃತ್ತಿ ಶಿಕ್ಷಣ ಉಪನಿರ್ದೇಶಕ ನಾಗಮಲ್ಲೇಶ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

13,975 ಬಾಲಕರು, 16,018 ಬಾಲಕಿಯರು ಸೇರಿದಂತೆ ಒಟ್ಟು 29,993 ವಿದ್ಯಾರ್ಥಿಗಳು(ರೆಗ್ಯುಲರ್), 681 ಬಾಲಕರು ಹಾಗೂ 555 ಬಾಲಕಿಯರು ಸೇರಿ 1,236 ವಿದ್ಯಾರ್ಥಿಗಳು ಖಾಸಗಿಯಾಗಿ, 2,482 ಬಾಲಕರು ಹಾಗೂ 1,309 ಬಾಲಕಿಯರು ಸೇರಿ 3,791 ಪುನರಾವರ್ತಿತ (ರಿಪೀಟರ್ಸ್) ವಿದ್ಯಾರ್ಥಿಗಳು ಈ ಬಾರಿ ಪರೀಕ್ಷೆಗೆ ಹಾಜರಾಗಲಿದ್ದಾರೆ.

ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸಲಾಗಿದ್ದು, ಪ್ರಶ್ನೆ ಮತ್ತು ಉತ್ತರ ಪತ್ರಿಕೆಗಳ ಸ್ವೀಕರಣೆಯನ್ನು ಕ್ಯಾಮರಾದಲ್ಲಿ ಸೆರೆ ಹಿಡಿಯಲು ವ್ಯವಸ್ಥೆ ಮಾಡಲಾಗಿದೆ. ಜಿಲ್ಲಾ ಖಜಾನೆಯಿಂದ ಪ್ರಶ್ನೆ ಮತ್ತು ಉತ್ತರ ಪತ್ರಿಕೆಗಳನ್ನು ಪರೀಕ್ಷಾ ಕೇಂದ್ರಗಳಿಗೆ ಪೂರೈಕೆ ಹಾಗೂ ಅಲ್ಲಿಂದ ಮರಳಿ ತರುವ ಎಲ್ಲಾ ವಾಹನಗಳಿಗೆ ಜಿಪಿಎಸ್ ಅಳವಡಿಸಲಾಗಿದೆ.

ಬಿಇಓ, ಹಿರಿಯ ಪ್ರಾಂಶುಪಾಲರು, ಶಸ್ತ್ರ ಸಜ್ಜಿತ ಪೊಲೀಸ್ ಸಿಬ್ಬಂದಿ ಒಳಗೊಂಡ ವಾಹನಗಳು 10 ಮಾರ್ಗಗಳಲ್ಲಿ ಸಂಚರಿಸಿ, ಪರೀಕ್ಷಾ ಕೇಂದ್ರಗಳಿಗೆ ಪ್ರಶ್ನೆ ಮತ್ತು ಉತ್ತರ ಪತ್ರಿಕೆಗಳನ್ನು ತಲುಪಿಸುವ ವ್ಯವಸ್ಥೆ ▶ 6ನೇ ಪುಟಕ್ಕೆ

ರಾಜ್ಯದಲ್ಲಿ ಬಿರು ಬಿಸಿಲಿಗೆ ಜನರು ತತ್ತರ

ಮಾರ್ಗಸೂಚಿ ಹೊರಡಿಸಿದ ರಾಜ್ಯ ಸರ್ಕಾರ



ಬೆಂಗಳೂರು: ರಾಜ್ಯದಲ್ಲಿ ಬಿಸಿಲ ಬೇಗೆಗೆ ಜನ ತತ್ತರಿಸಿ ಹೋಗುತ್ತಿದ್ದು, ದಿನೇ ದಿನೇ ಹೆಚ್ಚುತ್ತಿರುವ ತಾಪಮಾನದಿಂದಾಗಿ ಸಾಕಷ್ಟು ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುವ ಅಪಾಯವಿರುವುದರಿಂದ ಆರೋಗ್ಯ ಇಲಾಖೆ ಮಾರ್ಗಸೂಚಿ ಪ್ರಕಟಿಸಿದೆ. ಈ ಬಗ್ಗೆ ಸಾರ್ವಜನಿಕರು, ▶ 6ನೇ ಪುಟಕ್ಕೆ

ಏನನ್ನು ಮಾಡಬೇಕು

- ಉಷ್ಣ ಮಾರುತದಿಂದ ರಕ್ಷಿಸಿಕೊಳ್ಳಲು ಹೆಚ್ಚು ನೀರು ಕುಡಿಯಬೇಕು.
- ನಿಂಬೆ ಹಣ್ಣಿನ ಶರಬತ್ತು, ಮಜ್ಜಿಗೆ, ಲಸ್ಸಿ, ಹಣ್ಣಿನ ಜ್ಯೂಸ್‌ಗಳನ್ನು ಒಂದು ಚಿಟಿಕೆ ಉಪ್ಪಿನೊಂದಿಗೆ ಸೇವಿಸುವುದು ಉತ್ತಮ.
- ನೀರಿನ ಅಂಶ ಹೆಚ್ಚಿರುವ ಕಲ್ಲಂಗಡಿ, ಕರಬೂಜ, ಕಿತ್ತಳೆ, ದ್ರಾಕ್ಷಿ, ಅನಾನಸ್, ಸೌತೆಕಾಯಿ, ಎಳನೀರು ಸೇವಿಸಬೇಕು.
- ತಿಳಿಬಣ್ಣದ, ಮೈಗೆ ಅಂಟದ ಹತ್ತಿ ಬಟ್ಟೆ ಧರಿಸಬೇಕು. ನೆರಳಿಗೆ ಟೋಪಿ, ಛತ್ರಿಯಂತಹ ಆಯ್ಕೆಗಳನ್ನು ಇಟ್ಟುಕೊಳ್ಳಬೇಕು.
- ಹಗಲಿನಲ್ಲಿ ಮನೆಯ ಕೆಳಗಿನ ಮಹಡಿ ಉತ್ತಮ.

ಏನನ್ನು ಮಾಡಬಾರದು

- ಮಧ್ಯಾಹ್ನ 12 ರಿಂದ 3 ಗಂಟೆವರೆಗೆ ಹೊರ ಹೋಗುವುದನ್ನು ತಪ್ಪಿಸಬೇಕು.
- ಮಕ್ಕಳನ್ನು ನಿಲುಗಡೆ ಮಾಡಿರುವ ವಾಹನಗಳಲ್ಲಿ ಬಿಡಬಾರದು.
- ಮಧ್ಯಾಹ್ನದ ವೇಳೆ ಅಡುಗೆ ಸಿದ್ಧಪಡಿಸುವುದನ್ನು ತಪ್ಪಿಸಬೇಕು.
- ಮಧ್ಯಾಹ್ನ ಕಾಫಿ, ಟೀ, ಕಾರ್ಬೋನೇಟೆಡ್ ಪಾನೀಯ ಸೇವಿಸಬೇಡಿ.
- ಚಪ್ಪಲಿ, ಛತ್ರಿಯಂತಹ ಸುರಕ್ಷತೆ ಇಲ್ಲದೆ ಬಿಸಿಲಿನಲ್ಲಿ ಓಡಾಡಬಾರದು.
- ಮದ್ಯಪಾನ ಅಥವಾ ಹೆಚ್ಚು ಸಕ್ಕರೆ ಅಂಶವನ್ನು ಹೊಂದಿದ ಪಾನೀಯಗಳಿಂದ ದೂರವಿರಬೇಕು.ಇಂತಹ ಪಾನೀಯಗಳು ದೇಹವನ್ನು ನಿರ್ಜಲೀಕರಣಗೊಳಿಸುತ್ತವೆ ಅಥವಾ ಹೊಟ್ಟೆ ನೋವನ್ನು ಉಂಟುಮಾಡುತ್ತವೆ.

ಬಿಜೆಪಿ 65 ಸೀಟ್ ದಾಟಲ್ಲ!

40 ಪರ್ಸೆಂಟ್ ಸರ್ಕಾರ 40 ಸ್ಥಾನಕ್ಕೆ ಇಳಿದರೂ ಅಚ್ಚರಿ ಇಲ್ಲ



ಬೆಂಗಳೂರು: ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ 140ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲುತ್ತದೆ ಎಂದು ಸಮೀಕ್ಷೆಗಳು ಹೇಳಿವೆ ಎಂದಿದ್ದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಈ ಬಾರಿ ಬಿಜೆಪಿ 65ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲುವುದಿಲ್ಲ. 40 ಸ್ಥಾನಗಳಿಗೆ ಕುಸಿಯಲಿದೆ ಎಂದು ಬುಧವಾರ ಹೇಳಿದ್ದಾರೆ. ಈ ಬಿಜೆಪಿ ಸರ್ಕಾರದ ವಿರುದ್ಧ ರಾಜ್ಯಾದ್ಯಂತ ಎಲ್ಲ ವರ್ಗದ ಜನರು ಆಕ್ರೋಶಗೊಂಡಿದ್ದಾರೆ. ನಮಗೆ ನಮ್ಮ ಸಂಖ್ಯೆಯ ಬಗ್ಗೆ ಗ್ಯಾರಂಟಿ ಇದೆ ಮತ್ತು ಬಿಜೆಪಿಯ ಸಂಖ್ಯೆ 65 ಮೀರುವುದಿಲ್ಲ ಎಂಬ ಭರವಸೆಯೂ ನಮಗಿದೆ ಎಂದು ಡಿಕೆಶಿ ತಿಳಿಸಿದ್ದಾರೆ. ಇಂದು ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಡಿಕೆಶಿ, ಬಿಜೆಪಿಯವರು ಏನು ಬೇಕಾದರೂ ಹೇಳಿಕೊಳ್ಳಲಿ. ಆದರೆ ಅವರ ಸಂಖ್ಯೆ 60–65 ದಾಟುವುದಿಲ್ಲ. ಇದು ಖಚಿತ.

ಬಿಜೆಪಿ ಈ ಹಿಂದೆ 40 ಸ್ಥಾನಗಳನ್ನು ಪಡೆದಿತ್ತು (2013 ರ ವಿಧಾನಸಭಾ ಚುನಾವಣೆಯಲ್ಲಿ), ರಾಜ್ಯದಲ್ಲಿ ಬಿಜೆಪಿ ಸರ್ಕಾರದ ಮೊದಲ ಅವಧಿಯ ನಂತರ(2008–13 ರಿಂದ) ಪ್ರಸ್ತುತ '40 ಪರ್ಸೆಂಟ್ ಕಮಿಷನ್ ಸರ್ಕಾರ' 40 ಸ್ಥಾನಕ್ಕೆ ಇಳಿದರೂ ಆಶ್ಚರ್ಯವಿಲ್ಲ ಎಂದು ಡಿಕೆಶಿ ಹೇಳಿದ್ದಾರೆ.


ಯುಗಾದಿ ನಂತರ ಮೆಗಾ ಆಪರೇಷನ್‌ಗೆ 'ಕೈ' ಪಾಳಯ ಸಿದ್ಧತೆ

ಬೆಂಗಳೂರು: ಯುಗಾದಿ ಹಬ್ಬದ ನಂತರ 20 ಪ್ರಮುಖ ಬಿಜೆಪಿ ನಾಯಕರು ಹಾಗೂ ಶಾಸಕರ ಆಪರೇಷನ್‌ಗೆ ಕಾಂಗ್ರೆಸ್ ಪಾಳಯದಲ್ಲಿ ಸಿದ್ಧತೆ ನಡೆದಿದೆ ಎನ್ನಲಾಗಿದೆ. ವಲಸಿಗ ಸಚಿವರೂ ಸೇರಿದಂತೆ ಹಾಲಿ ಶಾಸಕರು, ಆಯ್ದ ಪ್ರಮುಖ ನಾಯಕರನ್ನು ಕರೆತರುವ ಕಸರತ್ತು ನಡೆದಿದೆ. ತೆರೆಮರೆಯಲ್ಲಿ ನಡೆದ ಮಾತುಕತೆಗೆ ತೆರೆ ಎಳೆಯಲು ಕಾಂಗ್ರೆಸ್ ಯುಗಾದಿ ಹಬ್ಬಕ್ಕೆ ಡೆಡ್‌ಲೈನ್ ಹಾಕಿಕೊಂಡಿದೆ.

ಈ ಬಾರಿ ಕೈ ನಾಯಕರು ದೊಡ್ಡ ಮಟ್ಟದ ವಲಸೆ ನಿರೀಕ್ಷೆ ಮಾಡುತ್ತಿದ್ದಾರೆ. ಸಂಖ್ಯಾಬಲ ಹೆಚ್ಚಿಸಿಕೊಂಡು 2023ರಲ್ಲಿ ಅಧಿಕಾರ ಹಿಡಿಯುವುದಕ್ಕೆ ಪಕ್ಕಾ ಲೆಕ್ಕಾಚಾರ ಮಾಡಿದೆ. ಅದಕ್ಕಾಗಿ ಬಿಜೆಪಿ, ಜೆಡಿಎಸ್‌ನ ಪ್ರಮುಖ ನಾಯಕರು ಬರಲು ಮನಸ್ಸು ಮಾಡಿದರೆ, ಅವರನ್ನು ಕರೆತರಲು ಕೈ ಪಾಳಯ ಲೆಕ್ಕಾಚಾರ ಹಾಕಿಕೊಂಡಿದೆ ಎಂದು ಹೇಳಲಾಗಿದೆ.

ಮೈಸೂರಲ್ಲಿ ವಿದ್ಯಾರ್ಥಿಗಳಿಗೆ ವ್ಯವಸ್ಥಿತವಾಗಿ ಸರಬರಾಜಾಗುತ್ತಿದೆ ಡ್ರಗ್ಸ್

- ಮೈಸೂರು ಪ್ರತಿಷ್ಠಿತ ಖಾಸಗಿ ಕಾಲೇಜೊಂದರ ಬಳಿ ಡ್ರಗ್ಸ್ ದಂಧೆ; ನಾಲ್ವರ ಬಂಧನ
- ಬೆಂಗಳೂರು ಪೆಡ್ಲರ್‌ನಿಂದ ಮೈಸೂರಿಗೆ ಪೂರೈಕೆಯಾಗುತ್ತಿದೆ ಎಂಡಿಎಂಎ ಮಾದಕ ವಸ್ತು



ಮೈಸೂರು, ಮಾ.8–ಸಾಂಸ್ಕೃತಿಕ ನಗರಿ ಮೈಸೂರಿಗೆ ಡ್ರಗ್ಸ್ ದಂಧೆ ಕಾಲಿಟ್ಟಿದ್ದು, ಡ್ರಗ್ಸ್ ಮಾರಾಟಗಾರರು ಕಾಲೇಜು ವಿದ್ಯಾರ್ಥಿಗಳನ್ನು ಗುರಿಯಾಗಿಸಿಕೊಂಡು ದಂಧೆ ನಡೆಸುತ್ತಿದ್ದಾರೆ. ಹೆಬ್ಬಾಳ್ ರಿಂಗ್ ರಸ್ತೆಯಲ್ಲಿರುವ ಕಾಲೇಜೊಂದರ ಬಳಿ ಡ್ರಗ್ಸ್ ಮಾರಾಟದಲ್ಲಿ ತೊಡಗಿದ್ದ ನಾಲ್ವರನ್ನು ಬಂಧಿಸಿರುವ ಸಿಸಿಬಿ ಪೊಲೀಸರು ನಿಷೇಧಿತ ಮಾದಕ ವಸ್ತು ಎಂಡಿಎಂಎ ಕ್ರಿಸ್ಟಲ್ ಅನ್ನು ವಶಪಡಿಸಿಕೊಂಡಿದ್ದಾರೆ.

ಮೈಸೂರಿನ ರಾಜೀವ್‌ನಗರ ನಿವಾಸಿ ರಾಜಿಕ್ ಮಹಮ್ಮದ್ ಖಾನ್ ಅಲಿಯಾಸ್ ರಾಜಿಕ್(28), ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯದವನಾಗಿದ್ದು, ಹಾಲಿ ಸುಭಾಷ್ ನಗರದ ಬಾಡಿಗೆ ಮನೆಯಲ್ಲಿ ವಾಸಿಸುತ್ತಿರುವ ಅಮಾನ್ ಶಾಕಿರ್ ಮಹಮ್ಮದ್ ಸುಳ್ಯ ಅಲಿಯಾಸ್ ಅಮಾನ್(21), ವಿಜಯನಗರ 2ನೇ ಹಂತದ ಕಬೀರ್ ಖಾನ್ (20) ಮತ್ತು ಮಹಮ್ಮದ್ ಸೇಠ್ ಬ್ಲಾಕ್‌ನ ದಯಾಖಾನ್ ಅಲಿಯಾಸ್ ದಯಾನ್ (19) ಬಂಧಿತ ಆರೋಪಿಗಳಾಗಿದ್ದು, ಇವರಿಂದ 20 ಗ್ರಾಂ 35 ಮಿಲಿ ತೂಕದ ಸುಮಾರು 1.50 ಲಕ್ಷ ರೂ. ಮೌಲ್ಯದ ಎಂಡಿಎಂಎ ಕ್ರಿಸ್ಟಲ್ ಡ್ರಗ್ಸ್ ಮತ್ತು ಎರಡು ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ.

ಈ ವ್ಯಕ್ತಿಗಳು ಮೈಸೂರಿನ ಹೆಬ್ಬಾಳ್ ರಿಂಗ್ ರಸ್ತೆಯಲ್ಲಿರುವ ಕಾಲೇಜೊಂದರ ಬಳಿ ಎರಡು ದ್ವಿಚಕ್ರ ವಾಹನಗಳ ನಿಲ್ಲಿಸಿಕೊಂಡು, ತಮಗೆ ಪರಿಚಯವಿರುವ ವಿದ್ಯಾರ್ಥಿಗಳಿಗೆ ಡ್ರಗ್ಸ್ ಮಾರಾಟ ಮಾಡುತ್ತಿದ್ದಾರೆ ಎಂಬ ಖಚಿತ ಮಾಹಿತಿ ಮೇರೆಗೆ ಸಿಸಿಬಿ ಎಸಿಪಿ ಸಂದೇಶ್‌ಕುಮಾರ್ ಮಾರ್ಗದರ್ಶನದಲ್ಲಿ ಸಿಸಿಬಿ ಇನ್ಸ್‌ಪೆಕ್ಟರ್ ಸಿ.ಕೃಷ್ಣಕುಮಾರ್ ನೇತೃತ್ವದಲ್ಲಿ ಸಿಬ್ಬಂದಿಗಳಾದ ಸಲೀಂ ಪಾಷ, ಎ.ಉಮಾಮಹೇಶ, ರವಿಶಂಕರ್, ನರಸಿಂಹರಾಜು, ಕೆ.ಮಹೇಶ, ಮೋಹನಾರಾಧ್ಯ ಮತ್ತು ಚಂದ್ರಶೇಖರ್ ಅವರನ್ನೊಳಗೊಂಡ ತಂಡ ಇಲಾಖೆಯ ವಾಹನ ಮಾತ್ರವಲ್ಲದೆ, ತಮ್ಮ ಸ್ವಂತ ದ್ವಿಚಕ್ರ ವಾಹನಗಳ ಮೂಲಕ ▶ 6ನೇ ಪುಟಕ್ಕೆ

ಶಾಲಾ–ಕಾಲೇಜು ಪರೀಕ್ಷೆಗಳ ಹಿನ್ನೆಲೆ 2 ಗಂಟೆಯ 'ಕರ್ನಾಟಕ ಬಂದ್' ಕೈಬಿಟ್ಟ ಕಾಂಗ್ರೆಸ್

ಬೆಂಗಳೂರು, ಮಾ.8 (ಕೆಎಂಶಿ)–ದ್ವಿತೀಯ ಪಿಯುಸಿ ಪರೀಕ್ಷೆ ಸೇರಿದಂತೆ ರಾಜ್ಯಾದ್ಯಂತ ಶಾಲಾ– ಕಾಲೇಜು ಪರೀಕ್ಷೆಗಳು ನಡೆಯುತ್ತಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಹಾಗೂ ಪೋಷಕರ ಒತ್ತಡದ ಮೇರೆಗೆ ನಾಳೆ ಕರೆ ಕೊಟ್ಟಿದ್ದ ಸಾಂಕೇತಿಕ ಕರ್ನಾಟಕ ಬಂದ್ ಅನ್ನು ವಾಪಸ್ ತೆಗೆದುಕೊಳ್ಳಲು ಕಾಂಗ್ರೆಸ್ ನಿರ್ಧರಿಸಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.


ಕಾಂಗ್ರೆಸ್ ಹಿರಿಯ ನಾಯಕರ ಜತೆ ಸಮಾಲೋಚನೆ ನಡೆಸಿ ಈ ನಿರ್ಧಾರಕ್ಕೆ ಬರಲಾಗಿದೆ ಎಂದು ಶಿವಕುಮಾರ್ ಅವರು ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಬಿಜೆಪಿ ಸರ್ಕಾರದ ಮಿತಿಮೀರಿದ ಭ್ರಷ್ಟಾಚಾರವನ್ನು ವಿರೋಧಿಸಿ ಹಾಗೂ ಮುಖ್ಯಮಂತ್ರಿಗಳ ರಾಜೀನಾಮೆಗೆ ಆಗ್ರಹಿಸಿ ಮಾ.9ರ ಬೆಳಗ್ಗೆ 9 ಗಂಟೆಯಿಂದ 11ರವರೆಗೆ ಎರಡು ಗಂಟೆಗಳ ಕಾಲ ಸಾಂಕೇತಿಕ ಬಂದ್ ಮಾಡಲು ಕಾಂಗ್ರೆಸ್ ನಿರ್ಧರಿಸಿತ್ತು. ಆದರೆ ಪರೀಕ್ಷೆಗಳು ಇರುವ ಕಾರಣ ಬಂದ್‌ನಿಂದ ನಮಗೆ ತೊಂದರೆಯಾಗಲಿದೆ ಎಂದು ವಿದ್ಯಾರ್ಥಿಗಳು ಹಾಗೂ ಪೋಷಕರು ತಮ್ಮ ಅಭಿಪ್ರಾಯ ತಿಳಿಸಿದ್ದಾರೆ. ಅವರ ಹಿತ ನಮ್ಮ ಆದ್ಯತೆ. ಹೀಗಾಗಿ ಅವರ ಅಭಿಪ್ರಾಯಕ್ಕೆ ಗೌರವ ನೀಡಿ, ಬಂದ್ ಕರೆ ವಾಪಸ್ ಪಡೆಯಲು ತೀರ್ಮಾನಿಸಿದ್ದೇವೆ. ಎಂದು ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಮೈಸೂರಲ್ಲಿ ಮಹಿಳಾ ದಿನಾಚರಣೆ

ತಾಯಂದಿರೇ, ಹೆಣ್ಣು ಮಕ್ಕಳ ಆತ್ಮಸ್ಥೈರ್ಯ ಕುಗ್ಗಿಸಬೇಡಿ

- ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸಲಹೆ
- ಸುರಕ್ಷತೆ ದೃಷ್ಟಿಯಿಂದ ನಿರ್ಬಂಧ ವಿಧಿಸುವುದು ಸಲ್ಲದು





ಮೈಸೂರು,ಮಾ.8(ಎಂಟಿವೈ)– ಸಂಕೋಲೆಗಳನ್ನು ಬದಿಗೊತ್ತಿ ಮಹಿಳೆಯರು ಪುರುಷರನ್ನು ಮೀರಿಸುವಂತೆ ಎಲ್ಲಾ ಕ್ಷೇತ್ರಗಳಲ್ಲೂ ಸಾಧನೆ ಮಾಡುತ್ತಿರುವುದು ಒಳ್ಳೆ ಬೆಳವಣಿಗೆಯಾಗಿದ್ದು, ತಾಯಂದಿರು ಹೆಣ್ಣು ಮಕ್ಕಳ ಆತ್ಮವಿಶ್ವಾಸ ಕುಗ್ಗಿಸುವ ಕೆಲಸ ಮಾಡದೇ ಪ್ರೋತ್ಸಾಹಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಸಲಹೆ ನೀಡಿದ್ದಾರೆ.

ಮೈಸೂರಿನ ಜೆ.ಕೆ.ಮೈದಾನದಲ್ಲಿ ವಿವಿಧ ಇಲಾಖೆ, ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲೂ ಮಹತ್ತರ ಸಾಧನೆ ಮಾಡುತ್ತಿದ್ದಾರೆ. ಈ ಹಿಂದೆ ಮಹಿಳೆಯರಿಗಿದ್ದ ಸಂಕೋಲೆಗಳನ್ನು ಭೇದಿಸಿ, ಸಾಧನೆಯ ಹಾದಿಯಲ್ಲಿ ಸಾಗುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ. ಒಂದು ದೃಷ್ಟಿಕೋನದಲ್ಲಿ ನೋಡಿದಾಗ ಪುರುಷರಿಗಿಂತ ಮಹಿಳೆಯರು ಸಾವಿರ ಹೆಜ್ಜೆ ಮುಂದೆ ಇದ್ದಾರೆ. ಅವರ ಆತ್ಮವಿಶ್ವಾಸ ಕುಗ್ಗಿಸದಿದ್ದರೆ ಮತ್ತಷ್ಟು ಸಾಧನೆ ಮಾಡುತ್ತಾರೆ ಎಂದರು.

ಆತ್ಮಸ್ಥೈರ್ಯ ಕುಗ್ಗಿಸಬಾರದು: ಪ್ರತಿದಿನವೂ ಮಹಿಳಾ ದಿನವೇ ಆಗಿದೆ. ಆದರೆ ಸಾಂಕೇತಿಕವಾಗಿ ಇಂದು ಎಲ್ಲೆಡೆ ಮಹಿಳಾ ದಿನ ಆಚರಿಸುತ್ತೇವೆ. ಮಹಿಳೆ ಇಲ್ಲದ ಸಮಾಜವನ್ನು ಊಹಿಸುವುದು ಸಾಧ್ಯವಿಲ್ಲ. ತಮ್ಮ ಮನೆಗಳಲ್ಲೇ ಹೆಣ್ಣು ಮಕ್ಕಳಿಗೆ ತಾಯಂದಿರು ಕೆಲವು ನಿರ್ಬಂಧ ಹೇರುವುದು ಕಂಡು ಬರುತ್ತಿದೆ. ಉತ್ತಮ ಆಲೋಚನೆಯಿಂದ ಹಾಗೂ ಹೆಣ್ಣು ಮಕ್ಕಳ ಸುರಕ್ಷತಾ ದೃಷ್ಟಿಯಿಂದ ನಿರ್ಬಂಧ ಹೇರುವುದಕ್ಕೆ ಮುಂದಾಗುತ್ತಾರೆ. ಆದರೆ, ಇದರಿಂದ ಹೆಣ್ಣು ಮಕ್ಕಳ ಆತ್ಮಸ್ಥೈರ್ಯ ಕುಗ್ಗಿಸುವಂತಾಗಬಾರದು. ತಾಯಂದಿರು ಹೆಣ್ಣು ಮಕ್ಕಳಲ್ಲಿರುವ ಪ್ರತಿಭೆಯನ್ನು ಪ್ರೋತ್ಸಾಹಿಸಿದರೆ, ಮುಂದಿನ ದಿನಗಳಲ್ಲಿ ಸಾಧನೆ ಮಾಡಲು ಮಾರ್ಗವಾಗಿ ಪರಿಣಮಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ತಾರತಮ್ಯ ಸಲ್ಲದು: ಗಂಡು ಮಗ ಪರೀಕ್ಷೆಯಲ್ಲಿ ಅನುತ್ತೀರ್ಣರಾದರೆ ಮತ್ತೆ ಮತ್ತೆ ಮರು ಪರೀಕ್ಷೆ ಬರೆಯುವಂತೆ ಒತ್ತಾಯಿಸುತ್ತಾರೆ. ಮಗಳು ಅನುತ್ತೀರ್ಣಳಾದರೆ ಮದುವೆ ಮಾಡಲು ಮುಂದಾಗುತ್ತಾರೆ. ಚಿಕ್ಕವರಿದ್ದಾಗ ಹೆಣ್ಣು ಮಕ್ಕಳಿಗೆ ಅಡುಗೆ ಆಟದ ಸಾಮಾನು, ▶ 6ನೇ ಪುಟಕ್ಕೆ

ಇಂದಿನಿಂದ ಎಟಿಎಂಇ ಇಂಜಿನಿಯರಿಂಗ್ ಕಾಲೇಜು ವಾರ್ಷಿಕೋತ್ಸವ



ಮೈಸೂರು,ಮಾ.8(ಪಿಎಂ)- ಬನ್ನೂರು ರಸ್ತೆಯ ಎಟಿಎಂಇ ಇಂಜಿನಿಯರಿಂಗ್ ಕಾಲೇಜಿನ ವಾರ್ಷಿಕೋತ್ಸವ ಪ್ರಯುಕ್ತ ಮಾ.9ರಿಂದ 25ರವರೆಗೆ 'ಆತ್ಮೀಯ 2ಕೆ23' ಶೀರ್ಷಿಕೆಯಡಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ಕಾಲೇಜಿನ ಪ್ರಾಂಶುಪಾಲ ಡಾ.ಎಲ್.ಬಸವರಾಜ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾ.9ರಂದು ಕಾಲೇಜಿನ ಆವರಣದಲ್ಲಿ 'ಆತ್ಮೀಯ 2ಕೆ23' ಲಾಂಛನ ಬಿಡುಗಡೆ ಮಾಡಲಾಗುವುದು. ಮಾ.12ರಂದು ಮೈಸೂರಿನಿಂದ ನಾಗರಹೊಳೆಗೆ ಬೈಕ್ ರ್‍ಯಾಲಿ ಏರ್ಪಡಿಸಲಾಗಿದ್ದು, ಇದರಲ್ಲಿ 60 ಬೈಕ್‌ಗಳಲ್ಲಿ ಕಾಲೇಜಿನ 120 ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ. ಮಾ.17ರಿಂದ 20ರವರೆಗೆ ಕಾಲೇಜಿನ ಆವರಣದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಇದೇ ವೇಳೆ ಅಂತರ ಕಾಲೇಜು ಕಬಡ್ಡಿ, ವಾಲಿಬಾಲ್ ಸೇರಿದಂತೆ ವಿವಿಧ ಪಂದ್ಯಗಳಿಗೆ ಚಾಲನೆ ದೊರೆಯಲಿದೆ. ಮಾ.19ರಂದು ಬೆಳಗ್ಗೆ 6ಕ್ಕೆ ಮೈಸೂರು ಅರಮನೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಎದುರು ಮ್ಯಾರಥಾನ್ ಆಯೋಜಿಸಲಾಗಿದೆ ಎಂದರು.

ಕಾಲೇಜಿನಲ್ಲಿ ಮಾ.23ರಂದು ಫ್ಯಾಷನ್ ವಾಕ್, ಮಿನಿ ಡಿಜೆ ಹಾಗೂ ಬೈಕ್ ಸ್ಟಂಟ್ಸ್ ನಡೆಯಲಿದೆ. ಮಾ.24ರಂದು ಸಂಜೆ 5.30ಕ್ಕೆ ಖ್ಯಾತ ಗಾಯಕ ರಘುದೀಕ್ಷಿತ್ ಗಾಯನ ಕಾರ್ಯಕ್ರಮ, ಮಾ.25ರಂದು ಗಿಚ್ಚಿ-ಗಿಲಿಗಿಲಿ ತಂಡದಿಂದ ಕಾಮಿಡಿ ಶೋ ನಡೆಯಲಿದೆ. ಮ್ಯಾರಥಾನ್ ಮತ್ತು ಅಂತರ ಕಾಲೇಜು ಸ್ಪರ್ಧೆ ಸಂಬಂಧ ಮಾಹಿತಿಗಾಗಿ ಮೊ.ಸಂ. 99022 38768 ಅನ್ನು ಸಂಪರ್ಕಿಸಬಹುದು ಎಂದರು. ಕಾಲೇಜಿನ ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಡಾ.ಎಲ್.ಯತೀಶ, ಕಾರ್ಯದರ್ಶಿ ನಿರಂಜನ್, ಪ್ರಾಧ್ಯಾಪಕಿ ಅನುಪಮಾ ಶೆಟ್ಟರ್, ವಿದ್ಯಾರ್ಥಿ ಕೌನ್ಸಿಲ್ ಅಧ್ಯಕ್ಷೆ ಕೀರ್ತನಾ ಗೋಷ್ಠಿಯಲ್ಲಿದ್ದರು.

ಪ್ರಧಾನಿ ಮೋದಿ ಮಾತು ಮೀರಿ ಮನೆಯಲ್ಲಿ 8 ಕೋಟಿ ಇರಿಸಿಕೊಂಡ ಮಾಡಾಳ್ ವಿರುದ್ಧ ಯಾವ ಕ್ರಮ ಕೈಗೊಳ್ತೀರಿ!

● ಬಿಜೆಪಿಗೆ ಕಾಂಗ್ರೆಸ್ ವಕ್ತಾರ ಲಕ್ಷ್ಮಣ್ ಪ್ರಶ್ನೆ ● 24 ಗಂಟೆಯಲ್ಲಿ ಬಂಗಾರು ಲಕ್ಷ್ಮಣ್ ಉಚ್ಛಾಟನೆಯಾಗಿತ್ತು!

ಮೈಸೂರು,ಮಾ.8(ಎಂಟಿವೈ)- ದೊಡ್ಡಮಟ್ಟದ ಭ್ರಷ್ಟಾಚಾರ ನಡೆಸಿ, ರಾಜ್ಯದ ಮಾನ ಮರ್ಯಾದೆ ಹಾಳುಗೆಡವಿದ ಬಿಜೆಪಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಜಾಮೀನು ಸಿಕ್ಕಿದ್ದಕ್ಕೆ ಯುದ್ಧ ಗೆದ್ದ ವೀರನಂತೆ ಮೆರವಣಿಗೆ ಮಾಡಿರುವುದು ನಾಚಿಕೆಗೇಡಿನ ಸಂಗತಿ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಕಿಡಿಕಾರಿದ್ದಾರೆ.

ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಲೋಕಾಯುಕ್ತ ದಾಳಿ ನಂತರ ನಾಪತ್ತೆಯಾಗಿದ್ದ ಶಾಸಕ ವಿರೂಪಾಕ್ಷಪ್ಪ ಜಾಮೀನು ಮಂಜೂರಾದ ಕೆಲವೇ ಹೊತ್ತಿನಲ್ಲಿ ಪ್ರತ್ಯಕ್ಷವಾಗಿದ್ದಾರೆ. ಮಾಧ್ಯಮಗಳಿಗೆ, ನಾನು ಎಲ್ಲೂ ಹೋಗಿಲ್ಲ. ಮನೆಯಲ್ಲಿಯೇ ಇದ್ದೆ ಎಂದಿದ್ದಾರೆ. ಆದರೆ ಎ-1 ಆರೋಪಿ ಮನೆಯಲ್ಲಿದ್ದರೂ



ಯಾಕೇ ಬಂಧಿಸಲಿಲ್ಲ ಎಂಬುದಕ್ಕೆ ಡಿಜಿಪಿ ಪ್ರವೀಣ್‌ಸೂದ್ ಉತ್ತರ ಕೊಡಬೇಕು ಎಂದು ಒತ್ತಾಯಿಸಿದರು.

ನಮ್ಮ ಭಾಗದ ರೈತರ ಮನೆಗಳಲ್ಲಿ ಕೋಟ್ಯಾಂತರ ರೂ. ಹಣವಿರುತ್ತದೆ ಎಂದು ವಿರೂಪಾಕ್ಷಪ್ಪ ಹೇಳಿದ್ದಾರೆ. ಇದು ಸಾಧ್ಯವೇ. 2 ಲಕ್ಷಗಿಂತ ಹೆಚ್ಚು ನಗದು ಇಟ್ಟುಕೊಳ್ಳಬಾರದೆಂದು ಪ್ರಧಾನಿ ಮೋದಿ ಹೇಳಿದ್ದಾರೆ. ಭ್ರಷ್ಟಾಚಾರ ಪ್ರಕರಣದಲ್ಲಿ ರಾಜ್ಯ ಸರ್ಕಾರ ದಿಕ್ಕು ತಪ್ಪಿಸುತ್ತಿದೆ. ಪ್ರಕರಣ ಹಳ್ಳ ಹಿಡಿಯುತ್ತಿದೆ. ಸಿಎಂ ಬಸವರಾಜ ಬೊಮ್ಮಾಯಿ ವಿರೂಪಾಕ್ಷಪ್ಪ ಅವರನ್ನು ಪಕ್ಷದಿಂದ ಉಚ್ಛಾಟನೆ ಮಾಡಿದ್ದೇವೆ ಎನ್ನುತ್ತಾರೆ. ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ವರದಿ ಬಂದ ಬಳಿಕ ಉಚ್ಛಾಟನೆ ಮಾಡುವುದಾಗಿ ಹೇಳಿದ್ದಾರೆ. ಯಾವುದು ಸತ್ಯ, ಸ್ಪಷ್ಟನೆ ನೀಡಿ ಎಂದು ಆಗ್ರಹಿಸಿದರು.

ಈ ಹಿಂದೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿದ್ದ ಬಂಗಾರು ಲಕ್ಷ್ಮಣ್ ಲಕ್ಷ ರೂ. ಲಂಚ ಪಡೆದು ಸಿಕ್ಕಿಬಿದ್ದಾಗ 24 ಗಂಟೆಯೊಳಗೆ ಉಚ್ಛಾಟನೆ ಮಾಡಲಾಗಿತ್ತು. ಅವರು ದಲಿತ ಸಮುದಾಯಕ್ಕೆ ಸೇರಿದ್ದವರಾಗಿದ್ದರಿಂದ ಈ ಶಿಸ್ತು ಕ್ರಮ. ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಬಳಿ 8 ಕೋಟಿ ಸಿಕ್ಕರೂ ಯಾಕೆ ಅಮಾನತು ಮಾಡಿಲ್ಲ. ಇದಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉತ್ತರಿಸಬೇಕು ಎಂದು ಒತ್ತಾಯಿಸಿದರು.

ಈ ಮಧ್ಯೆ ನಾಲ್ಕೇ ಗಂಟೆಯಲ್ಲಿ ವಿರೂಪಾಕ್ಷಪ್ಪ ಅವರಿಗೆ ಜಾಮೀನು ನೀಡಿರುವುದನ್ನು ಪ್ರಶ್ನಿಸಿ ವಕೀಲರ ಸಂಘ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಚಂದ್ರಚೂಡ ಅವರಿಗೆ ಪತ್ರ ಬರೆದಿದ್ದಾರೆ. ಅತ್ತ ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್, ಬಿಜೆಪಿ ಒಂದು ಜಾತಿಯಡಿ ಸಿಲುಕಿದೆ. ವ್ಯಕ್ತಿ ಮೀರಿ, ಜಾತಿ ಮೀರಿ ಚುನಾವಣೆ ಮಾಡಬೇಕು ಎಂದಿದ್ದಾರೆ. ಈ ಮಾತಿನ ಅರ್ಥ ಬಿಜೆಪಿ ಲಿಂಗಾಯತರ ಅಡಿ ಸಿಲುಕಿದೆ ಎಂಬುದಾಗಿದೆ. ತಮಗೆ ಲಿಂಗಾಯತರ ಮತ ಬೇಡವೇ? ಸಂತೋಷ್ ಸ್ಪಷ್ಟಪಡಿಸಬೇಕು ಎಂದು ಒತ್ತಾಯಿಸಿದರು.

ನಾಲ್ವರು ಮಂತ್ರಿಗಳು, ಎಂಟು ಶಾಸಕರು ಕಾಂಗ್ರೆಸ್‌ಗೆ

ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ 150ಕ್ಕಿಂತ ಹೆಚ್ಚು ಸ್ಥಾನಗಳಲ್ಲಿ ಗೆಲುವು ಸಾಧಿಸಲಿದೆ. ಈ ನಡುವೆ ನಾಲ್ವರು ಸಚಿವರು, ಜೆಡಿಎಸ್‌ನ 8 ಶಾಸಕರು ಕಾಂಗ್ರೆಸ್ ಸೇರಲು ಅರ್ಜಿ ಹಾಕಿದ್ದಾರೆ. ಸಚಿವರಲ್ಲಿ ಪ್ರಬಲ ಸಮುದಾಯಕ್ಕೆ ಸೇರಿದ ಹಾಗೂ ತಮ್ಮದೇ ವರ್ಚಸ್ಸುಳ್ಳ ನಾಯಕರೂ ಇದ್ದಾರೆ. ಶೀಘ್ರದಲ್ಲಿ ಕಾಂಗ್ರೆಸ್ ವತಿಯಿಂದ 150 ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಲಾಗುತ್ತದೆ ಎಂದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ಆರ್.ಮೂರ್ತಿ ಎಂ.ಶಿವಣ್ಣ, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸೋಮಶೇಖರ್, ಮಾಧ್ಯಮ ವಕ್ತಾರ, ಮಹೇಶ್, ಈಶ್ವರ್ ಚಕ್ಕಡಿ, ಬಾಲು ಹಾಗೂ ಇನ್ನಿತರರು ಇದ್ದರು.

ಪಶು-ಪಕ್ಷಿಗಳ ಪಾಲನೆಯಲ್ಲಿ ನಿಯಮ ಉಲ್ಲಂಘನೆ ಸಂಬಂಧ ಕೇಸ್ ದಾಖಲು

ಪೆಟ್ ಸ್ಟೋರ್ ಮಾಲೀಕನಿಂದ ಪ್ರತಿದೂರು

ಮೈಸೂರು, ಮಾ.8-ಯಾವುದೇ ರಹದಾರಿ ಇಲ್ಲದೇ ಎಡಬ್ಲ್ಯೂಬಿಐ ಮಾರ್ಗಸೂಚಿ ಅನುಸರಿಸದೇ ಇಕ್ಕಟ್ಟಾದ ಪಂಜರಗಳಲ್ಲಿ ನಾಯಿ ಮತ್ತು ಪಕ್ಷಿಗಳನ್ನಿಟ್ಟು ಹಿಂಸೆ ನೀಡಲಾಗುತ್ತಿದೆ ಎಂದು ಪೆಟ್ ಸ್ಟೋರ್ ಮಾಲೀಕನ ವಿರುದ್ಧ ಕೇಸ್ ದಾಖಲಾಗಿದೆ.

ಮೈಸೂರಿನ ಶ್ಯಾದನಹಳ್ಳಿ ನಿವಾಸಿ ಎಸ್.ಪ್ರಿಯದರ್ಶಿನಿ(33) ಎಂಬುವರು ಕೆ.ಆರ್.ಠಾಣೆಗೆ ಮಾ.5ರಂದು ಈ ಸಂಬಂಧ ದೂರು ನೀಡಿದ್ದು, ಕೆ.ಆರ್. ಮೊಹಲ್ಲಾದ ಬಸವೇಶ್ವರ ರಸ್ತೆಯಲ್ಲಿರುವ ಲಕ್ಷ್ಮೀ ಪೆಟ್ ಸ್ಟೋರ್ ಮಾಲೀಕ ಎಸ್. ಹರೀಶ್(47) ಎಂಬಾತ ಯಾವುದೇ ರಹದಾರಿ ಇಲ್ಲದೇ, ಮಾರ್ಗಸೂಚಿಯನ್ನು ಅನುಸರಿಸದೇ ತನ್ನ ಮಳಿಗೆಯಲ್ಲಿ ನಾಯಿ ಮತ್ತು ಪಕ್ಷಿಗಳನ್ನು ಇಕ್ಕಟ್ಟಾದ ಪಂಜರಗಳಲ್ಲಿಟ್ಟು, ಅವುಗಳಿಗೆ ಮೂಲ ಸೌಕರ್ಯಗಳನ್ನೂ ಒದಗಿಸದೇ ಹಿಂಸೆ ನೀಡುತ್ತಿದ್ದಾನೆ. ಅಲ್ಲದೇ ಕಾನೂನುಬಾಹಿರವಾಗಿ ನಾಯಿ ಮತ್ತು ಪಕ್ಷಿಗಳ ಮಾರಾಟ ಮಾಡುವುದರ ಜೊತೆಗೆ ಬ್ರೀಡಿಂಗ್ ಮಾಡುತ್ತಿದ್ದಾರೆ ಎಂದು ನೀಡಿದ ದೂರಿನನ್ವಯ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಪ್ರತಿದೂರು: ಪ್ರಿಯದರ್ಶಿನಿ ಅವರ ದೂರಿಗೆ ಲಕ್ಷ್ಮಿ ಅಕ್ವೇರಿಯಂ ಮತ್ತು ಪೆಟ್ಸ್ ಅಂಗಡಿ ಮಾಲೀಕ ಎಸ್.ಹರೀಶ್ ಮಾ.6ರಂದು ಪ್ರತಿದೂರು ನೀಡಿದ್ದು, ಫೆ.11ರಂದು ಮಧ್ಯಾಹ್ನ 2.30ರ ವೇಳೆಯಲ್ಲಿ ಪ್ರಿಯದರ್ಶಿನಿ, ಹರೀಶ ಹಾಗೂ ಮತ್ತೋರ್ವ ವ್ಯಕ್ತಿ ತಮ್ಮ ಅಂಗಡಿಗೆ ಬಂದು ತಾವು ಸರ್ಕಾರಿ ಅಧಿಕಾರಿಗಳೆಂದು ಹೇಳಿಕೊಂಡಿದ್ದಲ್ಲದೇ, ನೀನು ಇಲ್ಲಿ ಪ್ರಾಣಿ-ಪಕ್ಷಿಗಳನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ. ನಿನ್ನ ಮೇಲೆ ಕೇಸ್ ಬುಕ್ ಮಾಡಿಸಿ, ಒದ್ದು ಒಳಗಡೆ ಹಾಕಿಸುತ್ತೇವೆ ಎಂದು ಹೆದರಿಸಿ, ಮನೆಗೆ ಅತಿಕ್ರಮವಾಗಿ ಪ್ರವೇಶಿಸಿ ಸುಮಾರು 3 ತಿಂಗಳ ಪಿನ್‌ಪಿನ್ ಜಾತಿಯ ಎರಡು ನಾಯಿಮರಿಗಳನ್ನು ಪಡೆದುಕೊಂಡು ಹೋಗಿದ್ದಾರೆ. ಹೋಗುವಾಗ ಮಕಾವ್ರೋ ಜಾತಿಯ ಪಕ್ಷಿಯನ್ನು ಕೊಡದಿದ್ದರೆ ಒಂದು ಗತಿ ಕಾಣಿಸುತ್ತೇವೆ ಎಂದು ಬೆದರಿಕೆ ಹಾಕಿದ್ದಾರೆ. ಮಾ.4ರಂದು ಚಿಕ್ಕಪ್ಪನ ಅಂತ್ಯಸಂಸ್ಕಾರಕ್ಕಾಗಿ ತಾನು ಹೋಗಿದ್ದ ವೇಳೆ ಅಂಗಡಿ ಬಳಿ ಬಂದಿದ್ದ ಆರೋಪಿಗಳು, ಅಕ್ಕಪಕ್ಕದವರೊಟ್ಟಿಗೆ ಕೂಗಾಡಿದ್ದಾರೆ ಎಂದು ನೀಡಿದ ದೂರನ್ನೂ ಕೂಡ ಕೆ.ಆರ್.ಠಾಣೆ ಪೊಲೀಸರು ದಾಖಲಿಸಿಕೊಂಡಿದ್ದಾರೆ.

ಎಲ್ಲಾ ಪಕ್ಷಗಳು ಕುರುಬರಿಗೆ ಕನಿಷ್ಠ 40 ಕ್ಷೇತ್ರಗಳಲ್ಲಿ ಟಿಕೆಟ್ ನೀಡುವಂತೆ ಕುರುಬರ ಸಂಘ ಮನವಿ

ಬೆಂಗಳೂರು, ಮಾ.8-ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕುರುಬ ಸಮುದಾಯಕ್ಕೆ ಮೂರೂ ಪಕ್ಷಗಳಾದ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಕನಿಷ್ಠ 40 ಕ್ಷೇತ್ರಗಳಲ್ಲಿ ಟಿಕೆಟ್ ನೀಡುವಂತೆ ಕರ್ನಾಟಕ ಪ್ರದೇಶ ಕುರುಬರ ಸಂಘದ ಅಧ್ಯಕ್ಷರಾದ ಬಿ.ಸುಬ್ರಹ್ಮಣ್ಯ ಒತ್ತಾಯಿಸಿದರು.

ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕದಲ್ಲಿ ಪ್ರಬಲ ಜಾತಿಗಳ ಪೈಕಿ 3ನೇ ಸ್ಥಾನದಲ್ಲಿರುವ ಕುರುಬ ಸಮುದಾಯವು ಸುಮಾರು 75 ಲಕ್ಷಕ್ಕೂ ಅಧಿಕ ಜನಸಂಖ್ಯೆ ಹೊಂದಿದೆ. ರಾಜ್ಯದ 150ಕ್ಕೂ ಹೆಚ್ಚಿನ ವಿಧಾನಸಭಾ ಕ್ಷೇತ್ರಗಳಲ್ಲಿ ನಮ್ಮ ಸಮುದಾಯದ ಮತದಾರರು ಅಭ್ಯರ್ಥಿಗಳನ್ನು ಗೆಲ್ಲಿಸುವಲ್ಲಿ ನಿರ್ಣಾಯಕರಾಗಿದ್ದಾರೆ. ರಾಜ್ಯದಲ್ಲಿ 40ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಕುರುಬ ಸಮಾಜದ ಅಭ್ಯರ್ಥಿಗಳು ಗೆಲ್ಲುವ ಸಾಮರ್ಥ್ಯ ಇದ್ದರೂ ಕಳೆದ ಹಲವು ದಶಕಗಳಿಂದ ರಾಷ್ಟ್ರೀಯ ಹಾಗೂ ಪ್ರಾದೇಶಿಕ ಪಕ್ಷಗಳು ಸೂಕ್ತ ಪ್ರಾತಿನಿಧ್ಯ ನೀಡದೇ ಸಮಾಜವನ್ನು ಕೇವಲ ಮತದಾನಕ್ಕಾಗಿ ಉಪಯೋಗಿಸಿಕೊಳ್ಳುತ್ತಿವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಕುರುಬ ಸಮಾಜದ ಅಭ್ಯರ್ಥಿಗಳು ಗೆಲ್ಲುವಂತಹ ಕ್ಷೇತ್ರಗಳಲ್ಲೂ ಟಿಕೆಟ್ ನೀಡದೇ ಇರುವುದು ಬೇಸರದ ಸಂಗತಿ. ಆದ್ದರಿಂದ ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ರಾಷ್ಟ್ರೀಯ ಹಾಗೂ ಪ್ರಾದೇಶಿಕ ಪಕ್ಷಗಳು ಕುರುಬ ಸಮಾಜದ ಕನಿಷ್ಠ 40 ಆಕಾಂಕ್ಷಿಗಳನ್ನು ಗುರುತಿಸಿ ಗೆಲ್ಲುವಂತಹ ಕ್ಷೇತ್ರಗಳಲ್ಲಿ ಟಿಕೆಟ್ ನೀಡಬೇಕು ಎಂದು ಆಗ್ರಹಿಸಿದರು.

ರಾಜ್ಯದ 30 ಜಿಲ್ಲೆಗಳ ಪೈಕಿ, ಎಲ್.ಜಿ. ಹಾವನೂರು ವರದಿಯ ಅಂದಾಜಿನಂತೆ ಕುರುಬ ಸಮುದಾಯಕ್ಕೆ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಹಾಗೂ ಇತರೆ ರಾಜಕೀಯ ಪಕ್ಷಗಳಿಂದ ಜನಸಂಖ್ಯೆಗೆ ಅನುಗುಣವಾಗಿ ಪ್ರಾತಿನಿಧ್ಯ ಸಿಕ್ಕಿಲ್ಲ. ಈಗಾಗಲೇ ಕೆಲವು ಕ್ಷೇತ್ರಗಳಲ್ಲಿ ಜಯ ಸಾಧಿಸಿರುವ ರಾಜಕೀಯ ನಾಯಕರು ತಮ್ಮ ವರ್ಚಸ್ಸಿನಿಂದಲೇ ಗೆದ್ದುಬಂದವರಾಗಿದ್ದಾರೆ. ಉಳಿದವರು ಗೆಲ್ಲಲು ಶಕ್ತರಾಗಿದ್ದರೂ ಟಿಕೆಟ್ ವಂಚಿತರಾಗಿ ರಾಜಕೀಯ ಸ್ಥಾನಮಾನ ಕಳೆದುಕೊಳ್ಳುವಂತಾಗಿದೆ. 2004ರಲ್ಲಿ ಒಟ್ಟು ಸಿದ್ದರಾಮಯ್ಯರವರು ಸೇರಿ ಒಟ್ಟು 6 ಮಂದಿ, 2013ರಲ್ಲಿ 14 ಮಂದಿ ಶಾಸಕರಾಗಿದ್ದರು. 2018ರಲ್ಲಿ 12 ಮಂದಿ ಆಯ್ಕೆಯಾಗಿದ್ದು, ಇವರಲ್ಲಿ ಕಾಂಗ್ರೆಸ್‌ನ 8 ಮಂದಿ, ಓರ್ವ ಬಿಜೆಪಿ, ಇಬ್ಬರು ಜೆಡಿಎಸ್ ಹಾಗೂ ಪಕ್ಷೇತರರಾಗಿ ಒಬ್ಬರು ಆಯ್ಕೆಯಾಗಿದ್ದರು. 2018ರಲ್ಲಿ ಕಾಂಗ್ರೆಸ್ ಪಕ್ಷದಿಂದ 20 ಮಂದಿ, ಜೆಡಿಎಸ್ ಪಕ್ಷದಿಂದ 11 ಮಂದಿ, ಬಿಜೆಪಿಯಿಂದ ಐವರಿಗೆ ಟಿಕೆಟ್ ನೀಡಿದ್ದು ಅಲ್ಲಿಯೂ ಕುರುಬರಿಗೆ ಅನ್ಯಾಯವಾಗಿದೆ ಎಂದರು.

ಮಾಧ್ಯಮಗಳ ವರದಿಗಳ ಪ್ರಕಾರ ಸಿದ್ದರಾಮಯ್ಯರವರ ಅವಧಿಯ ಸರ್ಕಾರದಲ್ಲಿ ನಡೆಸಲಾದ ಜಾತಿ ಗಣತಿ 2016ರ ಆಧಾರದಲ್ಲಿ ಕುರುಬರ ಸಂಖ್ಯೆ ಹೆಚ್ಚಿದ್ದು, ಈ ವರದಿಯ ಆಧಾರದ ಮೇರೆಗೆ ಕುರುಬ ಸಮುದಾಯಕ್ಕೆ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಪಕ್ಷಗಳಿಂದ ಕನಿಷ್ಠ 40 ಮಂದಿಗೆ ಟಿಕೆಟ್ ನೀಡಬೇಕು ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘವು ಆಗ್ರಹಿಸುತ್ತಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಪ್ರಧಾನ ಕಾರ್ಯದರ್ಶಿ ಡಿ.ವೆಂಕಟೇಶಮೂರ್ತಿ, ಖಜಾಂಚಿ ದೇವರಾಜ್ ಸುಬ್ಬರಾಯಪ್ಪ, ನಿರ್ದೇಶಕರಾದ ಕೆ.ಟಿ.ನಾಗರಾಜು, ಸುರೇಶ್, ರಾಜಣ್ಣ ಮತ್ತಿತರರು ಹಾಜರಿದ್ದರು.

ಮಾ.10, 11ರಂದು 'ಸಿನಿರಮಾ-2023' ರಾಷ್ಟ್ರಮಟ್ಟದ ಕಿರು ಚಲನಚಿತ್ರೋತ್ಸವ



ಮೈಸೂರು,ಮಾ.8(ಪಿಎಂ)- ಅಮೃತ ವಿಶ್ವವಿದ್ಯಾಪೀಠಂನ ದೃಶ್ಯ ಸಂವಹನ ವಿಭಾಗದ ವತಿಯಿಂದ ಮಾ.10 ಮತ್ತು 11ರಂದು 'ಸಿನಿರಮಾ-2023' ರಾಷ್ಟ್ರಮಟ್ಟದ ಕಿರು ಚಲನಚಿತ್ರೋತ್ಸವ, ಸಿನಿಮಾ ಕ್ಷೇತ್ರ ಕುರಿತ ಕಾರ್ಯಾಗಾರ, ಸಿನಿರಮಾ ಕಿರುಚಿತ್ರ ಸ್ಪರ್ಧೆಯ ಬಹುಮಾನ ವಿತರಣಾ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ದೃಶ್ಯ ಸಂವಹನ ವಿಭಾಗದ ಮುಖ್ಯಸ್ಥೆ ಡಾ.ಮೌಲ್ಯ ಬಲಾಡಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬೋಗಾದಿ 2ನೇ ಹಂತದ ಅಮೃತ ವಿಶ್ವವಿದ್ಯಾಪೀಠಂನ ಆವರಣದಲ್ಲಿ ಈ ಕಾರ್ಯಕ್ರಮಗಳು ನಡೆಯಲಿವೆ. ಮಾ.10ರಂದು ಬೆಳಗ್ಗೆ 10ಕ್ಕೆ ಕನ್ನಡ ಚಿತ್ರರಂಗದ ಖ್ಯಾತ ನಿರ್ದೇಶಕ ಡಾ.ನಾಗತಿಹಳ್ಳಿ ಚಂದ್ರಶೇಖರ್ ಕಿರು ಚಿತ್ರೋತ್ಸವ ಉದ್ಘಾಟಿಸಲಿದ್ದಾರೆ. ನಟ ಮಂಡ್ಯ ರಮೇಶ್ ಅತಿಥಿಯಾಗಿ ಭಾಗವಹಿಸಲಿದ್ದಾರೆ ಎಂದರು.

ಮಾ.10ರಂದು 11.30ಕ್ಕೆ ಚಿತ್ರಕಥೆ ಬರವಣಿಗೆ ಕುರಿತು ಡಾ.ನಾಗತಿಹಳ್ಳಿ ಚಂದ್ರಶೇಖರ್ ಮಾತನಾಡಲಿದ್ದಾರೆ. ಮಧ್ಯಾಹ್ನ 2ಕ್ಕೆ 'ಸಿನಿಮಾ ಮಾರ್ಕೆಟಿಂಗ್-ಪ್ರೊಮೋಶನ್ಸ್' ಕುರಿತು ಕೊಚ್ಚಿಯ ಸ್ಟೋರೀಸ್ ಸೋಶಿಯಲ್ ಸಂಸ್ಥಾಪಕಿ ಡಾ.ಸಂಗೀತಾ ಜಾನಚಂದ್ರನ್, ಮಾ.11ರಂದು ಬೆಳಗ್ಗೆ 9ಕ್ಕೆ 'ಫಿಲಂ ಕ್ರಿಟಿಸಿಸಮ್' ಕುರಿತು ಸಿನಿಮಾ ವಿಮರ್ಶಕ ಸುಚಿನ್ ಮೆಹ್ರೋತ್ರಾ ವಿಚಾರ ಮಂಡನೆ ಮಾಡಲಿದ್ದಾರೆ ಎಂದು ಹೇಳಿದರು.

ಮಾ.11ರಂದು ಬೆಳಗ್ಗೆ 11.30ಕ್ಕೆ ಕಿರು ಚಿತ್ರೋತ್ಸವದ ಸಮಾರೋಪ, ಕಿರುಚಿತ್ರ ಸ್ಪರ್ಧೆಯ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದ್ದು, ಮುಖ್ಯ ಅತಿಥಿಯಾಗಿ ಕನ್ನಡ ಚಿತ್ರರಂಗದ ಖ್ಯಾತ ನಾಯಕ ನಟ ಡಾಲಿ ಧನಂಜಯ್ ಪಾಲ್ಗೊಳ್ಳಲಿದ್ದಾರೆ. ಮೈಸೂರಿನ ಡಿಆರ್‌ಸಿ ಮಲ್ಟಿಪ್ಲೆಕ್ಸ್‌ನ ಮಾಲೀಕರಾದ ವೈಶಾಲಿ ಹನುಮಂತ್ ಹಾಗೂ ಹನುಮಂತ್ ಅತಿಥಿಗಳಾಗಿರುವರು. ಸಿನಿರಮಾ ಕಿರುಚಿತ್ರ ಸ್ಪರ್ಧೆ ಮುಕ್ತಾಯಗೊಂಡಿದ್ದು, 3 ವಿಭಾಗಗಳಲ್ಲಿ ವಿವಿಧ ಭಾಷೆಗಳ 54 ಕಿರುಚಿತ್ರಗಳು ಪ್ರವೇಶ ಪಡೆದಿದ್ದವು. ಪ್ರಥಮ ಅತ್ಯುತ್ತಮ ಕಿರುಚಿತ್ರಕ್ಕೆ 10 ಸಾವಿರ ರೂ., ದ್ವಿತೀಯ ಅತ್ಯುತ್ತಮ ಕಿರುಚಿತ್ರಕ್ಕೆ 7 ಸಾವಿರ ರೂ., ತೃತೀಯ ಅತ್ಯುತ್ತಮ ಕಿರುಚಿತ್ರಕ್ಕೆ 5 ಸಾವಿರ ರೂ. ನಗದು ಬಹುಮಾನ ದೊರೆಯಲಿದೆ ಎಂದರು.

ಜೊತೆಗೆ ಉತ್ತಮ ನಿರ್ದೇಶಕ, ಉತ್ತಮ ನಟ, ಉತ್ತಮ ನಟಿ, ಉತ್ತಮ ಛಾಯಾಚಿತ್ರಗ್ರಾಹಕ, ಉತ್ತಮ ಸಂಕಲನಕಾರ ವಿಭಾಗಗಳಲ್ಲಿ ಪ್ರಶಸ್ತಿ ನೀಡಲಾಗುತ್ತಿದ್ದು, ಇವುಗಳಲ್ಲಿ ತಲಾ 4 ಸಾವಿರ ರೂ. ನಗದು ಬಹುಮಾನ ದೊರೆಯಲಿದೆ. ಮೊಬೈಲ್‌ನಲ್ಲಿ ಚಿತ್ರ ನಿರ್ಮಾಣ ವಿಭಾಗದ ಸ್ಪರ್ಧೆಯೂ ನಡೆದಿದ್ದು, ಪ್ರಥಮ ಸ್ಥಾನಕ್ಕೆ 5 ಸಾವಿರ ರೂ. ಹಾಗೂ ದ್ವಿತೀಯ ಸ್ಥಾನಕ್ಕೆ 3 ಸಾವಿರ ರೂ. ನಗದು ಬಹುಮಾನ ದೊರೆಯಲಿದೆ. ಕಾರ್ಯಾಗಾರಕ್ಕೆ ಪ್ರವೇಶ ಶುಲ್ಕವಿದ್ದು, ಮಾಹಿತಿಗೆ ಮೊ.ಸಂ. 95902 48222 ಅನ್ನು ಸಂಪರ್ಕಿಸಬಹುದು ಎಂದರು. ಅಮೃತ ವಿಶ್ವವಿದ್ಯಾಪೀಠಂನ ಪ್ರಾಂಶುಪಾಲ ಡಾ.ಜಿ. ರವೀಂದ್ರನಾಥ್, ಸಹಾಯಕ ಪ್ರಾಧ್ಯಾಪಕ ದರ್ಶನ್ ಮಂಜುನಾಥ್ ಗೋಷ್ಠಿಯಲ್ಲಿದ್ದರು.

ನಾಳೆಯಿಂದ ಟ್ರಾನ್ಸ್-ಜೆಂಡರ್ ಬೇಸ್‌ಲೈನ್ ಸಮೀಕ್ಷೆ

ಮೈಸೂರು, ಮಾ.8- ಟ್ರಾನ್ಸ್-ಜೆಂಡರ್ ಮುಖ್ಯವಾಹಿನಿಗೆ ತರುವ ಸಲುವಾಗಿ ಅಗತ್ಯ ಸೌಲಭ್ಯಗಳನ್ನು ಒದಗಿಸಲು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಮಾ.10 ರಿಂದ ಏಪ್ರಿಲ್ 24ರವರೆಗೆ 45 ದಿನಗಳ ಕಾಲ ವಿಜಯಪುರ ಹಾಗೂ ಮೈಸೂರು ಜಿಲ್ಲೆಗಳಲ್ಲಿ ಸಮೀಕ್ಷೆ ನಡೆಯಲಿದೆ. ಜಿಲ್ಲೆಯಲ್ಲಿ ಟ್ರಾನ್ಸ್-ಜೆಂಡರ್ಸ್ ಮೂಲ ಹಂತದ ಪ್ರಾಯೋಗಿಕ ಸಮೀಕ್ಷೆಯನ್ನು ಎಚ್.ಡಿ.ಕೋಟೆ (ದೂ.ಸಂ:08228-255320), ಕೆ.ಆರ್. ನಗರ (ದೂ.ಸಂ: 08223-262714), ಹುಣಸೂರು (ದೂ.ಸಂ:08222-252254), ಮೈಸೂರು ಗ್ರಾಮಾಂತರ(ದೂ.ಸಂ: 0821-2567940), ನಂಜನಗೂಡು (ದೂ.ಸಂ:08221-226168), ಟಿ.ನರಸೀಪುರ(ದೂ.ಸಂ:08227-261267) ಹಾಗೂ ಪಿರಿಯಾಪಟ್ಟಣ (ದೂ.ಸಂ:08223-274742) ತಾಲೂಕುಗಳ ಶಿಶು-ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯಲ್ಲಿ ನಡೆಸಲಾಗುತ್ತಿದ್ದು, ಮೈಸೂರು ನಗರದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರ ಕಚೇರಿಯಲ್ಲಿ(ದೂ.ಸಂ: 0821-2495432) ನಡೆಯಲಿದೆ.

ಟ್ರಾನ್ಸ್-ಜೆಂಡರ್ಸ್ ಮೂಲಕವೇ ಸಮೀಕ್ಷೆ ಕಾರ್ಯ ಕೈಗೊಳ್ಳುತ್ತಿದ್ದು, ಮೂಲ ಹಂತದ ಸಮೀಕ್ಷೆಯಲ್ಲಿ 7 ವಿಭಾಗಗಳಡಿ ವೈಯಕ್ತಿಗತ ವಿವರಗಳು, ಶಿಕ್ಷಣ, ಉದ್ಯೋಗ, ವಸತಿ, ಆರೋಗ್ಯ, ಸಾಮಾಜಿಕ ಭದ್ರತೆ ಮತ್ತು ಹೆಚ್ಚುವರಿ ಮಾಹಿತಿಯನ್ನು ಸಂಗ್ರಹಿಸಲಾಗುವುದು. ಸಮೀಕ್ಷೆಯು ಬೆಳಗ್ಗೆ 10 ಗಂಟೆಯಿಂದ ಸಂಜೆ 5.30ರವರೆಗೆ ನಡೆಯಲಿದೆ ಎಂದು ಜಿಲ್ಲಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಶ್ರೀ ಬಲಿಜ ಬಾಲರಾಮಚಂದ್ರ ಮಂದಿರ ಟ್ರಸ್ಟ್ (ಅಶೋಕ ರಸ್ತೆ) ಮತ್ತು ಇತರೆ ಬಲಿಜ ಸಂಘಟನೆಗಳೊಂದಿಗೆ ಕೈವಾರ ತಾತಯ್ಯನವರ ಜಯಂತಿಯನ್ನು ವಿಜೃಂಭಣೆಯಿಂದ ಮಂಗಳವಾರ ಆಚರಿಸಲಾಯಿತು

ತಾಂತ್ರಿಕ, ಎಸ್‌ಎಪಿ ತರಬೇತಿ

ಮೈಸೂರು, ಮಾ.8- ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ವತಿಯಿಂದ ಎಲೆಕ್ಟ್ರಿಕಲ್ ಹಾಗೂ ಎಲೆಕ್ಟ್ರಾನಿಕ್ಸ್ ಪ್ರಯೋಗಾಲಯಗಳಲ್ಲಿ (ವಿದ್ಯುತ್ ಅನುಸ್ಥಾಪನ, ಕೈಗಾರಿಕಾ ನಿಯಂತ್ರಣ) ತಾಂತ್ರಿಕ ತರಬೇತಿಯನ್ನು ನೀಡಲಾಗುವುದು.

ಎಸ್.ಎ.ಪಿ(sap) ಗೆ ಎಂ.ಬಿ.ಎ, ಬಿ.ಬಿ.ಎಂ, ಬಿ.ಎ, ಬಿ.ಕಾಂ, ಎಂ.ಕಾಂ, ಮತ್ತು ಆಸಕ್ತ ಅಭ್ಯರ್ಥಿಗಳು. ಹಾಗೂ ಎಲೆಕ್ಟ್ರಿಕಲ್ ಹಾಗೂ ಎಲೆಕ್ಟ್ರಾನಿಕ್ಸ್‌ಗೆ ಬಿ.ಇ, ಡಿಪ್ಲೋಮಾ, ಐ.ಟಿ.ಐ ವಿದ್ಯಾರ್ಹತೆಯುಳ್ಳ ಅಭ್ಯರ್ಥಿಗಳು ತರಬೇತಿ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಮೊ.ನಂ: 9945442654, 9449929667, 9945479700 ಮತ್ತು 9538315175 ಅನ್ನು ಸಂಪರ್ಕಿಸಬಹುದು ಎಂದು ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ಸಿ.ಓ.ಇ ಸಂಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೇಮಕ



ಮೈಸೂರು, ಮಾ.8-ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಅಲ್ಪಸಂಖ್ಯಾತರ ವಿಭಾಗದ ಉಪಾಧ್ಯಕ್ಷರನ್ನಾಗಿ ಮೈಸೂರಿನ ಶಿವಾಜಿ ರಸ್ತೆ ನಿವಾಸಿ ಇರ್ಷಾದ್ ಹುಸೇನ್ ಖಾನ್ ಅವರನ್ನು ನೇಮಕ ಮಾಡಲಾಗಿದೆ.

ಮ್ಯಾಟ್ರಿಮೋನಿಯಲ್‌ನಲ್ಲಿ ಪರಿಚಯ ಮಾಡಿಕೊಂಡು ಮಹಿಳೆಗೆ 69 ಸಾವಿರ ವಂಚನೆ

ಮೈಸೂರು, ಮಾ.8-ಮ್ಯಾಟ್ರಿಮೋನಿಯಲ್‌ನಲ್ಲಿ ಪರಿಚಯವಾದ ವಿದೇಶಿ ವ್ಯಕ್ತಿಯೋರ್ವ ಭಾರತದಲ್ಲಿ ಹೂಡಿಕೆ ಮಾಡಲು ಬರುತ್ತಿರುವುದಾಗಿ ನಂಬಿಸಿ ಉಪನ್ಯಾಸಕಿಯೊಬ್ಬರಿಗೆ ಆನ್‌ಲೈನ್ ಮೂಲಕ 69,500 ರೂ. ವಂಚಿಸಿದ್ದಾನೆ.

ಮೈಸೂರಿನ ಉದಯಗಿರಿ ನಿವಾಸಿ ಎಂ.ಸೌಮ್ಯ(33) ಅವರಿಗೆ ಮ್ಯಾಟ್ರಿಮೋನಿಯಲ್‌ನಲ್ಲಿ ಪರಿಚಯವಾದ ವಂಚಕ. ತಾನು ಹೂಡಿಕೆ ಮಾಡಲು ಇಚ್ಛಿಸಿರುವುದಾಗಿಯೂ, ಅದಕ್ಕಾಗಿ ಅಡ್ವಾನ್ಸ್ ನೀಡಲು ಭಾರತಕ್ಕೆ ಬರುತ್ತಿರುವುದಾಗಿ ತಿಳಿಸಿದ್ದಾನೆ. ಮತ್ತೊಂದು ದಿನ ಅವರಿಗೆ ಕರೆ ಮಾಡಿದ ಆತ ಹೊರದೇಶದಿಂದ ಹಣ ತಂದಿರುವುದಕ್ಕೆ ಏರ್‌ಪೋರ್ಟ್ ಸೆಕ್ಯೂರಿಟಿ ಅವರಿಗೆ ಫೈನ್ ಕಟ್ಟಬೇಕು. ಅದಕ್ಕಾಗಿ ಭಾರತೀಯ ಕರೆನ್ಸಿ ಬೇಕಾಗಿದೆ ಎಂದು ಆನ್‌ಲೈನ್ ಮೂಲಕ 69,500 ರೂ. ವರ್ಗಾವಣೆ ಮಾಡಿಸಿಕೊಂಡು ವಂಚನೆ ಎಸಗಿದ್ದಾನೆ. ಈ ಸಂಬಂಧ ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಅತಿಥಿ ಉಪನ್ಯಾಸಕರಿಂದ ಅರ್ಜಿ ಆಹ್ವಾನ

ಮೈಸೂರು, ಮಾ.8- ಮೈಸೂರು ವಿಶ್ವವಿದ್ಯಾನಿಲಯವು ವಿವಿಧ ಅಧ್ಯಯನ ವಿಭಾಗಗಳು, ಸ್ನಾತಕೋತ್ತರ ಕೇಂದ್ರಗಳು ಮತ್ತು ಘಟಕ ಕಾಲೇಜುಗಳಲ್ಲಿನ ಹೆಚ್ಚುವರಿ ಬೋಧನಾ ಕಾರ್ಯ ಭಾರವನ್ನು ನಿರ್ವಹಿಸಲು ಅತಿಥಿ ಉಪನ್ಯಾಸಕರನ್ನು ಆಹ್ವಾನಿಸುವ ಸಂಬಂಧ ಅರ್ಹ ಅಭ್ಯರ್ಥಿಗಳನ್ನು ಮಾ.10 ರಂದು ನಡೆಯಲಿರುವ ವಾಕ್ ಇನ್ ಇಂಟರ್‌ವ್ಯೂವ್‌ಗೆ ಆಹ್ವಾನಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾನಿಲಯದ ವೆಬ್‌ಸೈಟ್ www.uni-mysore.ac.in ಸಂಪರ್ಕಿಸಬಹುದಾಗಿದ್ದು, ಆಸಕ್ತ ಅಭ್ಯರ್ಥಿಗಳು ವಿವರಗಳನ್ನು ಮತ್ತು ನಿಗದಿತ ಅರ್ಜಿ ನಮೂನೆಗಳನ್ನು ವೆಬ್‌ಸೈಟ್‌ನಿಂದ ಪಡೆಯಬಹುದು.

ನಿಗದಿಪಡಿಸಲಾದ ದಿನಾಂಕಗಳಲ್ಲಿ ವ್ಯತ್ಯಾಸವಾದಲ್ಲಿ ಬದಲಾವಣೆಯ ದಿನಾಂಕದ ಬಗ್ಗೆ ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಮಾಹಿತಿಯನ್ನು ಹೊರಡಿಸಲಾಗುವುದು ಎಂದು ವಿಶ್ವವಿದ್ಯಾನಿಲಯದ ಉಪಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ




ರಂಗಸ್ವಾಮಿ

ಮೈಸೂರು, ಮಾ.8-ರೈಲ್ವೆ ಇಲಾಖೆಯ ನಿವೃತ್ತ ಉದ್ಯೋಗಿ, ಮೈಸೂರಿನ ಅರವಿಂದನಗರದ ನಿವಾಸಿ ಎಸ್.ರಂಗಸ್ವಾಮಿ (70) ಅವರು ಬುಧವಾರ ಸಂಜೆ ನಿಧನರಾದರು.

ಶ್ರೀ ಪತಂಜಲಿ ಯೋಗ ಶಿಕ್ಷಣ ಸಂಸ್ಥೆಯಲ್ಲಿ ಕಳೆದ 13 ವರ್ಷಗಳಿಂದ ಯೋಗ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ದಿವಂಗತರು ಪತ್ನಿ ಅಲಮೇಲು, ಮೂವರು ಪುತ್ರರು, ಸೊಸೆಯಂದಿರು ಮತ್ತು ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಗುರುವಾರ (ಮಾ.9) ಮಧ್ಯಾಹ್ನ 12 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.


ಪೈಲ್ವಾನ್ ಬಟ್ಟೇರಿ ಸ್ವಾಮಿ



ಮೈಸೂರು, ಮಾ.8- ಮೈಸೂರಿನ ಪಡುವಾರಹಳ್ಳಿಯ ಪೈಲ್ವಾನ್ ಬಟ್ಟೇರಿ ಸ್ವಾಮಿ (55) ಅವರು ಇಂದು ನಿಧನರಾದರು.

ಮೃತರು ತಂದೆ-ತಾಯಿ, ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಮಾ.9) ಬೆಳಗ್ಗೆ 11.30ಕ್ಕೆ ಗೋಕುಲಂ ರುದ್ರಭೂಮಿಯಲ್ಲಿ ನೆರವೇರುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

9.3.2023 ಗುರುವಾರ, ಮಳೆ ನಕ್ಷತ್ರ: ಪೂರ್ವಾಭಾದ್ರ, 05.03.2023ರಿಂದ 17.03.2023 ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಹಸ್ತ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಧಾರ್ಮಿಕ ದತ್ತಿ ಇಲಾಖೆ :** ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ಅವಭೃತ ಸ್ನಾನ, ರಾತ್ರಿ ಪುಷ್ಪ ಪಲ್ಲಕ್ಕಿ ಉತ್ಸವ ಒಳಾಂಗಣದಲ್ಲಿ ದಿ. ಧರ್ಮರತ್ನಾಕರ ಕೆ. ನಂದಿಬಸಪ್ಪನವರ ಮಕ್ಕಳ ಸೇವಾರ್ಥ ನಂತರ ಧ್ವಜ ಅವರೋಹಣ, ಸ್ಥಳ: ದೇವಸ್ಥಾನದ ಆವರಣ, ಹಳೇ ಸಂತೇಪೇಟೆ, ಬೆಳಗ್ಗೆಯಿಂದ.

■ **ಇನ್‌ಸ್ಟಿಟ್ಯೂಟ್ ಆಫ್ ನೆಫ್ರೋಯುರಾಲಜಿ, ಮೈಸೂರು ಶಾಖೆ, ಶಾರದಾ ವಿಲಾಸ ಫಾರ್ಮಸಿ ಕಾಲೇಜು:** ವಿಶ್ವ ಕಿಡ್ನಿ ಡೇ ಅಂಗವಾಗಿ ಸೈಕ್ಲೋಥಾನ್ ಮತ್ತು ವಾಕಥಾನ್, ಉದ್ಘಾಟನೆ: ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಮುಖ್ಯ ಅತಿಥಿಗಳು: ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಡೀನ್ ಮತ್ತು ನಿರ್ದೇಶಕ ಡಾ. ಕೆಆರ್.ದಾಕ್ಷಾಯಿಣಿ, ಶಾರದಾ ವಿಲಾಸ ಫಾರ್ಮಸಿ ಕಾಲೇಜು ಪ್ರಾಂಶುಪಾಲ ಡಾ.ಹನುಮಂತಚಾರ್ ಜೋಶಿ, ಅಧ್ಯಕ್ಷತೆ: ನೆಫ್ರೋ-ಯೂರಾಲಜಿ ಸಂಸ್ಥೆ, ಮೈಸೂರು ಶಾಖೆ ಮುಖ್ಯಸ್ಥ ಡಾ.ಜೆ.ಬಿ.ನರೇಂದ್ರ, ಸ್ಥಳ: ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ, ಬೆಳಗ್ಗೆ 7ಕ್ಕೆ.

■ **ಅಭಿವೃದ್ಧಿ ಆಯುಕ್ತರು (ಕರಕುಶಲ), ಜವಳಿ ಮಂತ್ರಾಲಯ:** ಕ್ರಾಫ್ಟ್ ಬಜಾರ್, ಕರಕುಶಲ ವಸ್ತುಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10 ರಿಂದ.

■ **ಬಿಜೆಪಿ ವಿ. ಸೋಮಣ್ಣ ಬೆಂಬಲಿಗರ ಸಭೆ :** ವಿ. ಸೋಮಣ್ಣ ಬೆಂಬಲಿಗರ ಸಭೆ, ಸ್ಥಳ: ನಿತ್ಯಾನಂದ ಕಲ್ಯಾಣ ಮಂಟಪ, ಸ್ಟರ್ಲಿಂಗ್ ಟಾಕೀಸ್ ಹತ್ತಿರ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಸಾಮಾಜಿಕ ಒಳಗೊಳ್ಳುವಿಕೆ ಮತ್ತು ಹೊರಗುಳಿಯುವಿಕೆ ಅಧ್ಯಯನ ಕೇಂದ್ರ :** ಭಾರತದಲ್ಲಿ ಕೃಷಿ ಪರಿವರ್ತನೆ ಮತ್ತು ಗ್ರಾಮೀಣ ಅಭಿವೃದ್ಧಿ ಕುರಿತು ವಿಚಾರ ಸಂಕಿರಣ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ. ಮುಜಾಫರ್ ಹೆಚ್. ಅಸ್ಸಾದಿ, ಪ್ರಾಸ್ತಾವಿಕ ನುಡಿ : ಡಾ. ಕೃಷ್ಣರಾಜ್, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಸಚಿವ ಶ್ರೀಮತಿ ವಿ.ಆರ್. ಶೈಲಜಾ, ಸ್ಥಳ: ವಿಜ್ಞಾನ ಭವನ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ :** ಇಂಡಿಯಾ @ 100 ನ್ಯೂ ಕರ್ನಾಟಕ ವಿಷನ್ ಡಾಕ್ಯುಮೆಂಟ್-2047 ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ, ಉದ್ಘಾಟನೆ: ಮೈಸೂರು ವಿವಿ ಕುಲಪತಿ ಪ್ರೊ. ಮುಜಾಫರ್ ಹೆಚ್. ಅಸ್ಸಾದಿ, ಮುಖ್ಯ ಅತಿಥಿಗಳು: ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಾಜನೀಶ್, ಸಂಪನ್ಮೂಲ ವ್ಯಕ್ತಿ : ಕುಂದರನಹಳ್ಳಿ ರಮೇಶ್, ಅಧ್ಯಕ್ಷತೆ: ಪ್ರೊ.ಟಿ.ಆರ್. ಮಾರುತಿ, ಸ್ಥಳ:ಮಾನವಿಕ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಅಧ್ಯಾತ್ಮ ರಾಮಾಯಣ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಚಿನ್ಮಯ ಮಿಷನ್:** ಕೃಷ್ಣಾರಾವ್‌ಪ್ರಕಾಶ್ ಅವರಿಂದ ಪತಂಜಲಿಯ ಯೋಗ ಸೂತ್ರಗಳು-ಸಮಾಧಿ ಪಾದ ಕುರಿತು ಉಪನ್ಯಾಸ, ಸ್ಥಳ: ಮೈಸೂರು ಆಶ್ರಮದ ದತ್ತ ಸನ್ನಿಧಿ, ಯಜ್ಞಶಾಲೆ, ಗೋಕುಲಂ, ಸಂಜೆ 6ಕ್ಕೆ.

■ **ಸಂಸ್ಕೃತಿ ಟ್ರಸ್ಟ್, ಮೈಸೂರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ :** ಕನ್ನಡ ದೃಶ್ಯಕಾವ್ಯ ಕುಸುಮ, ಕನ್ನಡ ಜಾವಳಿ ಹಾಗೂ ಅಂತಃಪುರ ಗೀತೆ ಕಲಿಕಾ ಕಾರ್ಯಾಗಾರ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ, ಸಂಜೆ 5.30 ರಿಂದ ಡಾ. ಎಂ. ಶಿವಕುಮಾರ್ ಅವರಿಂದ ಕನ್ನಡ ಗೀತಾಮೃತ, ಸಂಜೆ 6.15 ರಿಂದ ಸಮಾರೋಪ ಸಮಾರಂಭ, ಉದ್ಘಾಟನೆ : ನೃತ್ಯಾಲಯ ಟ್ರಸ್ಟ್ ನಿರ್ದೇಶಕ ಡಾ. ತುಳಸಿ ರಾಮಚಂದ್ರ, ಮುಖ್ಯ ಅತಿಥಿಗಳು: ಸಂಸ್ಕೃತಿ ಚಿಂತಕ ಡಾ.ದೀಪಾ ಫಡ್ಕೆ, ಅಧ್ಯಕ್ಷತೆ: ಕನ್ನಡ ಅಭಿವೃದ್ಧಿ ಪ್ರಾಧಿಕಾರ ಕಾರ್ಯದರ್ಶಿ ಡಾ. ಸಂತೋಷ್ ಹಾನಗಲ್, ಸ್ಥಳ: 16/1, ನೃತ್ಯಗಿರಿ, ಪ್ರೀತಿ ಲೇಔಟ್, ಶ್ರೀರಾಂಪುರ, 3ನೇ ಹಂತ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ "ಒಂದೇ ಕಥೆ" ವಿವಿಧ ಮುಖ- ಬಾನುಲಿ ಸರಣೀ, ಪ್ರಸ್ತುತಿ- ಪ್ರಭುಸ್ವಾಮಿ ಮಳಿಮಠ, 6.40 ಅರಿವಿನ ಶಿಖರ- ಗಾಯನ - ನಿತಿನ್ ರಾಜಾರಾಂ ಶಾಸ್ತ್ರಿ, ಸದಾಶಿವ ಪಾಟೀಲ್, ವ್ಯಾಖ್ಯಾನ- ಡಾ. ಪ್ರದೀಪ್ ಕುಮಾರ್ ಹೆಬ್ರಿ,7.15 ಭಾವಗೀತೆ-ಎಂ.ಡಿ.ಪಲ್ಲವಿ, ಬಿ.ಆರ್. ಛಾಯಾ, 8.30 ಗೆಲುವಿನ ಗುಟ್ಟು, ಪ್ರಹಸನ-ಪ್ರಾಯೋಜಿತ ಕಾರ್ಯಕ್ರಮ, 8.45 ಹಾಡು ಹೇಳಿದ ಕಥೆ, ಪ್ರಸ್ತುತಿ- ಡಾ. ಮೈಸೂರು ಉಮೇಶ್, 10.00 ಶರತ್ ಆರ್. ರಾವ್-ಹಾಡುಗಾರಿಕೆ

ಮಧ್ಯಾಹ್ನ: 12.30 ದೇವರನಾಮ, 1.20 ಭಾವಗೀತೆಗಳು-ಮುಕ್ತಾ ಮುರಳಿ, 4.00 ಜನಪದ ಸಂಗೀತ -ಕೃಷ್ಣೇಗೌಡ ಮತ್ತು ತಂಡ, 4.30 ರಸಮಂಜರಿ, ನಮ್ಮ ವಿವಾಹಗಳ ಶಾಸ್ತ್ರ ಬದ್ಧತೆ-ಮಾತನಾಡುತ್ತಾರೆ, ವಿದ್ವಾನ್ ಗಣಪತಿ ಭಾತ್ ಸಂಕದಗುಂಡಿ, ಜಿ. ತೇಜಸ್ವಿನಿ ಅವರಿಂದ ಕಥಾವಾಚನ, 6.50 ಕೃಷಿರಂಗ-ಕಿಸಾನ್‌ವಾಣಿ, 8.00 ಯುವವಾಣಿ, 9.30 ನಾಟಕ, 10.30 ಸವಿನೆನಪು

ಶಾಸಕ ರಾಮದಾಸ್‌ರಿಂದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ

ಜ್ಞಾನ ಸಂಪಾದನೆಯಿಂದ ಮಾತ್ರವೇ ಸಾಧನೆ ಸಾಧ್ಯ: ವಿದ್ಯಾರ್ಥಿಗಳಿಗೆ ಕಿವಿಮಾತು



ಮೈಸೂರು, ಮಾ.8(ಎಂಟಿವೈ)– ಶಾಶ್ವತ ಆಸ್ತಿ, ಜ್ಞಾನ ಸಂಪಾದನೆ ಮಾಡಿಕೊಂಡರೆ ಜೀವನದಲ್ಲಿ ಏಳ್ಗೆಯೊಂದಿಗೆ ಸಾಧನೆ ಮಾಡಬಹುದಾಗಿದೆ ಎಂದು ಶಾಸಕ ಎಸ್.ಎ.ರಾಮದಾಸ್ ಅಭಿಪ್ರಾಯಪಟ್ಟಿದ್ದಾರೆ. ಮೈಸೂರಿನ ಕನಕಗಿರಿ ಶಾಲೆಯಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಕಳೆದ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ಮೈಸೂರು ದಕ್ಷಿಣ ವಲಯದ ಮೂವರು ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಹಾಗೂ ಪುರಸ್ಕಾರ ವಿತರಿಸಿ ಮಾತನಾಡಿದ ಅವರು, ಯಾರೂ ಕಸಿದುಕೊಳ್ಳಲು ಸಾಧ್ಯವಾಗದ ಸಂಪತ್ತು ಜ್ಞಾನವಾಗಿದೆ. ಹೆಚ್ಚು ಹೆಚ್ಚು ಜ್ಞಾನ ಸಂಪಾದಿಸಿದರೆ, ಅದು ಕೈ ಹಿಡಿದು ಮುನ್ನಡೆಸಿಕೊಂಡು ಹೋಗುತ್ತದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಜ್ಞಾನ ಸಂಪಾದನೆಗೆ ಆದ್ಯತೆ ನೀಡಿ, ಅಧ್ಯಯನದಲ್ಲಿ ತೊಡಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಶಾಲೆ ಅಭಿವೃದ್ಧಿ ಎಂದರೆ ಕೇವಲ ಕುರ್ಚಿ, ಬೆಂಚು ವ್ಯವಸ್ಥೆ ಮಾತ್ರವಲ್ಲ. ಮಕ್ಕಳ ಜ್ಞಾನ ಹೆಚ್ಚಿಸುವುದು ಮುಖ್ಯ. ಆದ್ದರಿಂದ ಜ್ಞಾನ ಪಡೆಯುವತ್ತ ಮಕ್ಕಳನ್ನು ಆಕರ್ಷಿಸಬೇಕು. ಜ್ಞಾನ ಎಂಬುದನ್ನು ಕೊಂಡು ತರಲು ಸಾಧ್ಯವಿಲ್ಲ, ಅದ ನೀವೇ ಸಂಪಾದಿಸಬೇಕು. ಆದ್ದರಿಂದ ಪ್ರತಿ ಕ್ಷಣವನ್ನು ಓದಿಗಾಗಿ, ಜ್ಞಾನ ಸಂಪಾದನೆಗಾಗಿ ಮುಡುಪಾಗಿಡುವಂತೆ ಸೂಚಿಸಿದರು. ಇದೇ ವೇಳೆ ಕಳೆದ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ಮೈಸೂರು ದಕ್ಷಿಣ ವಲಯದ ವಿದ್ಯಾರ್ಥಿಗಳಾದ ವಿಭು ವಿಶ್ವಕರ್ಮ, ಮಾನಸ, ಅಗ್ರಿನ್ ಎಲಿಜಬೆತ್ ಅವರಿಗೆ ಲ್ಯಾಪ್‌ಟಾಪ್ ವಿತರಿಸಲಾಯಿತು.

ಬಿಇಒ ಆರ್.ರಾಮಾರಾಧ್ಯ, ಶಿಕ್ಷಕರ ಸಂಘದ ಅಧ್ಯಕ್ಷ ಸೋಮೇಗೌಡ, ವಲಯದ ಎಲ್ಲಾ ಅನುಪಾಲನಾಧಿಕಾರಿ ಗಳು ಹಾಗೂ ಶಿಕ್ಷಕವೃಂದ, ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕನಕಗಿರಿ ಸರ್ಕಾರಿ ಶಾಲೆಗೆ 50 ಡೆಸ್ಕ್‌ಗಳನ್ನು ಶಾಲಾ ಮುಖ್ಯ ಶಿಕ್ಷಕರಿಗೆ ಇದೇ ವೇಳೆ ಹಸ್ತಾಂತರಿಸಿದರು.

ಮತದಾನ ಕುರಿತು ವರ್ಚುವಲ್ ಮೂಲಕ ಹಿರಿಯರೊಂದಿಗೆ ಜಿಲ್ಲಾಧಿಕಾರಿ ಸಂವಾದ

ಮೈಸೂರು ಜಿಲ್ಲೆಯಲ್ಲಿ ಮತದಾನ ಹೆಚ್ಚಳಕ್ಕೆ ವಿನೂತನ ಕ್ರಮ



ಮೈಸೂರು, ಮಾ.8(ಆರ್‌ಕೆ)– ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಮತದಾನದ ಪ್ರಮಾಣ ಹೆಚ್ಚಿಸಲು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುತ್ತಿರುವ ಮೈಸೂರು ಜಿಲ್ಲಾಡಳಿತವು, ಶತಾಯುಷಿಗಳು ಹಾಗೂ ಹಿರಿಯ ನಾಗರಿಕರೊಂದಿಗೆ ಇಂದು ವರ್ಚುವಲ್ ಮೂಲಕ ಸಂವಾದ ನಡೆಸಿತು.

ತಮ್ಮ ಕಚೇರಿಯಲ್ಲಿ ವರ್ಚುವಲ್ ಮೂಲಕ ಸಂಪರ್ಕಕ್ಕೆ ಬಂದ ಹಿರಿಯರೊಂದಿಗೆ ಸಮಾಲೋಚಿಸಿದ ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ಅವರ ಆರೋಗ್ಯ ವಿಚಾರಿಸಿ, ಚುನಾವಣೆಯಲ್ಲಿ ಮತದಾನ ಮಾಡಲು ಬೇರೆಯವರ ನೆರವು ಪಡೆಯುವಂತೆ ಮನವಿ ಮಾಡಿದರಲ್ಲದೆ, ಮತಗಟ್ಟೆಗಳಲ್ಲಿ ಶತಾಯುಷಿಗಳಿಗೆ ಮತ ಚಲಾಯಿಸಲು ಮಾಡಿರುವ ವ್ಯವಸ್ಥೆ ಬಗ್ಗೆಯೂ ವಿವರಿಸಿದರು.

ಶತಾಯುಷಿಗಳ ಪರವಾಗಿ ಅವರ ಕುಟುಂಬದವರು ಜಿಲ್ಲಾಧಿಕಾರಿಗಳೊಂದಿಗೆ ಮಾತನಾಡಿ, ವಾಹನಗಳಲ್ಲಿ ಕರೆತಂದು ಹಿರಿಯರಿಂದ ಮತದಾನ ಮಾಡಿಸುವುದಾಗಿ ತಿಳಿಸಿದರು. ಮತಗಟ್ಟೆಯಲ್ಲಿ ರ್‍ಯಾಂಪ್, ಕುಡಿಯುವ ನೀರು, ವಿಶ್ರಾಂತಿಗೆ ಆಸನದ ವ್ಯವಸ್ಥೆ ಮಾಡಲಾಗಿದ್ದು, ಮತಗಟ್ಟೆ ಅಧಿಕಾರಿಗಳು ಅಗತ್ಯ ಬಿದ್ದರೆ ಹೆಚ್ಚುವರಿ ಸೌಲಭ್ಯ ಒದಗಿಸುತ್ತಾರೆ. ಅದನ್ನು ಬಳಸಿಕೊಂಡು ತಮ್ಮ ಸಂವಿಧಾನದತ್ತ ಹಕ್ಕನ್ನು ಚಲಾಯಿಸುವಂತೆ ಡಾ. ರಾಜೇಂದ್ರ ಮನವಿ ಮಾಡಿದರು.

ಈ ಸಂದರ್ಭ ಸುದ್ದಿಗಾರರೊಂದಿಗೆ ಮಾತನಾಡಿದ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆಯಲ್ಲಿ 80 ವರ್ಷ ಮೇಲ್ಪಟ್ಟ 84,992 ಮಂದಿ, 90 ವರ್ಷ ದಾಟಿದ 16,900 ಹಾಗೂ 100 ವರ್ಷ ಪೂರೈಸಿದ 1,057 ಮತದಾರರಿದ್ದಾರೆ. ಈ ಇಳಿವಯಸ್ಸಿನಲ್ಲೂ ಮತದಾನ ಮಾಡಲು ಉತ್ಸುಕತೆ ಹೊಂದಿರುವುದು ಕಂಡುಬರುತ್ತಿದೆ. ಕೆಲವರು ವಯೋಸಹಜ ಖಾಯಿಲೆಯಿಂದಾಗಿ ಹಾಸಿಗೆ ಹಿಡಿದಿದ್ದರೂ ಮತದಾನದಲ್ಲಿ ಭಾಗವಹಿಸುವ ಇಂಗಿತ ವ್ಯಕ್ತಪಡಿಸಿದ್ದಾರೆ ಎಂದರು.

ಗ್ರಾಮಾಂತರ ಪ್ರದೇಶದ ಶತಾಯುಷಿಗಳಾದ ನಾಗೇಗೌಡ, ಶಿವಮ್ಮ, ಸಿದ್ದಮ್ಮ, ಅಕ್ಕಯ್ಯಮ್ಮ, ವೀರರಾಜ ಅರಸ್, ಸಣ್ಣಮ್ಮ ಸೇರಿದಂತೆ ಹಲವರು ಸಂವಾದದಲ್ಲಿ ಪಾಲ್ಗೊಂಡು ಈ ಬಾರಿ ಮತದಾನ ಮಾಡುವುದಾಗಿ ಹೇಳಿದ್ದಾರೆ ಎಂದು ಡಾ. ರಾಜೇಂದ್ರ ತಿಳಿಸಿದರು.

ಬೀದಿ ನಾಟಕ, ಜಾಥಾ, ಜಾನಪದ ಕಾರ್ಯಕ್ರಮಗಳ ಮೂಲಕ ಜಿಲ್ಲೆಯಾದ್ಯಂತ ಮತದಾನದ ಮಹತ್ವ ಕುರಿತಂತೆ ಜನರಲ್ಲಿ ಅರಿವು ಮೂಡಿಸಿ ಈ ಬಾರಿ ಹೆಚ್ಚಿನ ಮತದಾನವಾಗಲು ಪ್ರಯತ್ನಿಸಲಾಗುವುದು ಎಂದು ನುಡಿದರು.



ಜಯಪುರ ಹೋಬಳಿ ರೈತ ಸಂಪರ್ಕ ಕೇಂದ್ರ ಕಟ್ಟಡದ ಗುದ್ದಲಿ ಪೂಜೆಯನ್ನು ಚಾಮುಂಡೇಶ್ವರಿ ಕ್ಷೇತ್ರದ ಶಾಸಕರಾದ ಜಿ.ಟಿ ದೇವೇಗೌಡರು ನೆರವೇರಿಸಿದರು ಈ ಸಂದರ್ಭದಲ್ಲಿ ಜಯಪುರ ಗ್ರಾಮ ಪಂಚಾಯತಿ ಅಧ್ಯಕ್ಷೆ ಜಯಮ್ಮ, ಉಪಾಧ್ಯಕ್ಷ ಬಿ.ಡಿ. ಬಸವಣ್ಣ, ಸಹಾಯಕ ಕೃಷಿ ನಿರ್ದೇಶಕರಾದ ಎಸ್.ಬಿ.ಮದುಲತಾ, ಕೃಷಿ ಅಧಿಕಾರಿ ಕಾರ್ತಿಕ್, ಜಯಪುರ ಹೋಬಳಿ ವಿಕಾಸ ವೇದಿಕೆ ಅಧ್ಯಕ್ಷ ದಾರಿಪುರ ಡಿ.ಚಂದ್ರಶೇಖರ್, ಮಾಜಿ ಅಧ್ಯಕ್ಷ ಜೆ.ಎಂ. ಜವರನಾಯಕ, ಅಬ್ದುಲ್ ಮುತಾಲಿಫ್, ಸದಸ್ಯರುಗಳಾದ ಮರಿಸಿದ್ದೇಗೌಡ, ಕೆಲ್ಲಹಳ್ಳಿ ಬೈರೇಶ್, ಮಹದೇವಯ್ಯ ರೇಣುಕಾ, ಮುಖಂಡರುಗಳಾದ ವಕೀಲ ತಿಮ್ಮೇಗೌಡ, ಹಾರೋಹಳ್ಳಿ ಮಹದೇವಪ್ಪ, ಜಿ.ಜಿ.ಪುರ ಪ್ರಕಾಶ್, ಎಂ.ರಂಗಸ್ವಾಮಿ, ಮಹದೇವಪುರ ಪ್ರಕಾಶ್, ಗೋವಿಂದ ನಾಯಕ, ಮದ್ದೂರು ಶಿವಣ್ಣ, ಹಾರೋಹಳ್ಳಿ ಮಂಚಯ್ಯ, ಜಯಪುರ ಸಣ್ಣಸ್ವಾಮಿ ಇತರ ಮುಖಂಡರು ಈ ಸಂದರ್ಭದಲ್ಲಿ ಹಾಜರಿದ್ದರು.

ಮಹಿಳಾ ಸಮುದಾಯ ತಮಗೆ ಜನ್ಮದತ್ತವಾಗಿ ಬಂದ ಸದೃಢ ಮನಸ್ಸು ಕಳೆದುಕೊಳ್ಳಬಾರದು

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್



ಮೈಸೂರು, ಮಾ.8(ಪಿಎಂ)– ಮಹಿಳಾ ಸಮುದಾಯ ತಮಗೆ ಜನ್ಮದತ್ತವಾಗಿಯೇ ಬಂದ ಸದೃಢ ಮನಸ್ಸು ಕಳೆದುಕೊಳ್ಳುವ ಸನ್ನಿವೇಶ ಹಿಮ್ಮೆಟ್ಟಿಸಿ ಮುನ್ನಡೆಯಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್ ಹೇಳಿದರು.

ಮೈಸೂರಿನ ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆಯಲ್ಲಿ ಬುಧವಾರ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಆಸ್ಪತ್ರೆಯಲ್ಲಿ ಅಸ್ತಿತ್ವಕ್ಕೆ ತಂದಿರುವ ಸುಯೋಗ್ ವುಮೆನ್ಸ್ ಹೆಲ್ತ್ ಕ್ಲಬ್ ಉದ್ಘಾಟನೆ ನೆರವೇರಿಸಿ, ಆಸ್ಪತ್ರೆಯಲ್ಲಿ ವರ್ಷವಿಡೀ ಹಮ್ಮಿಕೊಂಡಿರುವ ಮಹಿಳೆಯರ ಆರೋಗ್ಯ ತಪಾಸಣಾ ಕಾರ್ಯಕ್ರಮಕ್ಕೂ ಚಾಲನೆ ನೀಡಿ ಅವರು ಮಾತನಾಡಿದರು.

ಮಹಿಳೆಯರು ಹುಟ್ಟಿನಿಂದಲೇ ಸದೃಢ ಮನುಸ್ಸುಳ್ಳವರಾಗಿರುತ್ತಾರೆ. ಆದರೂ ಪರಿಸರದ ಪ್ರಭಾವದಿಂದ ಕೀಳರಿಮೆಗೀಡಾಗುತ್ತಾರೆ. ಅಂತಹ ಪರಿಸರವನ್ನು ಹಿಮ್ಮೆಟ್ಟಿಸಿ ಜನ್ಮದತ್ತವಾಗಿ ಬಂದ ಸದೃಢ ದೇಹ ಮತ್ತು ಮನಸ್ಸನ್ನು ವಿಕಾಸಗೊಳಿಸುವ ದಿಕ್ಕಿನಲ್ಲಿ ಮುನ್ನಡೆಯಬೇಕು. ಅಂತಹ ಅವಕಾಶವನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಇದೇ ಸಂದರ್ಭದಲ್ಲಿ ಮಹಿಳೆಯರಿಗೆ ಆಸ್ಪತ್ರೆಯಲ್ಲಿ ತಂದಿರುವ ವಿಶೇಷ ಆರೋಗ್ಯ ಪ್ಯಾಕೇಜ್ ಅನ್ನು ಸೀಮಾ ಲಾಟ್ಕರ್ ಬಿಡುಗಡೆ ಮಾಡಿದರು. ಮುಟ್ಟಿನ ಸಮಸ್ಯೆಗಳ ಕುರಿತು ಆಸ್ಪತ್ರೆಯ ಪ್ರಸೂತಿ ಮತ್ತು ಸ್ತ್ರೀ ಸಂತಾನಾಂಗ ತಜ್ಞೆ ಡಾ.ಗೀತಾ, ಸ್ತ್ರೀಯರಲ್ಲಿ ಸ್ತನ ಮತ್ತು ಗರ್ಭಕೋಶದ ಕ್ಯಾನ್ಸರ್ ಕುರಿತು ವೈದ್ಯೆ ಡಾ.ಸ್ವಪ್ನಾ ಉಪನ್ಯಾಸ ನೀಡಿ ಮಹಿಳೆಯರ ಪ್ರಶ್ನೆಗಳಿಗೆ ಉತ್ತರಿಸಿದರು.

ಇದಕ್ಕೂ ಮುನ್ನ ವೈದ್ಯಕೀಯ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಪ್ರಸೂತಿ ತಜ್ಞೆ ಡಾ.ಗೀತಾ, ಶುಶ್ರೂಷಕಿ ರೇಷ್ಮಾ, ಆರೋಗ್ಯ ಸ್ವಚ್ಛತಾ ಕಾರ್ಯಕರ್ತೆ ರುಕ್ಮಿಣಿ, ಆಡಳಿತ ಸಹಾಯಕಿ ಮಹಾಲಕ್ಷ್ಮೀ, ಸುಯೋಗ್ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರಾದ ನಾಗಮಣಿ, ಸಮಾಜ ಸೇವಕಿಯರಾದ ಪ್ರೇಮ ಶ್ರೀಕಂಠಸ್ವಾಮಿ, ಉಷಾ ಅವರನ್ನು ಸುಯೋಗ್ ಆಸ್ಪತ್ರೆಯ ನಿರ್ದೇಶಕಿ ಸುಧಾ ಯೋಗಣ್ಣ ಸನ್ಮಾನಿಸಿದರು.

ಸುಯೋಗ್ ಆಸ್ಪತ್ರೆ ಸಿಇಓ ಡಾ.ಮಂಜುನಾಥ್ ಮಹಿಳೆಯರ ವಿಶೇಷ ಆರೋಗ್ಯ ಪ್ಯಾಕೇಜ್ ಬಗ್ಗೆ ಮಾಹಿತಿ ನೀಡಿದರು. ಮೈಸೂರು ವೈದ್ಯಕೀಯ ಕಾಲೇಜಿನ ಡೀನ್ ಮತ್ತು ನಿರ್ದೇಶಕಿ ಡಾ.ದಾಕ್ಷಾಯಿಣಿ ಅಧ್ಯಕ್ಷತೆ ವಹಿಸಿದ್ದರು. ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ವ್ಯವಸ್ಥಾಪಕ ನಿರ್ದೇಶಕ ಡಾ.ಸುಯೋಗ್ ಯೋಗಣ್ಣ, ನಿರ್ದೇಶಕಿ ಡಾ.ಸೀಮಾ ಯೋಗಣ್ಣ, ಸುಯೋಗ್ ನರ್ಸಿಂಗ್ ಕಾಲೇಜಿನ ಸಿಇಓ ಡಾ.ರಾಜೇಂದ್ರ ಪ್ರಸಾದ್ ಮತ್ತಿತರರು ಹಾಜರಿದ್ದರು.



ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ರಾಮಕೃಷ್ಣನಗರದ ನಿವಾಸಿಗಳು ನಗರ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಲತಾ ಚಿಕ್ಕಣ್ಣ, ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ರಾಧಾ, ವಕೀಲೆ ಕುಮಾರಿ ಕವಿತಾ ಕಳೆ, ಕೂರ್ಗಳ್ಳಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷೆ ನಾಗರತ್ನ, ವಾರ್ಡ್ ನಂ.58ರ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಮೇರಿ ಅವರನ್ನು ಅಭಿನಂದಿಸಿದರು. ಈ ವೇಳೆ ಕಸ್ತೂರಿ ಶರವಣೆ, ನಾಗಮ್ಮ, ಉಮಾ ಗಣೇಶ್, ಪದ್ಮಾವತಮ್ಮ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಸಿದ್ದರಾಮಯ್ಯರ ದಶಪಥ ರಸ್ತೆ ಪರಿಶೀಲನೆ ಕಾರ್ಯಕ್ರಮ ರದ್ದು



ಮೈಸೂರು. ಮಾ.8– ನಾಳೆ(ಗುರುವಾರ) ಮೈಸೂರು–ಬೆಂಗಳೂರು ದಶಪಥ ಹೆದ್ದಾರಿ ಪರಿಶೀಲನೆ ನಡೆಸುವುದಾಗಿ ಘೋಷಿಸಿದ್ದ ವಿಧಾನಸಭೆ ವಿಪಕ್ಷ ನಾಯಕರೂ ಆದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಕಾರ್ಯಕ್ರಮವನ್ನು ರದ್ದುಪಡಿಸಿದ್ದಾರೆಂದು ಅವರ ವಿಶೇಷಾಧಿಕಾರಿ ಎಂ.ವೆಂಕಟೇಶ್ ತಿಳಿಸಿದ್ದಾರೆ.

ಸಿದ್ದರಾಮಯ್ಯ ಅವರ ಪ್ರವಾಸ ಕಾರ್ಯಕ್ರಮವನ್ನು ಬಿಡುಗಡೆ ಮಾಡಿರುವ ಅವರು, ಎಐಸಿಸಿ ಸ್ಕ್ರೀನಿಂಗ್ ಕಮಿಟಿ ಸಭೆ ಮಾ.9ರಂದು ಕೂಡ ಮುಂದುವರೆದಿರುವ ಕಾರಣ ಸಿದ್ದರಾಮಯ್ಯ ಹೆದ್ದಾರಿ ವೀಕ್ಷಣೆ ಕಾರ್ಯಕ್ರಮ ರದ್ದಾಗಿದೆ ಎಂದು ತಿಳಿಸಿದ್ದಾರೆ.

ಮೈಸೂರು–ಬೆಂಗಳೂರು ದಶಪಥ ರಸ್ತೆ ನಿರ್ಮಾಣಕ್ಕೆ ಕಾಂಗ್ರೆಸ್ ಸರ್ಕಾರವೇ ಕಾರಣ. ತಾವು ಮುಖ್ಯಮಂತ್ರಿಗಳಾಗಿದ್ದ ವೇಳೆ ಲೋಕೋಪಯೋಗಿ ಸಚಿವರಾಗಿದ್ದ ಡಾ.ಎಚ್.ಸಿ.ಮಹದೇವಪ್ಪ ಅವರು ರಾಜ್ಯ ಹೆದ್ದಾರಿಯಾಗಿದ್ದ ಮೈಸೂರು–ಬೆಂಗಳೂರು ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಮಾಡಬೇಕು ಹಾಗೂ ದಶಪಥ ರಸ್ತೆ ನಿರ್ಮಾಣವಾಗಬೇಕು ಎಂದು ಡಾ.ಮನಮೋಹನ್ ಸಿಂಗ್ ನೇತೃತ್ವದ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದರು. ಆಗ ಭೂಸಾರಿಗೆ ಹಾಗೂ ರಾಷ್ಟ್ರೀಯ ಹೆದ್ದಾರಿ ಸಚಿವರಾಗಿದ್ದ ದಿ.ಆಸ್ಕರ್ ಫರ್ನಾಂಡಿಸ್ ಅವರು ಈ ಯೋಜನೆಗೆ ಮಂಜೂರಾತಿಯನ್ನು ನೀಡಿದರೂ ಹೀಗಾಗಿ ತಾವು ಮಾ.9ರಂದು ದಶಪಥ ರಸ್ತೆ ಪರಿಶೀಲನೆ ನಡೆಸುವುದಾಗಿ ಸಿದ್ದರಾಮಯ್ಯ ಘೋಷಿಸಿದ್ದರು.

ಗೃಹಿಣಿಗೆ ಮತ್ತು ಬರುವ ಪಾನೀಯ ಕುಡಿಸಿ ಖಾಸಗಿ ಫೋಟೋ ತೆಗೆದು ಬ್ಲಾಕ್‌ಮೇಲ್

ಆರೋಪಿ ಬಂಧನ

ಮೈಸೂರು, ಮಾ.8(ಎಸ್‌ಪಿಎನ್)–ಪಕ್ಕದ ಮನೆ ಗೃಹಿಣಿಗೆ ಮತ್ತು ಬರುವ ಜೂಸ್ ಕುಡಿಸಿ, ಆಕೆಯ ಖಾಸಗಿ ಫೋಟೋ ಕ್ಲಿಕ್ಕಿಸಿಕೊಂಡು ತನ್ನ ವಾಟ್ಸಾಪ್ ಸ್ಟೇಟಸ್‌ಗೆ ಹಾಕಿಕೊಂಡ ಆರೋಪದ ಮೇರೆಗೆ ವ್ಯಕ್ತಿಯೋರ್ವನನ್ನು ಮೈಸೂರು ಜಿಲ್ಲಾ ಸೆನ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನಂಜನಗೂಡು ತಾಲೂಕು ಹುಲ್ಲಹಳ್ಳಿ ಹೋಬಳಿ ಗ್ರಾಮವೊಂದರ ನಿವಾಸಿ ಜಯಕುಮಾರ್ ಎಂಬಾತನೇ ಬಂಧಿತನಾಗಿದ್ದು, ಈತ ತನ್ನ ಪಕ್ಕದ ಮನೆಯವರೊಂದಿಗೆ ಸಲುಗೆಯಿಂದಿದ್ದ. ಕಳೆದ 2 ವರ್ಷದಿಂದ ಗೃಹಿಣಿಯ ಗಂಡ–ಮಕ್ಕಳು ಇಲ್ಲದ ವೇಳೆಯಲ್ಲೂ ಕೂಡ ಆಕೆಯ ಮನೆಗೆ ಹೋಗುತ್ತಿದ್ದ. ಅಲ್ಲದೇ ಗೃಹಿಣಿ ಮತ್ತು ಈತ ಪರಸ್ಪರ ಮೊಬೈಲ್‌ನಲ್ಲಿ ಸಲುಗೆಯಿಂದ ಮಾತನಾಡುತ್ತಿದ್ದರು. ಒಮ್ಮೆ ಜಯಕುಮಾರ್ ಗೃಹಿಣಿಗೆ ನೀಡಿದ ಜ್ಯೂಸ್‌ನಲ್ಲಿ ಮತ್ತು ಬರುವ ಔಷಧಿ ಬೆರೆಸಿದ್ದ ಎಂದು ಆರೋಪಿಸಲಾಗಿದ್ದು, ಆಕೆ ಪ್ರಜ್ಞಾಹೀನಳಾದಾಗ ಆಕೆಯ ಮೊಬೈಲ್‌ನಲ್ಲೇ ಖಾಸಗಿ ಫೋಟೋ ತೆಗೆದು, ಅದನ್ನು ತನ್ನ ಮೊಬೈಲ್‌ಗೆ ವಾಟ್ಸಾಪ್ ಮಾಡಿಕೊಂಡಿದ್ದ ಎಂದು ಗೃಹಿಣಿ ನೀಡಿದ ದೂರಿನಲ್ಲಿ ತಿಳಿಸಿದ್ದಾಳೆ.

ತಾನು ಹಾಗೂ ಮಕ್ಕಳು ಇಲ್ಲದಿದ್ದಾಗ ಜಯಕುಮಾರ್ ಮನೆಗೆ ಬರುವ ವಿಚಾರ ಗೊತ್ತಾಗಿ ಗೃಹಿಣಿಯ ಪತಿ ಜಯಕುಮಾರ್‌ನನ್ನು ಮನೆಗೆ ಸೇರಿಸಬಾರದು ಎಂದು ತನ್ನ ಪತ್ನಿಗೆ ತಾಕೀತು ಮಾಡಿದ ಹಿನ್ನೆಲೆಯಲ್ಲಿ ಆಕೆ ಜಯಕುಮಾರ್‌ನ ಸಹವಾಸವನ್ನು ಬಿಟ್ಟಿದ್ದಾಳೆ. ಒಂದು ದಿನ ಗೃಹಿಣಿ ಮನೆಗೆ ಬಂದ ಆತ, ಮೊದಲಿನಂತೆಯೇ ತನ್ನ ಜೊತೆ ಸಲುಗೆಯಿಂದ ಇರಬೇಕು. ಇಲ್ಲದಿದ್ದರೆ ಖಾಸಗಿ ಫೋಟೋಗಳನ್ನು ಎಲ್ಲರಿಗೂ ಕಳುಹಿಸಿ ಮನೆಯ ಮಾನ–ಮರ್ಯಾದೆ ತೆಗೆಯುತ್ತೇನೆ ಎಂದು ಹೆದರಿಸಿದ್ದನಂತೆ. ಈ ಮಧ್ಯೆ ಜನವರಿ 23ರಂದು ಜಯಕುಮಾರ್ ತನ್ನ ವಾಟ್ಸಾಪ್ ಸ್ಟೇಟಸ್‌ನಲ್ಲಿ ಗೃಹಿಣಿಯ ಖಾಸಗಿ ಫೋಟೋಗಳನ್ನು ಹಾಕಿಕೊಂಡಿದ್ದು, ಈ ಸಂಬಂಧ ಆಕೆ ನೀಡಿದ ದೂರನ್ನು ದಾಖಲಿಸಿಕೊಂಡ ಪೊಲೀಸರು, ಜಯಕುಮಾರ್‌ನನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ಆತನನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

ಮೈಸೂರು ರೇಸ್‌ಕೋರ್ಸ್‌ನಲ್ಲಿ ಅಕ್ರಮ ಬೆಟ್ಟಿಂಗ್: ಆರು ಜನ ಬುಕ್ಕಿಗಳ ಬಂಧನ

4.11 ಲಕ್ಷ ರೂ. ಹಣ ವಶಕ್ಕೆ

ಮೈಸೂರು, ಮಾ.8– ಮೈಸೂರು ರೇಸ್‌ಕೋರ್ಸ್‌ನಲ್ಲಿ ಕಾನೂನುಬಾಹಿರವಾಗಿ ಬೆಟ್ಟಿಂಗ್ ಕಟ್ಟಿಸಿಕೊಂಡು ಜೂಜಾಡುತ್ತಿದ್ದ ಆರು ಮಂದಿ ಬುಕ್ಕಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿ 4.11 ಲಕ್ಷ ರೂ. ವಶಪಡಿಸಿಕೊಂಡಿದ್ದಾರೆ.

ಮೈಸೂರಿನ ವಿದ್ಯಾನಗರದ ಎಂ.ಎಸ್.ಶ್ರೀನಿವಾಸ(46), ಇಟ್ಟಿಗೆಗೂಡಿನ ರವಿಕುಮಾರ್(43), ರಾಮಕೃಷ್ಣನಗರದ ಮಹೇಶ್(46), ತಿ.ನರಸೀಪುರ ತಾಲೂಕು ನಿಲಸೋಗೆ ಗ್ರಾಮದ ರಾಜೇಂದ್ರ ಪ್ರಸಾದ್(39), ಮಂಡ್ಯ ಟೌನ್‌ನ ಸುಭಾಷ್‌ನಗರದ ಅನಿಲ್ ಕುಮಾರ್(36), ಪಾಂಡವಪುರ ತಾಲೂಕು ಚಂದ್ರೆ ಗ್ರಾಮದ ಮೋಹನ್ ಕುಮಾರ್(47) ಬಂಧಿತ ಆರೋಪಿಗಳು.

ರೇಸ್‌ಕೋರ್ಸ್‌ನಲ್ಲಿ ಕೌಂಟರ್‌ನಿಂದ ಹೊರಗೆ ಕೆಲವರು ಕಾನೂನು ಬಾಹಿರವಾಗಿ ಬೆಟ್ಟಿಂಗ್ ಕಟ್ಟಿಸಿಕೊಂಡು ಜೂಜಾಡುತ್ತಿದ್ದಾರೆ. ಇದರಿಂದ ರೇಸ್ ಕೋರ್ಸ್ ಹಾಗೂ ಸರ್ಕಾರಕ್ಕೆ ನಷ್ಟ ಉಂಟಾಗುತ್ತಿದೆ ಎಂಬ ಮಾಹಿತಿ ಪಡೆದ ಸಿಸಿಬಿ ಎಸಿಪಿ ಎಸ್.ಎನ್.ಸಂದೇಶ್ ಕುಮಾರ್ ಅವರು ಈ ವಿಷಯವನ್ನು ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಶ್ರೀಮತಿ ಜಾಹ್ನವಿ ಅವರಿಗೆ ತಿಳಿಸಿ, ತಮ್ಮ ಸಿಬ್ಬಂದಿಗೆ ನೀಡಿದ ಮಾರ್ಗದರ್ಶನದನ್ವಯ ಸಿಸಿಬಿ ಇನ್ಸ್‌ಪೆಕ್ಟರ್ ಅನೂಪ್ ಮಾದಪ್ಪ, ಸಬ್ ಇನ್ಸ್‌ಪೆಕ್ಟರ್‌ಗಳಾದ ರಾಜು ಕೋನಕೇರಿ, ಮಾರುತಿ ಅಂತರಗಟ್ಟಿ, ಎಎಸ್‌ಐಗಳಾದ ರಾಜು, ಟಿ.ಸತೀಶ್, ಸಿಬ್ಬಂದಿಗಳಾದ ಜೋಸೆಫ್ ನರೋನಾ, ಲಕ್ಷ್ಮೀಕಾಂತ, ಮಂಜುನಾಥ, ಮಹೇಶ, ಮೋಹನಾರಾಧ್ಯ, ಅರುಣ್ ಕುಮಾರ್, ರಘು, ಸಭಾನಲ್ಲ ಅವರನ್ನೊಳಗೊಂಡ ತಂಡ ಮಾರ್ಚ್ 5ರಂದು ರೇಸ್‌ಕೋರ್ಸ್‌ನಲ್ಲಿ ಕಾರ್ಯಾಚರಣೆಗಿಳಿದಿದೆ.

ಈ ವೇಳೆ ಕೌಂಟರ್‌ನಿಂದ ಸ್ವಲ್ಪ ದೂರದಲ್ಲಿ ಕೆಲವರು ಕೈಯ್ಯಲ್ಲಿ ರಿಜಿಸ್ಟರ್‌ವೊಂದನ್ನು ಹಿಡಿದುಕೊಂಡು ಬೆಟ್ಟಿಂಗ್ ಕಟ್ಟಿಸಿಕೊಳ್ಳುತ್ತಿರುವುದು ಕಂಡು ಬಂದಿದೆ. ಎಲ್ಲಾ ಆರು ಆರೋಪಿಗಳು ಪ್ರತ್ಯೇಕ ಸ್ಥಳಗಳಲ್ಲಿ ನಿಂತು ಬೆಟ್ಟಿಂಗ್ ಕಟ್ಟಿಸಿಕೊಳ್ಳುತ್ತಿರುವುದನ್ನು ಗಮನಿಸಿದ ಸಿಸಿಬಿ ಸಿಬ್ಬಂದಿ, ತಾವು ಬೆಟ್ಟಿಂಗ್ ಕಟ್ಟುವ ಸೋಗಿನಲ್ಲಿ ಅವರ ಬಳಿ ಹೋಗಿ ನೋಡಿದಾಗ ಆರೋಪಿಗಳು ಹಣ ಪಡೆದು ರಿಜಿಸ್ಟರ್‌ನಲ್ಲಿ ಹಣ ಕಟ್ಟಿದವರ ಹೆಸರು ಮತ್ತು ಕುದುರೆಯ ಹೆಸರನ್ನು ನಮೂದಿಸಿಕೊಳ್ಳುತ್ತಿರುವುದನ್ನು ಗಮನಿಸಿ ತಕ್ಷಣವೇ ಆರು ಮಂದಿಯನ್ನು ಬಂಧಿಸಿ ಅವರ ಬಳಿ ಇದ್ದ 4,11,130 ರೂ. ವಶಪಡಿಸಿಕೊಂಡು ನಜರ್‌ಬಾದ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಸಿಸಿಬಿ ಪೊಲೀಸರ ಈ ಕಾರ್ಯವನ್ನು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಶ್ಲಾಘಿಸಿದ್ದಾರೆ.

ಮಾ.11ರಂದು ಶರಣರ ಕಾಯಕ, ರಾಷ್ಟ್ರೀಯ ಶಿಕ್ಷಣ ನೀತಿ ಕುರಿತು ವಿಚಾರ ಸಂಕಿರಣ



ಮೈಸೂರು,ಮಾ.8(ಪಿಎಂ)– ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮೈಸೂರು ನಗರ ಘಟಕದ ವತಿಯಿಂದ ಮಾ.11ರಂದು '12ನೇ ಶತಮಾನದ ದೇಶೀ ಜ್ಞಾನ–ಕಾಯಕ', '21ನೇ ಶತಮಾನದ ರಾಷ್ಟ್ರೀಯ ಶಿಕ್ಷಣ ನೀತಿ' ಮತ್ತು 'ಶರಣರ ಚಳುವಳಿ–ಒಂದು ರಾಷ್ಟ್ರೀಯ ಚಳುವಳಿ' ಕುರಿತಂತೆ ರಾಷ್ಟ್ರೀಯ ವಿಚಾರ ಸಂಕಿರಣ ಆಯೋಜಿಸಲಾಗಿದೆ ಎಂದು ಪರಿಷತ್ತಿನ ನಗರ ಘಟಕದ ಅಧ್ಯಕ್ಷ ಮ.ಗು.ಸದಾನಂದಯ್ಯ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ವಿಚಾರ ಸಂಕಿರಣ ನಡೆಯಲಿದೆ. ಅಂದು ಬೆಳಗ್ಗೆ 10.30ಕ್ಕೆ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಹಿರಿಯ ಪ್ರಚಾರಕ ಸು.ರಾಮಣ್ಣ ವಿಚಾರ ಸಂಕಿರಣ ಉದ್ಘಾಟಿಸಿ, 'ರಾಷ್ಟ್ರೀಯತೆ–ಪ್ರಸ್ತುತತೆ' ಕುರಿತು ಮಾತನಾಡಲಿದ್ದಾರೆ ಎಂದರು.

ಬಳಿಕ ಭಾರತ ಸರ್ಕಾರದ ಕೆಪಾಸಿಟಿ ಬಿಲ್ಡಿಂಗ್ ಕಮಿಷನ್‌ನ ಮಾನವ ಸಂಪನ್ಮೂಲಗಳ ಸದಸ್ಯ ಡಾ.ಬಾಲಸುಬ್ರಹ್ಮಣ್ಯಂ ಅಧ್ಯಕ್ಷತೆಯಲ್ಲಿ ಗೋಷ್ಠಿ ನಡೆಯಲಿದ್ದು, '12ನೇ ಶತಮಾನದ ದೇಶೀಜ್ಞಾನ–ಕಾಯಕ', '21ನೇ ಶತಮಾನದ ರಾಷ್ಟ್ರೀಯ ಶಿಕ್ಷಣ ನೀತಿ' ಕುರಿತಂತೆ ವಿಧಾನಪರಿಷತ್ ಮಾಜಿ ಸದಸ್ಯ ಅರುಣ ಶಹಾಪುರ, ರಂಗಕರ್ಮಿ ಪ್ರೊ.ಹೆಚ್.ಎಸ್.ಉಮೇಶ್, 'ಶರಣರ ಚಳವಳಿ–ಒಂದು ರಾಷ್ಟ್ರೀಯ ಚಳುವಳಿ' ಕುರಿತಂತೆ ಸಾಹಿತಿ ಡಾ.ಬಿ.ವಿ. ವಸಂತ ಕುಮಾರ್ ವಿಚಾರ ಮಂಡಿಸಲಿದ್ದಾರೆ ಎಂದು ತಿಳಿಸಿದರು.

ಶರಣರ ಅಂದಿನ ಅಕ್ಷರ ಜ್ಞಾನ–ಕಸುಬಿನ ಉನ್ನತೀಕರಣದ ಮುಂದುವರಿದ ಭಾಗವಾಗಿ ಇಂದು ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಯಾಗುತ್ತಿರುವುದು ಸಂತಸದ ಸಂಗತಿ. ವಿಧಾನಪರಿಷತ್ ಮಾಜಿ ಸದಸ್ಯ ತೋಂಟದಾರ್ಯ ಮತ್ತು ವೈದ್ಯೆ ಡಾ.ಕಮಲಕುಮಾರಿಯವರು ಈ ವಿಚಾರ ಸಂಕಿರಣದ ದತ್ತಿ ದಾನಿಗಳಾಗಿದ್ದಾರೆ ಎಂದರು. ವಿಧಾನ ಪರಿಷತ್ ಮಾಜಿ ಸದಸ್ಯ ತೋಂಟದಾರ್ಯ, ಶರಣ ಸಾಹಿತ್ಯ ಪರಿಷತ್ತಿನ ನಗರ ಘಟಕದ ಕಾರ್ಯದರ್ಶಿ ಟಿ.ಎಸ್.ಕುಮಾರಸ್ವಾಮಿ, ಸಹ ಕಾರ್ಯದರ್ಶಿ ಉಮಾಪತಿ, ಕದಳಿ ಮಹಿಳಾ ವೇದಿಕೆ ನಗರಾಧ್ಯಕ್ಷೆ ಶಾರದಾ ಶಿವಲಿಂಗಸ್ವಾಮಿ ಗೋಷ್ಠಿಯಲ್ಲಿದ್ದರು.

ಇಂದು ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನಲ್ಲಿ ಯೂತ್–20 ಶೃಂಗಸಭೆ ಕುರಿತ ವಿಚಾರ ಸಂಕಿರಣ

ಮೈಸೂರು,ಮಾ.8(ಪಿಎಂ)– ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದ (ವಿಟಿಯು) ವತಿಯಿಂದ ಮೈಸೂರಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನಲ್ಲಿ ಮಾ.9ರಂದು ಯೂತ್–20 ಶೃಂಗಸಭೆ ಕುರಿತ ವಿಚಾರ ಸಂಕಿರಣ ಆಯೋಜಿಸಲಾಗಿದೆ.

ಕಾಲೇಜು ಆವರಣದ ಹೆಚ್.ಕೆಂಪೇಗೌಡ ಒಳಾಂಗಣ ಕ್ರೀಡಾ ಸಂಕೀರ್ಣದಲ್ಲಿ ಅಂದು ಬೆಳಗ್ಗೆ 11ಕ್ಕೆ ಯೂತ್–20 ಶೃಂಗಸಭೆ ವಿಚಾರ ಸಂಕಿರಣ ಆರಂಭವಾಗಲಿದೆ. ಸಭೆಯಲ್ಲಿ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಅತಿಥಿಯಾಗಿ ಪಾಲ್ಗೊಳ್ಳಲಿದ್ದು, ವಿಟಿಯು ಕುಲಪತಿ ಡಾ.ಎಸ್.ವಿದ್ಯಾಶಂಕರ್ ಅಧ್ಯಕ್ಷತೆ ವಹಿಸಲಿದ್ದಾರೆ. ಮೈಸೂರು ಮತ್ತು ಮಂಡ್ಯ ಜಿಲ್ಲೆಗಳ 13 ಇಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳು ಹಾಗೂ ಪ್ರಾಂಶುಪಾಲರು ಇದರಲ್ಲಿ ಪಾಲ್ಗೊಳ್ಳಲಿದ್ದಾರೆ. ಯೂತ್–20 ಶೃಂಗಸಭೆ ಮುಖ್ಯ ಕಾರ್ಯಕ್ರಮವನ್ನು ಮೇ 16ರಂದು ನಡೆಸಲು ಉದ್ದೇಶಿಸಿದ್ದು, ಇದರಲ್ಲಿ ಜಿ–20 ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. 20 ರಾಷ್ಟ್ರಗಳ ಸಂಘಟನೆಯಾದ 'ಜಿ–20' ಅಧ್ಯಕ್ಷ ಸ್ಥಾನವನ್ನು 2022ರ ಡಿ.1ರಿಂದ 2023ರ ನ.30ರವರೆಗೆ ಭಾರತವು ವಹಿಸಿಕೊಂಡಿದೆ. ಇದರ ಭಾಗವಾಗಿ ನಡೆಯುವ ಯೂತ್–20 ಶೃಂಗಸಭೆಯ ಕಾರ್ಯಚಟುವಟಿಕೆಗಳು ಜಾಗತಿಕ ಯುವ ನಾಯಕತ್ವ ಮತ್ತು ಸಹಭಾಗಿತ್ವವನ್ನು ಕೇಂದ್ರೀಕರಿಸಲಿವೆ. ಜಿ–20 ಶೃಂಗಸಭೆಯ ಅಧ್ಯಕ್ಷತೆ ಹೊಂದಿರುವ ಭಾರತವು, ಅಂತಾರಾಷ್ಟ್ರೀಯ ಆರ್ಥಿಕ ವಿಷಯಗಳ ಬಗ್ಗೆ ಆಡಳಿತ ರೂಪಿಸುವಲ್ಲಿ ಮತ್ತು ಬಲಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

'ಯೂತ್–20 ಶೃಂಗಸಭೆ' ಮಾನವ ಸಂಕುಲದ ಸಮಸ್ಯೆಗಳನ್ನು ಪರಿಹರಿಸಲು ಯುವ ಶಕ್ತಿಯ ಸಂಘಟನೆಯಾಗಿದೆ. ಇದರಿಂದ ಯುವ ಜನರಲ್ಲಿ ವಿವಿಧ ಕ್ಷೇತ್ರಗಳ ಪ್ರಸ್ತುತ ಸನ್ನಿವೇಶ ಕುರಿತಂತೆ ಜಾಗತಿಕ ದೃಷ್ಟಿಕೋನ ಮೂಡಲಿದೆ. ಅದಕ್ಕಾಗಿ ಅರ್ಥಪೂರ್ಣ ಚರ್ಚೆಗಳಲ್ಲಿ ಭಾಗವಹಿಸಬಹುದು ಮತ್ತು ಜಾಗತಿಕ ಸಮಸ್ಯೆಗಳಿಗೆ ಸಮರ್ಥವಾಗಿ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಕೆಲಸ ಮಾಡಲು ವೇದಿಕೆ ಕಲ್ಪಿಸಲಿದೆ ಎಂದು ಪ್ರಕಟಣೆ ತಿಳಿಸಿದೆ.

ಬಿಜಿಎಸ್ ಬಿಇಡಿ ಕಾಲೇಜು ಪ್ರಶಿಕ್ಷಣಾರ್ಥಿಗಳಿಂದ

ಚಾಮುಂಡಿಬೆಟ್ಟದಲ್ಲಿ ಸ್ವಚ್ಛತಾ ಅಭಿಯಾನ



ಮೈಸೂರು, ಮಾ.8(ಎಂಟಿವೈ)– ಅಂತರರಾಷ್ಟ್ರೀಯ ಮಹಿಳಾ ದಿನದ ಹಿನ್ನೆಲೆಯಲ್ಲಿ ಕುವೆಂಪುನಗರದ ಬಿಜಿಎಸ್ ಬಿ.ಇಡಿ ಕಾಲೇಜಿನ ಪ್ರಶಿಕ್ಷಣಾರ್ಥಿಗಳು ಬುಧವಾರ ಅರಣ್ಯ ಇಲಾಖೆಯ ಸಹಯೋಗದೊಂದಿಗೆ ಚಾಮುಂಡಿಬೆಟ್ಟದಲ್ಲಿ ಸ್ವಚ್ಛತಾ ಅಭಿಯಾನ ಕೈಗೊಂಡರು.

ಪ್ಲಾಸ್ಟಿಕ್ ಮುಕ್ತ ಚಾಮುಂಡಿಬೆಟ್ಟವಾಗಿ ಮಾರ್ಪಡಿಸುವ ನಿಟ್ಟಿನಲ್ಲಿ ಅರಣ್ಯ ಇಲಾಖೆ ಮಾ.3ರಿಂದ 21ರವರೆಗೆ ಚಾಮುಂಡಿಬೆಟ್ಟದಲ್ಲಿ ವಿಶೇಷ ಸ್ವಚ್ಛತಾ ಅಭಿಯಾನ ಆರಂಭಿಸಿದ್ದು, 5ನೇ ದಿನವಾದ ಬುಧವಾರ ಬಿಜಿಎಸ್ ಬಿ.ಇಡಿ ಕಾಲೇಜಿನ 170 ಪ್ರಶಿಕ್ಷಣಾರ್ಥಿಗಳು ಇದರಲ್ಲಿ ಪಾಲ್ಗೊಂಡರು. ಚಾಮುಂಡಿಬೆಟ್ಟದ ಮುಖ್ಯ ರಸ್ತೆಯ ಎರಡೂ ಬದಿಯಲ್ಲಿ ಪ್ರಯಾಣಿಕರು, ಭಕ್ತರು ಬಿಸಾಡಿದ್ದ ಪ್ಲಾಸ್ಟಿಕ್, ಮದ್ಯದ ಖಾಲಿ ಬಾಟಲಿ ಸೇರಿದಂತೆ ಪರಿಸರ ಮಾರಕ ತ್ಯಾಜ್ಯವನ್ನು ಸಂಗ್ರಹಿಸಿದರು. ಬೆಳ್ಗೆ ಕಾಲೇಜಿನಿಂದ ಬೆಟ್ಟದ ತಪ್ಪಲಿಗೆ ಬಂದ ವಿದ್ಯಾರ್ಥಿಗಳು 6 ತಂಡಗಳಾಗಿ ವಿಂಗಡಣೆಗೊಂಡು ಸ್ವಚ್ಛತಾ ಅಭಿಯಾನ ನಡೆಸಿದರು. ಹತ್ತಾರು ಮೂಟೆ ತ್ಯಾಜ್ಯ ಸಂಗ್ರಹವಾಯಿತು. ಶ್ರಮದಾನದ ಬಳಿಕ ವಿದ್ಯಾರ್ಥಿಗಳಿಗೆ ಪರಿಸರ ಕಾನೂನುಗಳು ಹಾಗೂ ಅದರ ಪರಿಣಾಮ ಕುರಿತು ಕಾರ್ಯಾಗಾರ ಹಮ್ಮಿಕೊಳ್ಳಲಾಯಿತು. ಪರಿಸರ ಮಾಲಿನ್ಯ ಮಂಡಳಿ ಅಧಿಕಾರಿಗಳು, ಪರಿಸರ ಕಾನೂನು ಹಾಗೂ ಪ್ಲಾಸ್ಟಿಕ್ ನಿಷೇಧದ ಅನಿವಾರ್ಯತೆ ತಿಳಿಸಿದರು.

ಈ ಸಂದರ್ಭದಲ್ಲಿ ಡಿಸಿಎಫ್ ಡಾ.ಕೆ.ಎನ್. ಬಸವರಾಜು, ಎಸಿಎಫ್‌ಗಳಾದ ಲಕ್ಷ್ಮೀಕಾಂತ್, ಶಿವರಾಮ್, ಬಿಜಿಎಸ್ ಬಿ.ಇಡಿ ಕಾಲೇಜಿನ ಪ್ರಾಂಶುಪಾಲ ಡಾ.ನಾಗರಾಜು, ಆರ್‌ಎಫ್‌ಓ ಧನ್ಯಶ್ರೀ, ಡಿಆರ್‌ಎಫ್ ಎಂ.ಜೆ ಸತೀಶ್ ಕುಮಾರ್, ಕಾರ್ಯಕ್ರಮದ ಸಂಯೋಜಕ ಬಿಜಿಎಸ್ ಬಿ.ಇಡಿ ಕಾಲೇಜಿನ ಸಿ.ಆರ್.ಶರತ್‌ಕುಮಾರ್, ಅರಣ್ಯ ಸಿಬ್ಬಂದಿಗಳಾದ ಅಪ್ಪಣ್ಣ, ವೈ.ಕೆ.ಸತೀಶ್, ಗಗನ್, ಸಹಾಯಕ ಪ್ರಾಧ್ಯಾಪಕ ಕೆ.ಟಿ.ಬಸವರಾಜು ಹಾಗೂ ಕಾಲೇಜಿನ ಬೋಧಕ ಸಿಬ್ಬಂದಿ ಪಾಲ್ಗೊಂಡಿದ್ದರು.

ನಕ್ಕರೆ ಅದೇ ಸ್ವರ್ಗ

ಪತ್ನಿ : "ರೀ... ಹೋಗಿ ನನ್ನ ಮುಖ ಚೆನ್ನಾಗಿ ಕಾಣುವ ಒಳ್ಳೆಯ ಕನ್ನಡಿ ತನ್ನಿ ಎಂದರೆ ಬರಿಗೈಲಿ ಬಂದಿದ್ದೀರಲ್ಲಾ?"

ಪತಿ : "ಎಲ್ಲಾ ಅಂಗಡಿಯಲ್ಲೂ ಹುಡುಕಿದೆ. ಎಲ್ಲದರಲ್ಲೂ ನನ್ನ ಮುಖವೇ ಕಾಣುತ್ತಿತ್ತು. ನಿನ್ನ ಮುಖ ಕಾಣೋ ಕನ್ನಡಿ ಎಷ್ಟು ಹುಡುಕಿದರೂ ಸಿಗಲೇ ಇಲ್ಲ!"

ಮೈಸೂರು ಮಿತ್ರ
ಗುರುವಾರ, 9 ಮಾರ್ಚ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........


ನಿನ್ನ ಆಸೆ, ಇಚ್ಛೆಗಳನ್ನು ದಮನಗೊಳಿಸುವುದು ಪುಣ್ಯ. ನಿರಪರಾಧಿಗಳನ್ನು ಸತಾಯಿಸುವುದು ಮಹಾಪಾಪ. –ಭಗವಾನ್ ಮಹಾವೀರ

ವೇದ ಸುಳ್ಳಾದರೂ { ಮುಖ ನೋಡಿ
ಗಾದೆ ಸುಳ್ಳಾಗದು { ಮನಸ್ಸು ತಿಳಿದಂತೆ

ನಿಮ್ಮ ಪತ್ರಗಳು

ಬೀದಿಗಳಲ್ಲಿ ಸ್ಮಾರ್ಟ್ ಲೈಟ್ಸ್ ಅವೈಜ್ಞಾನಿಕ ಅಳವಡಿಕೆ

ಮಾನ್ಯರೆ,



ಮೈಸೂರು ನಗರದಲ್ಲಿ ಕೇಂದ್ರ ಸರ್ಕಾರದ ವಿದ್ಯುತ್ ಉಳಿತಾಯದ ಯೋಜನೆ ಅಡಿಯಲ್ಲಿ ಎಲ್ಲಾ ಬೀದಿಗಳು, ರಸ್ತೆಗಳಿಗೆ ಈ ಸ್ಮಾರ್ಟ್ ಲೈಟ್‌ಗಳನ್ನು ಅಳವಡಿಸಿರುವುದು ಸರಿಯಷ್ಟೆ, ಆದರೆ ಅಳವಡಿಸುತ್ತಿರುವ ಗುತ್ತಿಗೆದಾರರು ಇವನ್ನು ಯಾವುದೇ ತರ್ಕ ಬದ್ಧವಾಗಿ, ವೈಜ್ಞಾನಿಕವಾಗಿ ಅಳವಡಿಸಿಲ್ಲ. ಎಲ್ಲಿ ವಾಹನ ದಟ್ಟಣೆ ರಸ್ತೆಗಳು, ಫುಟ್‌ಪಾತ್‌ಗಳು ಇವೆಯೋ, ಅಲ್ಲಿ ಲೈಟ್ ಕಂಬಗಳು ಕಡಿಮೆಯಿದ್ದು, ಅಲ್ಲಿ ಒಂದು ಕಂಬಕ್ಕೆ ಒಂದೇ ಕಡಿಮೆ wattsನ ಸ್ಮಾರ್ಟ್ ಲೈಟ್ ಅಳವಡಿಸಿದ್ದು, ಅದು ಸುತ್ತಲಿನ ರಸ್ತೆ, ಫುಟ್‌ಪಾತ್‌ಗಳಿಗೆ ಸರಿಯಾಗಿ ಬೆಳಕು ಚೆಲ್ಲುತ್ತಿಲ್ಲ! ಹಾಗೆಯೇ ಜನದಟ್ಟಣೆ ಓಡಾಟದ ಜನವಸತಿ ಪ್ರದೇಶದಲ್ಲಿ ಕಡಿಮೆ ಲೈಟ್ ಕಂಬಗಳಿದ್ದು, ಒಂದು ಇನ್ನೊಂದರಿಂದ ದೂರದಲ್ಲಿ ಇರುವುದರಿಂದ ಅಲ್ಲಿ ಒಂದು ಕಂಬಕ್ಕೆ ಒಂದೊಂದೇ ಸ್ಮಾರ್ಟ್ ಲೈಟ್ ಅಳವಡಿಸಿರುವುದರಿಂದ, ರಸ್ತೆಯ ಒಂದು ಭಾಗಕ್ಕೆ ಮಾತ್ರ ಬೆಳಕು ಬೀಳುತ್ತಿದೆ. ಅದರ ವಿರುದ್ಧ ದಿಕ್ಕಿನಲ್ಲಿ ಕತ್ತಲೆ ಇರುತ್ತದೆ. ಉದಾಹರಣೆಗೆ, ನಮ್ಮ ವಾರ್ಡ್ 23 ಪ್ರದೇಶದ ಆಯಿಲ್ ಮಿಲ್ ರಸ್ತೆ ಹಾಗೂ ಕಾಲೇಜು ರಸ್ತೆ ಸೇರುವ ಭಾಗದಲ್ಲಿರುವ ಲೈಟ್ ಕಂಬ. ಇದೇ ಪ್ರದೇಶದಲ್ಲಿ ಒಂದೇ ಲೈಟ್ ಕಂಬಕ್ಕೆ ವಿರುದ್ಧ ದಿಕ್ಕಿನಲ್ಲಿ ಎರಡು ಸ್ಮಾರ್ಟ್ ಲೈಟ್ ಗಳನ್ನು ಅಳವಡಿಸಲಾಗಿದೆ. ಈ ತಾರತಮ್ಯ ಯಾಕೆ? ಇದನ್ನು ವಾರ್ಡ್ 23 ಕಾರ್ಪೊರೇಟರ್ ಗಮನಕ್ಕೆ ಸುತ್ತಲಿನ ನಿವಾಸಿಗಳು ತಂದಿದ್ದೇವೆ. ಈ ರೀತಿ ಎಷ್ಟೋ ಕಡೆ ಖಂಡಿತಾ ಆಗಿರುತ್ತೆ. ಜನವಸತಿ ಮನೆಗಳೇ ಇಲ್ಲದ lancedown building ಹಿಂಭಾಗದ ಕಿರಿದಾದ ಬೀದಿಯಲ್ಲಿ ಸುಮಾರು 12 ಲೈಟ್ ಕಂಬಗಳು, ಒಂದಕ್ಕೊಂದು ಹತ್ತಿರವಿದ್ದು, ಪ್ರತಿ ಯೊಂದಕ್ಕೂ ಸ್ಮಾರ್ಟ್ ಲೈಟ್ ಅಳವಡಿಸಿ ಚೆನ್ನಾಗಿ ಬೆಳಕು ಬೀಳುವಂತೆ ಮಾಡಲಾಗಿದೆ. ಯಾವ ಉದ್ದೇಶಕ್ಕಾಗಿ? ಕೇವಲ ದಾರಿಹೋಕರ ಮೂತ್ರ ವಿಸರ್ಜನೆಗಾಗಿ. ಈ ಕಿರಿದಾದ ಬೀದಿಯ ಪೂರ್ವ ಭಾಗಕ್ಕೆ ಮಾತ್ರ ವ್ಯಾಪಾರಸ್ಥರ ಸುಮಾರು 10 ಅಂಗಡಿ, ಗೋಡೌನ್‌ಗಳಿವೆ. ಬೀದಿಯ ಪಶ್ಚಿಮದ ಅರ್ಧ ಭಾಗ ಕೇವಲ ಮೂತ್ರ ವಿಸರ್ಜನೆಗೆ ಬಳಕೆಯಾಗುತ್ತಿದೆ. ಈ ಭಾಗದಲ್ಲಿ ಅಷ್ಟೊಂದು ಸ್ಮಾರ್ಟ್ ಲೈಟ್ಸ್ ಯಾಕೆ ಬೇಕು? ಇದು ವೈಜ್ಞಾನಿಕವಾಗಿ ಇದೆಯೇ? ಈ ಸ್ಮಾರ್ಟ್ ಲೈಟ್ ಅಳವಡಿಕೆ ಬಾಂಬೆ ಗುತ್ತಿಗೆದಾರರಿಗೆ ಸೇರಿದ್ದು. ಆದರೆ ನಮ್ಮ ನಗರ ಪಾಲಿಕೆ ಅಧಿಕಾರಿಗಳಾಗಲೀ, ಜನಪ್ರತಿನಿಧಿಗಲಾಗಲೀ ಈ ಗುತ್ತಿಗೆದಾರರಿಗೆ ಸರಿಯಾಗಿ ಮಾರ್ಗದರ್ಶನ ಮಾಡಿ, ಉಸ್ತುವಾರಿ ಮಾಡಿ ಸಾರ್ವಜನಿಕ ಹಿತರಕ್ಷಣೆಯಲ್ಲಿ ಕೆಲಸ ಮಾಡಿಸುತ್ತಿಲ್ಲ ಎಂಬುದೇ ಬೇಸರದ ವಿಷಯ. ಮಾನ್ಯ ಉತ್ಸಾಹಿ ಮೇಯರ್ ಅವರು, ನಗರ ಪಾಲಿಕೆ ಆಯುಕ್ತರು ಜಂಟಿಯಾಗಿ ಈ ರೀತಿ ಸ್ಮಾರ್ಟ್ ಲೈಟ್ ಅವೈಜ್ಞಾನಿಕ ಅಳವಡಿಕೆಯ ಪ್ರದೇಶಗಳನ್ನು ಖುದ್ದು ಭೇಟಿ ಮಾಡಿ ಪರಿಶೀಲಿಸಿ, ಸೂಕ್ತವಾಗಿ ಸರಿಪಡಿಸುವ ಕ್ರಮಗಳನ್ನು ಕೈಗೊಳ್ಳಬೇಕೆಂದು ಮನವಿ.

–ಪ್ರೊ. ಎಂ.ಎಸ್.ಎಸ್. ಶರ್ಮ, ಸಾಮಾಜಿಕ ಕಾರ್ಯಕರ್ತರು, ಮೈಸೂರು.

ಸುಣ್ಣ ಬಣ್ಣ ಬಳಿಯಲು ಕೆಲಸದ ದಿನವೇ ಆಗಬೇಕೆ !!

ಮಾನ್ಯರೆ,

ಇತ್ತೀಚೆಗೆ ಮೈಸೂರಿನ ರಾಮಕೃಷ್ಣನಗರ ಸರ್ಕಾರಿ ಗ್ರಂಥಾಲಯ (ರೂಬಿ ಬೇಕರಿ ಹತ್ತಿರ)ದಲ್ಲಿ ಕೆಲಸದ ದಿನವಾದ ಫೆ.26ರಂದು ಭಾನುವಾರ ರಜೆ ಘೋಷಿಸಲಾಗಿತ್ತು. ಕಾರಣ ಗ್ರಂಥಾಲಯದಲ್ಲಿ ಸುಣ್ಣ ಬಣ್ಣ ಬಳಿಯಲಾಗುತ್ತಿತ್ತು. ಅದರ ಹಿಂದಿನ ದಿನ ನಾಲ್ಕನೇ ಶನಿವಾರ ಹಾಗೂ ಮುಂದಿನ ದಿನ ಸೋಮವಾರ ವಾರದ ರಜೆ. ಈ ರಜೆ ದಿನಗಳಲ್ಲಿ ಸುಣ್ಣ ಬಣ್ಣಗಳನ್ನು ಬಳಿಯದೇ ಕೆಲಸದ ದಿನದಲ್ಲಿ ಇಂತಹ ಅವೈಜ್ಞಾನಿಕ ಕೆಲಸಗಳು ಗ್ರಂಥಾಸಕ್ತರನ್ನು ಬೇಸರ ಬರುವಂತೆ ಮಾಡಿದೆ. ಅಂದು ಸುಮಾರು ಗ್ರಂಥಾಸಕ್ತರು ದಿನಪತ್ರಿಕೆಗಳನ್ನು ಓದಲು ಬಂದು ವಾಪಸ್ಸು ಹೋಗಬೇಕಾಯಿತು. ಹೀಗೆ ಒಟ್ಟಿಗೆ ಮೂರು ದಿನ ರಜೆ ಮಾಡಿದರೆ ಏನು ಪ್ರಯೋಜನ? ವಿದ್ಯಾರ್ಥಿಗಳಿಗೆ ಇನ್ನೇನು ವಾರ್ಷಿಕ ಪರೀಕ್ಷೆಗಳು ಬರುತ್ತಿವೆ. ಸಾಮಾನ್ಯವಾಗಿ ವಿದ್ಯಾರ್ಥಿಗಳು ಮನೆಗಿಂತ ಹೆಚ್ಚು ಗ್ರಂಥಾಲಯಗಳನ್ನು ಓದಲು ಆಯ್ಕೆ ಮಾಡಿಕೊಳ್ಳುತ್ತಾರೆ. ಇನ್ನು ಮುಂದಾದರೂ ದಯವಿಟ್ಟು ರಜೆ ದಿನಗಳಲ್ಲಿ ಇಂತಹ ಚಟುವಟಿಕೆಗಳನ್ನು ಮಾಡಿಕೊಳ್ಳಲಿ. ಇದಲ್ಲದೇ ಗ್ರಂಥ ಸಪ್ತಾಹ ಎಂದು ವಾರಗಟ್ಟಲೇ ಗ್ರಂಥಾಲಯಗಳಿಗೆ ಸಮಯದಲ್ಲಿ ಬದಲಾವಣೆ ಮಾಡಲಾಗುತ್ತಿದೆ. ಸಪ್ತಾಹ ಮಾಡಿಕೊಳ್ಳಲಿ. ಆದರೆ ಗ್ರಂಥಾಲಯ ಮಾಮೂಲಿನಂತೆ ಕಾರ್ಯ ನಿರ್ವಹಿಸಲಿ ಎಂದು ನನ್ನ ಕಳಕಳಿಯ ಮನವಿ.

– ಜಿ.ಪಿ.ಹರೀಶ್, ವಿ.ವಿ. ಮೊಹಲ್ಲಾ, ಮೈಸೂರು.

ಹೆಚ್3ಎನ್2 ಕಾಯಿಲೆಯ ಬಗ್ಗೆ ಮುನ್ನೆಚ್ಚರಿಕೆ ಅಗತ್ಯ, ನಿರ್ಲಕ್ಷ್ಯ ಬೇಡ

ಮಾನ್ಯರೆ,

ಹೊಸದಾದ ಕಾಯಿಲೆಯಾದ ಹೆಚ್3ಎನ್2 ಕಾಯಿಲೆ ಈಗ ಜನರಲ್ಲಿ ಆತಂಕ ಹುಟ್ಟಿಸಿದೆ. ಈಗಾಗಲೇ ರಾಜ್ಯದಲ್ಲಿ 26 ಮಂದಿಗೆ ಕಾಣಿಸಿಕೊಂಡಿದೆ. ಬೆಂಗಳೂರಿನಲ್ಲಿ ಇಬ್ಬರಿಗೆ ಈ ಕಾಯಿಲೆ ಕಾಣಿಸಿಕೊಂಡಿದೆ ಎಂಬ ಮಾಹಿತಿ ಇದೆ. ಈ ಕಾಯಿಲೆಯ ಲಕ್ಷಣವನ್ನು ಗಮನಿಸಿದರೆ ನೆಗಡಿ, ಕೆಮ್ಮು, ಜ್ವರ, 15 ವರ್ಷ ವಯಸ್ಸಿನ ಮಕ್ಕಳಿಗೆ 50 ರ ನಂತರ ವಯೋಮಾನದವರಿಗೆ ಬರಬಹುದು ಎಂಬ ತಜ್ಞರ ಅಭಿಪ್ರಾಯವಾಗಿದೆ. ನೆಗಡಿ, ಕೆಮ್ಮು, ಜ್ವರ ಬಂದರೆ ನಿರ್ಲಕ್ಷ್ಯ ಬೇಡ ನಿಶ್ಯಕ್ತಿಯಿಂದ ಕೂಡಿದ ದೇಹದವರು ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಆರೋಗ್ಯದ ಕಡೆ ಹೆಚ್ಚಿನ ಗಮನವಿರಲಿ. ಮಾರಣಾಂತಿಕ ಕಾಯಿಲೆ ಎಂಬ ಭಯ ಬೇಡ ಈಗಾಗಲೇ ವಿದ್ಯಾರ್ಥಿಗಳಿಗೆ ಪರೀಕ್ಷೆಯ ಸಮಯವಾಗಿರುವುದರಿಂದ ಆರೋಗ್ಯದ ಕಡೆ ನಿರ್ಲಕ್ಷ್ಯ ಬೇಡ. ಪ್ರತಿಯೊಬ್ಬರೂ ಬಿಸಿಲಿನಲ್ಲಿ ಅನಗತ್ಯವಾಗಿ ಓಡಾಡಬಾರದು. ಈ ಸಂದರ್ಭದಲ್ಲಿ ಕುಡಿಯುವ ನೀರು ಶುದ್ಧತೆಯಿಂದ ಇರಲಿ. ಈಗಾಗಲೇ ಆಸ್ಪತ್ರೆಗಳಲ್ಲಿ ಹಲವಾರು ನಿಯಮಗಳನ್ನು ಜಾರಿಗೊಳಿಸಿದ್ದಾರೆ. ಕೋವಿಡ್‌ಗೆ ಸೂಚನೆ ನೀಡಿದಂತೆ ಶುಚಿತ್ವ, ಮಾಸ್ಕ್ ಧರಿಸುವುದು, ಕಾಯಿಲೆ ಬಂದವರಿಂದ ದೂರವಿರುವುದು.ಮತ್ತೊಬ್ಬರಿಗೆ ಕಾಯಿಲೆ ಹರಡದಂತೆ ಎಚ್ಚರಿಕೆ ವಹಿಸಿ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಇದು ಪ್ರತಿಯೊಬ್ಬರೂ ಪಾಲಿಸಬೇಕಾಗಿದೆ.

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು

ಸಂಸ್ಕೃತಿ ಚಿಂತನಾ

ನುಡಿ ದೀಪ್ತಿ ಎಂಬ ಸೂಕ್ತಿಗಳ ಸಂಗ್ರಹ

ನುಡಿದೀಪ್ತಿ ಎಂಬ ಅಂದದ ಪುಸ್ತಕವನ್ನು ಬರೆದಿರುವವರು ಅಥವಾ ಸಂಪಾದಿಸಿರುವವರು ನನ್ನ ಮಿತ್ರ ಶ್ರೀ ನಗರ್ಲೆ ಶಿವಕುಮಾರರು. ಇದರಲ್ಲಿ 1032 ಒಳ್ಳೆಯ ಮಾತುಗಳಿವೆ. ಗ್ರಂಥದ ಮೇಲೆ 'ಸಂಪಾದಕರು ನಗರ್ಲೆ ಶಿವಕುಮಾರ' ಎಂದಿದೆ. ಯಾರೋ ಪ್ರಸಿದ್ಧ ವ್ಯಕ್ತಿಗಳ ಉತ್ತಮ ಮಾತುಗಳನ್ನು ಶ್ರೀ ಶಿವಕುಮಾರರು ಸಂಗ್ರಹಿಸಿ ಯಥಾವತ್ ಇಲ್ಲಿ ಕೊಟ್ಟಿಲ್ಲ. ಅವುಗಳನ್ನು ಮನಸ್ಸಿನಲ್ಲಿ ಕಡೆದು ಮೇಲೆ ಬಂದ ಬೆಣ್ಣೆಯನ್ನು ತಮ್ಮದೇ ಆದ ಸರಳಗನ್ನಡ ಗದ್ಯದಲ್ಲಿ ಅವರು ಓದುಗರಿಗೆ ಕೊಟ್ಟಿದ್ದಾರೆ. ಇಲ್ಲಿರುವ ಕೆಲವು ವಾಕ್ಯಗಳನ್ನು ಓದಿದಾಗ ಹಿಂದೆ ಎಲ್ಲೋ ಓದಿದ್ದ ಸಂಸ್ಕೃತ ಶ್ಲೋಕಗಳು ಅಥವಾ ಆಂಗ್ಲ ವಾಕ್ಯಗಳು ಅಥವಾ ಕನ್ನಡ ಪದ್ಯಗಳು ನೆನಪಿಗೆ ಬರುತ್ತವೆ. ಅವುಗಳ ಅನುವಾದ ಇದಲ್ಲ. ಆ ಪೂರ್ವ ಕಥನಗಳ ಅರ್ಥಕ್ಕೆ ನಗರ್ಲೆ ಶಿವಕುಮಾರರ ಸ್ವಾನುಭವದ ಸ್ವರ್ಣಲೇಪನವೂ ಇಲ್ಲಿದೆ. ಹೀಗೆ ಪ್ರಸ್ತುತ ಗ್ರಂಥವು ಓದುಗರ ಆಸಕ್ತಿಯನ್ನು ಉಕ್ಕಿಸುತ್ತದೆ. ಈಗಾಗಲೇ ಹಲವು ಕೃತಿಗಳನ್ನು ಕನ್ನಡ ಲೋಕಕ್ಕೆ ಕೊಟ್ಟಿರುವ ಲೇಖಕರ ಲೇಖನಿ ಪಳಗಿದೆ. ಮೊದಲು ಒಂದೇ ವಾಕ್ಯದ ನುಡಿಗಳನ್ನು ಕೊಟ್ಟು ಆ ಮೇಲೆ ಎರಡು, ಮೂರು, ನಾಲ್ಕು ಹೀಗೆ ಹತ್ತು ಸಾಲಿನ ವಾಕ್ಯಗಳಿರುವ 'ನುಡಿ'ಗಳೂ ಈ ಪುಸ್ತಕದಲ್ಲಿವೆ.

ಮೊದಲನೆಯ ಪುಟದಲ್ಲಿರುವ ಒಂದು ನುಡಿ:

'ಏಳಿ, ಎದ್ದೇಳಿ, ಗುರಿ ಮುಟ್ಟುವ
ತನಕ ನಿಲ್ಲದಿರಿ (6)

ಇದು ಶ್ರೀ ಸ್ವಾಮಿ ವಿವೇಕಾನಂದರ Arise, awake, stop not till the the goal is reached ಎಂಬ ವಾಕ್ಯವನ್ನು ನೆನಪಿಗೆ ತರುತ್ತದೆ. ವಿವೇಕಾನಂದರ ಮಾತಿನ ಹಿನ್ನೆಲೆ ಉಪನಿಷತ್ತಿನಲ್ಲಿದೆ–

'ಉತ್ತಿಷ್ಠತ, ಜಾಗ್ರತ,
ಪ್ರಾಪ್ಯ ವರಾನ್ ನಿಬೋಧತ'

ಹೀಗೆ ಒಂದೊಂದು ವಾಕ್ಯದ ಹಿಂದೆ ಹಿಂದಿನವರ ಮಾತುಗಳಿರಬಹುದು.

ಕೆಲವು ಸ್ಥಳಗಳಲ್ಲಿ ಯಾವುದೋ ಸಂಸ್ಕೃತ ಸುಭಾಷಿತದ ಸಾರಾಂಶವನ್ನು ಶ್ರೀ ಶಿವಕುಮಾರರು ಕೊಟ್ಟಿದ್ದಾರೆ– ಎನಿಸುತ್ತದೆ.

ಗಚ್ಛತ್‌ಪಿಪೀಲಿಕಾಪಂಕ್ತಿಃ
ಸಮುದ್ರಮಪಿ ಗಚ್ಛತಿ।
ಅಗಚ್ಛನ್ ವೈನತೇಯೋಽಪಿ
ಪದಮೇಕಂ ನ ಗಚ್ಛತಿ॥

ಎಂಬುದೊಂದು ಅಂತಹ ಸುಭಾಷಿತ. ಚಲಿಸುತ್ತಿರುವ ಇರುವೆಗಳ ಸಾಲು ಎಂದೋ ಒಂದು ದಿನ ಸಮುದ್ರದವರೆಗೂ ಹೋಗಬಹುದು. ಆದರೆ ವೈನತೇಯ (ಗರುಡ)ನು ಕೂಡ ಸುಮ್ಮನೆ ಚಲಿಸದೆ ನಿಂತರೆ ಒಂದು ಅಡಿಯಷ್ಟೂ ಮುಂದೆ ಹೋಗುವುದಿಲ್ಲ ಎಂಬುದು ಈ ಸುಭಾಷಿತದ ತಾತ್ಪರ್ಯ.

ಇದನ್ನು ಶಿವಕುಮಾರರ ಒಂದು ಸರಳ ವಾಕ್ಯ ಹೀಗೆ ಹೇಳಿದೆ–

> **ನುಡಿದೀಪ್ತಿಯ ಲೇಖಕ ನಗರ್ಲೆ ಶಿವಕುಮಾರರು ಇದಕ್ಕೆ ಮೊದಲೇ ಹನ್ನೆರಡು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಯಾವುದನ್ನೂ ಹಣ ಸಂಪಾದನೆಗಾಗಿ ಮಾಡಿಲ್ಲ. ಕನ್ನಡ ಪ್ರೀತಿಯಿಂದ, ಸಾಹಿತ್ಯದ ಒಲವಿನಿಂದ ಮಾಡಿದ್ದಾರೆ. ಪ್ರಾಜ್ಞರಾದ ಪ್ರೊ.ಕೆ. ಅನಂತರಾಮು ಅವರು 'ಶಿವಕುಮಾರರು ಬಹಳ ಎಚ್ಚರ ವಹಿಸಿ ತಮ್ಮ ವಿವೇಚನಾಶಕ್ತಿಯನ್ನು ಪರಿಪೂರ್ಣವಾಗಿ ದುಡಿಸಿ, ಅತ್ಯಂತ ಶ್ರೇಷ್ಠವಾದ ನುಡಿಗಳನ್ನೇ ಸಂಗ್ರಹಿಸಿ, ಜೋಡಿಸಿ ಜಿಜ್ಞಾಸುಗಳ ಲೋಕಕ್ಕೆ ಸಮರ್ಪಿಸಿದ್ದಾರೆ... ಶಿವಕುಮಾರರ ಶ್ರಮ ಸಾರ್ಥಕವಾಗಿದೆ' ಎಂದಿದ್ದಾರೆ.**

'ಶ್ರಮಪಡದೆ ಇದ್ದರೆ, ನೀ ಇದ್ದಲ್ಲೇ ಇರುವೆ' (9)

ಅವರ ಇನ್ನೊಂದು ನುಡಿ–

'ಸೂರ್ಯನಿಗೆ ನಮನ ಸರ್ವ
ರೋಗಗಳಿಂದ ಪಾವನ' (15)

ಇದು **ಆರೋಗ್ಯಂ ಭಾಸ್ಕರಾದಿಚ್ಛೇತ್** ಎಂಬ ಸೂಕ್ತಿಯ ಸಾರಸಂಗ್ರಹ. ನಗರ್ಲೆ ಶಿವಕುಮಾರರು ರಚಿಸಿರುವ ಈ ಪುಸ್ತಕದಲ್ಲಿರುವ ಕೆಲವು ನುಡಿಮುತ್ತುಗಳನ್ನು ಎಲ್ಲರೂ ಸಂದರ್ಭಾನುಸಾರವಾಗಿ ಬಳಸಿಕೊಳ್ಳಬಹುದು. ಉದಾಹರಣೆಗೆ–

'ಎಳ್ಳಿನ ರುಚಿಯ ಹಾಗೆ,
ಬೆಲ್ಲದ ಸಿಹಿಯ ಹಾಗೆ
ಸಂತೋಷವಾಗಿರಲಿ ನಿಮ್ಮ ಜೀವನ' (68)

ಎಂಬ ನುಡಿಯನ್ನು ಸಂಕ್ರಾಂತಿ ಹಬ್ಬದಲ್ಲಿ ಶುಭಾಶಯವನ್ನು ಹೇಳುವಾಗ ಬಳಸಿದರೆ ಎಷ್ಟು ಚೆನ್ನಾಗಿರುತ್ತದೆ ಅಲ್ಲವೆ?

ಧರ್ಮವನ್ನು ಇಂದು ಅನೇಕರು ಜನಸಮೂಹವನ್ನು ಕೆರಳಿಸಲು, ಜಗಳವನ್ನು ತರಲು ಉಪಯೋಗಿಸಿಕೊಳ್ಳುತ್ತಿದ್ದಾರೆ. ರಾಜಕೀಯೋದ್ದೇಶಗಳ ಸಾಧನೆಗಾಗಿ ಸಮಾಜದ ಐಕ್ಯವನ್ನು ಒಡೆಯಲು ಧರ್ಮಗಳನ್ನು ದಾಳಗಳನ್ನಾಗಿ ಮಾಡಿಕೊಳ್ಳುತ್ತಿದ್ದಾರೆ. ಅವರು ನುಡಿದೀಪ್ತಿಯಲ್ಲಿರುವ ಒಂದು ನುಡಿಯನ್ನು ಗಮನಿಸಬೇಕು.

"ನಮ್ಮ ಧರ್ಮಗಳು ನಮಗೆ ಕೂಡಿ
ಬಾಳಲು ಕಲಿಸದೇ ಇದ್ದರೆ,
ಆ ಧರ್ಮಗಳು ಏಕೆ ಬೇಕು?" (100)

ಶಿವಕುಮಾರರು ಕೆಲವು ನುಡಿಗಳಲ್ಲಿ ಕಟುಸತ್ಯವನ್ನು ಹೇಳಿದ್ದಾರೆ. ಒಂದು ಉದಾಹರಣೆ–

"ವೇಶ್ಯೆಯೊಬ್ಬಳು ತನ್ನ ಆತ್ಮಚರಿತ್ರೆ
ಬರೆಯಲು ಹೊರಟಾಗ,
ಊರಿನ ಗಣ್ಯರೆಲ್ಲ ಆತ್ಮಹತ್ಯೆ
ಮಾಡಿಕೊಂಡರಂತೆ" (254)

ಇದು ಯಾವ ನೀತಿಯನ್ನೂ ಉಪದೇಶಿಸುವ ಸೂಕ್ತಿಯಲ್ಲ. ಆದರೆ ಸಮಾಜ ಹೇಗಿದೆ, ಗಣ್ಯರೆಂದು ಹೇಳಿಕೊಳ್ಳುವ ಮಹಾನು ಭಾವರ ಅಂತರಂಗದ ಬದುಕು ಹೇಗಿರಬಹುದು ಎಂಬ ಬಗೆಗೆ ಈ ನುಡಿ ಬೆಳಕನ್ನು ಚೆಲ್ಲುತ್ತದೆ. 'ಹೊಳೆಯುವುದೆಲ್ಲ ಚಿನ್ನವಲ್ಲ, ಬೆಳ್ಳಗಿರುವುದೆಲ್ಲ ಹಾಲಲ್ಲ' ಎಂಬ ಸತ್ಯವನ್ನು ಸೂಚ್ಯವಾಗಿ ತಿಳಿಸಿದೆ. ವಾಚ್ಯಕ್ಕಿಂತ ಸೂಚ್ಯ ಹೆಚ್ಚು ಪರಿಣಾಮಕಾರಿ ಎಂಬುದಕ್ಕೂ ಇದೊಂದು ಒಳ್ಳೆಯ ಉದಾಹರಣೆ.

ಹಿಂದಿನವರ ಹೇಳಿಕೆಗಳನ್ನು ತಮ್ಮ ಮಾತಿನಲ್ಲಿ ಹೇಳಿದ್ದಾರೆ ಶಿವಕುಮಾರರು ಎಂದು ಮೇಲೆ ಹೇಳಿದೆವು. ಇದಕ್ಕೆ ಅಪವಾದ, ಎಂದರೆ exception ಉಂಟು. ಸರ್ವಜ್ಞನ ವಚನ ವನ್ನು ಅವರು ಮೂಲರೂಪದಲ್ಲೇ ಕೊಟ್ಟಿದ್ದಾರೆ.

"ಹಿರಿತನವು ಹೇಡಿಂಗೆ ಗುರುತನವು ಮೂಢಂಗೆ
ದೊರೆತನವು ನಾಡ ನೀಚಂಗೆ ದೊರಕಿದರೆ
ಧರೆಗೆಲ್ಲ ಕೇಡು ಸರ್ವಜ್ಞ (441)

ಧೈರ್ಯವಿಲ್ಲದ ಹೇಡಿಗೆ, ಹಿರಿತನ ಸಿಕ್ಕಿದರೆ, ಜ್ಞಾನವಿಲ್ಲದ ಮೂಢನಿಗೆ ಗುರುಸ್ಥಾನ ದೊರಕಿದರೆ, ನೀಚನಿಗೆ ನಾಡಿನ ದೊರೆತನ ಉಂಟಾದರೆ ಸಮಸ್ತ ಭೂಲೋಕಕ್ಕೆ ಕೇಡುಕು ಎಂಬುದಿದರ ತಾತ್ಪರ್ಯ. ಇದನ್ನು ಮೂಲ ರೂಪದಲ್ಲೇ ಕೊಟ್ಟಿರುವುದೂ ಒಂದು ವಿಶೇಷ.

ನುಡಿದೀಪ್ತಿಯಲ್ಲಿರುವ ಕೆಲವು ನುಡಿಗಳಲ್ಲಿ ಅಪಾರ ಜ್ಞಾನವಿದೆ. ಯೋಚನೆ ಮಾಡಿ ದಷ್ಟೂ ಅವುಗಳ ಅರ್ಥ ವಿಸ್ತಾರಗೊಳ್ಳುತ್ತದೆ. ಚಿಂತನೆ ಮಾಡುವ ಬುದ್ಧಿ ಮತ್ತು ವೇಳೆ ಓದುಗರಿಗಿರಬೇಕು, ಅಷ್ಟೇ. ಒಂದು ಉದಾಹರಣೆ–

"ಒತ್ತಡವಿಲ್ಲದ ಉದ್ಯೋಗವಿಲ್ಲ, ನಷ್ಟವಿಲ್ಲದ ವ್ಯಾಪಾರವಿಲ್ಲ. ಕಷ್ಟವಿಲ್ಲದ ವ್ಯವಸಾಯವಿಲ್ಲ, ನೋವಿಲ್ಲದ ಸಂಸಾರವಿಲ್ಲ, ಸಮಸ್ಯೆಗಳಿಲ್ಲದ ಮನುಷ್ಯನಿಲ್ಲ, ಇವೆಲ್ಲವನ್ನು ಜಯಿಸುವುದೇ ಜೀವನ.

ಇಲ್ಲಿ ಒಂದೊಂದು ವಿಷಯವನ್ನೂ ಗಮನಿಸೋಣ. ಒತ್ತಡವಿಲ್ಲದ ಉದ್ಯೋಗವಿಲ್ಲ ಎಂಬುದು ಮೊದಲನೆದು. ಡಾಕ್ಟರುಗಳ ಉದ್ಯೋಗ ಅತ್ಯುತ್ತಮ, ಅವರ ಸಂಪಾದನೆಗೆ ಕೊನೆಯೇ ಇಲ್ಲ, ಹಾಯಾಗಿರುತ್ತಾರೆ ಎಂದು ನಾವು ಅಂದುಕೊಳ್ಳಬಹುದು. ಅವರನ್ನೇ ಕೇಳಿದರೆ ಆಗ ಅವರಿಗಿರುವ ಒತ್ತಡ ನಮಗೆ ತಿಳಿಯುತ್ತದೆ. ರೋಗಿಯನ್ನು ಉಳಿಸಲು ಸಕಲಪ್ರಯತ್ನ ಮಾಡಿದರೂ ಅವನು ಉಳಿಯದಿದ್ದಾಗ ವೈದ್ಯರಿಗೆ ಆಗುವ ನೋವು ಅವರಿಗೇ ಗೊತ್ತು. ವೈದ್ಯ ವೃತ್ತಿ ಬೇಡ, ಪೊಲೀಸರಾದರೆ ಉತ್ತಮವೆ? ಪೊಲೀಸರಿಗಂತೂ ಸದಾ ಉಭಯ ಸಂಕಟ. ಯಾವಾಗಲೂ ಅಪರಾಧಿಗಳ ಸಹವಾಸ. ಮೇಲಧಿಕಾರಿಗಳ ಕಾಟ–ರಾಜಕಾರಣಿಗಳ ಪೀಡೆ. ಹೊಡೆದರೂ ತಪ್ಪು, ಹೊಡೆಯದಿದ್ದರೂ ತಪ್ಪು. ಹಾಗಾದರೆ ರಾಜಕಾರಣಿಗಳಾದರೆ ಸುಖವೇ? ಚುನಾವಣೆಗೆ ನಿಂತಾಗ ಎಷ್ಟು ಹಣವಿದ್ದರೂ ಸಾಲದು. ಜನರು ಏನೇನೋ ಕೇಳುತ್ತಾರೆ. ಆಶ್ವಾಸನೆ ಕೊಡಬೇಕು. ಕೊಟ್ಟರೂ ಅದರ ಈಡೇರಿಕೆ ಅಸಾಧ್ಯ. ವಚನ ಭ್ರಷ್ಟರಾಗಬೇಕು. ವಿರೋಧಿ ಪಕ್ಷಗಳವರು ಮೊಸರಲ್ಲಿ ಕಲ್ಲು ಹುಡುಕುತ್ತಾರೆ. ಪ್ರತಿದಿನ ಹೊಸ ಹೊಸ ಸಮಸ್ಯೆಗಳು. ಹೀಗೆ ಯಾವ ಉದ್ಯೋಗದವರನ್ನು ಕೇಳಿದರೂ ಅವರ ಕಷ್ಟವನ್ನು ಹೇಳಿ ಇದು ಮಾತ್ರ ಬೇಡವೆನ್ನುತ್ತಾರೆ.

ಹಾಗೇ ನಷ್ಟವಿಲ್ಲದ ವ್ಯಾಪಾರವಿಲ್ಲ. ಯಾವ ವ್ಯಾಪಾರ ಮಾಡಲು ಹೊರಟರೂ ಸ್ಪರ್ಧೆ. ಸರಕು ಉಳಿದು ಹೋಗಿ ನಷ್ಟ ತರಕಾರಿ ಮಾರಿದರೂ ಅಷ್ಟೆ. ಇನ್ನು ವ್ಯವಸಾಯ. ಕಷ್ಟವಿಲ್ಲದ ವ್ಯವಸಾಯವಿಲ್ಲ. ಎಷ್ಟು ಕಷ್ಟ ಪಟ್ಟರೂ ಪ್ರಕೃತಿ ಕೈಕೊಟ್ಟರೆ ನಿಷ್ಫಲ. ಸಾಲ, ಸೋಲು. ಪ್ರತಿದಿನ ರೈತರ ಆತ್ಮಹತ್ಯೆ.

ನೋವಿಲ್ಲದ ಸಂಸಾರವಿಲ್ಲ. ಯಾರು ಯಾರಿಗೆ ಎಂತೆಂತಹ ನೋವು ! ಸಂತೋಷದ ನಿಮಿಷಗಳು, ದುಃಖದ ವರ್ಷಗಳು. ಸಂಸಾರಗಳು, ಕುಟುಂಬಗಳು ಸುಖಮಯವಾಗಿದ್ದಿದ್ದರೆ ಇಷ್ಟೊಂದು ವೇದಾಂತ, ವೈರಾಗ್ಯ ಏಕಿರುತ್ತಿತ್ತು? ಸಂನ್ಯಾಸದ ಕಲ್ಪನೆಯಾದರೂ ಏಕೆ ಹುಟ್ಟುತ್ತಿತ್ತು? ಬ್ರಹ್ಮಚಾರಿ ಜೀವನವನ್ನೇ ಏಕೆ ಅನೇಕರು ಆಶ್ರಯಿಸುತ್ತಿದ್ದರು?

ಸಮಸ್ಯೆಗಳಿಲ್ಲದ ಮನುಷ್ಯನಿಲ್ಲ. ಎಷ್ಟು ಹುಡುಕಿದರೂ ಯಾವ ಸಮಸ್ಯೆಗಳೂ ಇಲ್ಲದ ಮನುಷ್ಯ ದೊರಕುವುದಿಲ್ಲ. ಸಾಮಾನ್ಯ ಮನುಷ್ಯನಿಂದ ಪ್ರಧಾನಮಂತ್ರಿವರೆಗೆ, ಕಡು ಬಡವನಿಂದ ಶ್ರೀಮಂತನವರೆಗೆ ಎಲ್ಲರಿಗೂ ಸಮಸ್ಯೆಗಳಿವೆ. ಇದನ್ನೆಲ್ಲ ಅರಿತೂ ಉದ್ಯೋಗ ಹಿಡಿಯಬೇಕು, ವ್ಯಾಪಾರ ಮಾಡಬೇಕು. ಸಂಸಾರ ನಡೆಸಬೇಕು, ಮನುಷ್ಯನಾಗಿ ಬಾಳಬೇಕು. ಇದೇ ಬದುಕು.

ನುಡಿದೀಪ್ತಿಯ ಲೇಖಕ ನಗರ್ಲೆ ಶಿವಕುಮಾರರು ಇದಕ್ಕೆ ಮೊದಲೇ ಹನ್ನೆರಡು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಯಾವುದನ್ನೂ ಹಣ ಸಂಪಾದನೆಗಾಗಿ ಮಾಡಿಲ್ಲ. ಕನ್ನಡ ಪ್ರೀತಿಯಿಂದ, ಸಾಹಿತ್ಯದ ಒಲವಿನಿಂದ ಮಾಡಿದ್ದಾರೆ. ಪ್ರಾಜ್ಞರಾದ **ಪ್ರೊ. ಕೆ. ಅನಂತರಾಮು** ಅವರು "ಶಿವಕುಮಾರರು ಬಹಳ ಎಚ್ಚರ ವಹಿಸಿ ತಮ್ಮ ವಿವೇಚನಾಶಕ್ತಿಯನ್ನು ಪರಿಪೂರ್ಣವಾಗಿ ದುಡಿಸಿ, ಅತ್ಯಂತ ಶ್ರೇಷ್ಠವಾದ ನುಡಿಗಳನ್ನೇ ಸಂಗ್ರಹಿಸಿ, ಜೋಡಿಸಿ ಜಿಜ್ಞಾಸುಗಳ ಲೋಕಕ್ಕೆ ಸಮರ್ಪಿಸಿದ್ದಾರೆ..... ಶಿವಕುಮಾರರ ಶ್ರಮ ಸಾರ್ಥಕವಾಗಿದೆ" ಎಂದಿದ್ದಾರೆ. **ಪ್ರೊ. ಮಲೆಯೂರು ಗುರುಸ್ವಾಮಿಯವರು** "ನುಡಿದೀಪ್ತಿ ಕೃತಿಯ ಹೂರಣ ಶ್ರೀಯುತರ ಸಮೃದ್ಧ ಜೀವನಾನುಭವ, ವ್ಯಾಪಕ ಅಧ್ಯಯನ, ಮನನಗಳಿಗೆ ಸಾಕ್ಷಿಯಾಗಿದೆ. ಗೀಜಗನ ಪಕ್ಷಿ ನಯವಾಗಿ ಗೂಡು ಕಟ್ಟುವಂತೆ ಸೂಕ್ತಿಗಳ ಎಳೆಗಳಿಂದ ಮತ್ತೆ ಮತ್ತೆ ಓದಿ ಚಪ್ಪರಿಸುವಂತಹ 'ಸೂಕ್ತಿ ಮಾಲೆ'ಯನ್ನು ಕಟ್ಟಿಕೊಟ್ಟಿದ್ದಾರೆ. ಅವು ಬಹಳ ಧ್ವನಿಪೂರ್ಣವಾಗಿಯೂ ಇವೆ" ಎಂದಿದ್ದಾರೆ. **ಡಾ. ಬಿ.ವಿ. ವಸಂತಕುಮಾರ್** ಅವರು "ದೀಪದ ಗುಣ ಕತ್ತಲೆಯನ್ನು ಇಲ್ಲವಾಗಿಸುವುದು ಅರ್ಥಾತ್ ಬೆಳಕನ್ನು ಎಲ್ಲಾ ಕಡೆ ಪಸರಿಸುವುದು. ಅಂತೆಯೇ ಈ ನುಡಿದೀಪ್ತಿಯು ಜ್ಞಾನದ ಭ್ರಾಂತಿಯನ್ನು ಹೋಗಲಾಡಿಸಿ ಅರಿವಿನ ಅನುಭೂತಿಗೆ ಕಾರಣವಾಗುತ್ತದೆ" ಎಂದು ಹೇಳಿದ್ದಾರೆ. ವಿವಿಧ ಮೂಲಗಳಿಂದ ಶ್ರೇಷ್ಠ ಸೂಕ್ತಿಗಳನ್ನೂ ಮಾಹಿತಿಗಳನ್ನೂ ಸಂಗ್ರಹಿಸಿ ನುಡಿದೀಪ್ತಿಯನ್ನು ರಚಿಸಿರುವ ಶ್ರೀ ನಗರ್ಲೆ ಶಿವಕುಮಾರರಿಗೆ ಅಭಿನಂದನೆಗಳು.

ಮಹಿಳೆಯರಿಗೆ ರಾಜಕೀಯದಲ್ಲಿ ಹೆಚ್ಚು ಹೆಚ್ಚು ಅವಕಾಶ ಕಲ್ಪಿಸಬೇಕು

- ಭಾರತ ಕ್ಯಾನ್ಸರ್ ಆಸ್ಪತ್ರೆ ಸಂಸ್ಥಾಪಕ ಡಾ.ಅಜಯ್ ಕುಮಾರ್ ಅಭಿಮತ
- ಮಹಿಳಾ ದಿನಾಚರಣೆ ಅಂಗವಾಗಿ ಆಸ್ಪತ್ರೆ ವತಿಯಿಂದ ಬೈಕ್, ಸೈಕಲ್ ರ್‍ಯಾಲಿ
- ಮಹಿಳೆಯರಲ್ಲಿ ಹುಟ್ಟಿನಿಂದಲೇ ನಾಯಕತ್ವ ಗುಣವಿದೆ



ಮೈಸೂರು, ಮಾ.8(ಜಿಎ)– ಮಹಿಳೆಯರಿಗೆ ರಾಜಕೀಯ ಕ್ಷೇತ್ರದಲ್ಲಿ ಹೆಚ್ಚು ಹೆಚ್ಚು ಅವಕಾಶ ಕಲ್ಪಿಸಬೇಕು ಎಂದು ಭಾರತ್ ಕ್ಯಾನ್ಸರ್ ಆಸ್ಪತ್ರೆಯ ಸಂಸ್ಥಾಪಕ ಡಾ.ಬಿ.ಎಸ್. ಅಜಯ ಕುಮಾರ್ ಅಭಿಪ್ರಾಯಪಟ್ಟರು.

ಮೈಸೂರಿನ ಕಲಾಮಂದಿರದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಭಾರತ್ ಕ್ಯಾನ್ಸರ್ ಆಸ್ಪತ್ರೆ ವತಿಯಿಂದ ಆಯೋಜಿಸಿದ್ದ ಬೈಕ್ ಮತ್ತು ಸೈಕಲ್ ರ್‍ಯಾಲಿಗೆ ಚಾಲನೆ ನೀಡಿ ಮಾತನಾಡಿದ ಅವರು, ಮಹಿಳೆಯರು ರಾಜಕೀಯ ಮತ್ತು ಆಡಳಿತದಲ್ಲಿ ಮುಂಚೂಣಿಯಲ್ಲಿರುವಂತಹ ಸಮಯ ಬಂದಿದೆ. ಅವರಲ್ಲಿ ಹುಟ್ಟಿನಿಂದಲೇ ನಾಯಕತ್ವದ ಗುಣವಿದ್ದು, ಪ್ರತಿದಿನ ಕುಟುಂಬ ಮತ್ತು ಮನೆಯನ್ನು ನಡೆಸುವ ವಿಧಾನ ಅವರ ನಾಯಕತ್ವದ ಕೌಶಲ್ಯವನ್ನು ಸಾಬೀತುಪಡಿಸಿದೆ. ಹೀಗೆ ಮಹಿಳೆಯರು ಪಂಚಾಯತ್, ವಿಧಾನ ಸಭೆ ಮತ್ತು ಸಂಸತ್ತಿನಲ್ಲಿ ಕುಳಿತು ಜನರನ್ನು ಆಳಬೇಕಿದೆ. ಬೇಗೂರು ಮತ್ತು ಗುಂಡ್ಲುಪೇಟೆಯಲ್ಲಿ ಐದು ಸಾವಿರ ಮಹಿಳೆಯರಿಗೆ ರಾಜಕೀಯ ನಾಯಕತ್ವ ತರಬೇತಿಯನ್ನು ನಾವು ಪ್ರಾರಂಭಿಸಲಿದ್ದೇವೆ ಎಂದರು.

ಈಗಾಗಲೇ ನಮ್ಮ ಸಂಸ್ಥೆಯಾದ ಬಿಎಚ್‌ಐಒ ಮತ್ತು ಎಲ್ಲಾ ಎಚ್‌ಸಿಜಿ ಆಸ್ಪತ್ರೆಗಳಲ್ಲಿ ಶೇ.60 ವೈದ್ಯರು, ದಾದಿಯರು ಮತ್ತು ಆರೈಕೆದಾರರಾಗಿ ಮಹಿಳೆಯರು ಕೆಲಸ ಮಾಡುತ್ತಿದ್ದಾರೆ. ಆಸ್ಪತ್ರೆಯಲ್ಲಿ ನಾನು ಮಹಿಳೆಯನ್ನು ನೇಮಿಸಿಕೊಳ್ಳುವಾಗ ಆಕೆ ಬದ್ಧತೆ ಮತ್ತು ಪ್ರಾಮಾಣಿಕ ಕೆಲಸಗಾರ್ತಿ ಎಂದು ಖಚಿತಪಡಿಸಿಕೊಳ್ಳುತ್ತೇನೆ. ಹಾಗೇ ಮಹಿಳೆ ಹೆಚ್ಚು ಸರ್ವಜ್ಞಣ ಮನೋಭಾವವನ್ನು ಹೊಂದಿದ್ದು, ಆಕೆ ಪ್ರತಿದಿನ ನೂರರಷ್ಟು ಪ್ರಯತ್ನಪಡುತ್ತಾಳೆ. ಇಂದು ಮಹಿಳೆಯರು ತಂತ್ರಜ್ಞಾನ, ವಿಜ್ಞಾನ, ಕಲೆ, ರಕ್ಷಣೆ ಹೀಗೆ ಎಲ್ಲ ಕ್ಷೇತ್ರಗಳಲ್ಲಿ ಮುನ್ನುಗ್ಗುತ್ತಿದ್ದಾರೆ. ಅವರು ನಮ್ಮ ಸಶಸ್ತ್ರ ಪಡೆಗಳನ್ನು ಸೇರುತ್ತಿದ್ದಾರೆ. ಫೈಟರ್ ಜೆಟ್‌ಗಳನ್ನು ಸಹ ಹಾರಿಸುತ್ತಿದ್ದಾರೆ. ತಮ್ಮ ತನು ಮನವನ್ನು ಸೇವೆಯಲ್ಲಿ ತೊಡಗಿಸಿಕೊಳ್ಳುವುದರಿಂದ ಮಹಿಳೆಯರಿಗೆ ಎಲ್ಲಾ ಕ್ಷೇತ್ರಗಳಲ್ಲಿ ಯಶಸ್ಸು ಸಾಧ್ಯವಾಗಿದೆ ಎಂದರು.

ಮಹಿಳಾ ಸಬಲೀಕರಣ ಅಗತ್ಯವಿದೆ: ನಂತರ ಮೈಸೂರು ವಿವಿ ಸಮಾಜಶಾಸ್ತ್ರ ವಿಭಾಗದ ಮಾಜಿ ಮುಖ್ಯಸ್ಥರಾದ ಆರ್. ಇಂದಿರಾ ಮಾತನಾಡಿ, ಮಹಿಳೆಯರ ಕೆಲವು ಸಮಸ್ಯೆಗಳು ಪರಿಹಾರವಾಗಿವೆ. ಆದರೆ ಆನ್‌ಲೈನ್ ಅಪರಾಧಗಳಂತಹ ಹೊಸ ಸಮಸ್ಯೆಗಳು ಸೃಷ್ಟಿಯಾಗಿವೆ. ಜಾಗತಿಕವಾಗಿ ಮಹಿಳೆಯರಿಗೆ ಇಂಟರ್ನೆಟ್ ಬಳಕೆಗೆ ಅವ ಕಾಶ ಕಡಿಮೆ. ಕೋವಿಡ್ ಸಮಯದಲ್ಲಿ ಅಧ್ಯಯನಗಳ ಪ್ರಕಾರ 40 ಪ್ರತಿಶತ ಮಹಿಳೆಯರು ಆನ್‌ಲೈನ್ ಅವಕಾಶವನ್ನು ಹೊಂದಿರಲಿಲ್ಲ. ಇಂದಿಗೂ ಅನೇಕ ಸಾಂಪ್ರದಾಯಿಕ ಕುಟುಂಬಗಳು ತಮ್ಮ ಹೆಣ್ಣು ಮಕ್ಕಳಿಗೆ ಮೊಬೈಲ್ ಕೊಡುವುದಿಲ್ಲ. ಇದನ್ನೆಲ್ಲಾ ಗಮನಿಸಿದಾಗ ಮಹಿಳಾ ಸಬಲೀಕರಣ ಇನ್ನು ಅಗತ್ಯವಾಗಿದೆ ಎಂದರು.

ಲಿಂಗ ಸಮಾನತೆ ತರಬೇಕು: ಈ ವೇಳೆ ಭಾರತ್ ಆಸ್ಪತ್ರೆ ಮತ್ತು ಅಂಕೋಲಜಿ ಸಂಸ್ಥೆ (ಬಿಹೆಚ್‌ಐಒ)ಯ ನಿರ್ದೇಶಕಿ ಭಾಗ್ಯ ಅಜಯ್‌ಕುಮಾರ್ ಮಾತನಾಡಿ, ಕಲೆ, ವಿಜ್ಞಾನ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಮಹಿಳೆಯರ ಸಾಧನೆಗಳನ್ನು ಗುರುತಿಸಲು ಈ ದಿನವನ್ನು ನಿಗದಿ ಮಾಡಿದ್ದಾರೆ. ಲಿಂಗ ಸಮಾನತೆ ತರಲು ನಾವು ಗಮನಹರಿಸಬೇಕು. ಪ್ರತಿ ದಿನವನ್ನು ಮಹಿಳಾ ದಿನವನ್ನಾಗಿ ಮಾಡಿ, ಏಕೆಂದರೆ ಲಿಂಗ ಸಮಾನತೆಯನ್ನು ಸಾಧಿಸು ವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ನಮ್ಮಲ್ಲಿ ಅನೇಕರು ಆಕೆಯನ್ನು ಭೂಮಿತಾಯಿ, ಶಕ್ತಿಮಾತೆ, ಅರ್ಧನಾರೀಶ್ವರಿ ಎಂದು ಪೂಜಿಸುತ್ತಾರೆ. ಆದರೆ, ಪ್ರಾಯೋಗಿಕವಾಗಿ ಮಹಿಳೆಯ ಶಕ್ತಿಯನ್ನು ಇನ್ನೂ ಗುರುತಿಸಿಲ್ಲ. ಸಂಸತ್ತು ಮತ್ತು ವಿಧಾನಸಭೆಯಲ್ಲಿಯೂ ಅವರನ್ನು ಸಮಾನವಾಗಿ ಪರಿಗಣಿಸುವುದಿಲ್ಲ, ಸಮಾನ ವೇತನ ಮತ್ತು ಕಾರ್ಯಪಡೆಗಳಲ್ಲಿ ಸಮಾನ ಭಾಗವಹಿಸುವಿಕೆಗೆ ಅವಕಾಶಗಳನ್ನು ನೀಡುತ್ತಿಲ್ಲ ಎಂದು ಅಭಿಪ್ರಾಯಪಟ್ಟರು.



ರ್‍ಯಾಲಿ: 'ಉತ್ತಮ ಆರೋಗ್ಯಕ್ಕೆ ನಿಮ್ಮ ದಾರಿಯಲ್ಲಿ ಸವಾರಿ' ಎಂಬ ಘೋಷಣೆಯೊಂದಿಗೆ ಕಲಾಮಂದಿರದಿಂದ ಆರಂಭವಾದ ಬೈಕ್ ಮತ್ತು ಸೈಕಲ್ ರ್‍ಯಾಲಿ ಹುಣಸೂರು ರಸ್ತೆ, ಬಯಲು ರಂಗಮಂದಿರ ರಸ್ತೆ ಹಾಗೂ ಕುಕ್ಕರಹಳ್ಳಿ ಕೆರೆ ರಸ್ತೆ ಮೂಲಕ ಮತ್ತೆ ಕಲಾಮಂದಿರ ತಲುಪಿತು. ರ್‍ಯಾಲಿಯಲ್ಲಿ ಹಲವಾರು ಮಹಿಳೆಯರು ಮತ್ತು ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದರು.

ಕಾರ್ಯಕ್ರಮದಲ್ಲಿ ಮೈಸೂರಿನ ವಿದ್ಯಾವಿಕಾಸ್ ಕಾಲೇಜಿನ ಪ್ರಾಂಶುಪಾಲರಾದ ವಿನೋಲಿಯಾ ರಾಜ್, ಗೋಪಾಲ ಗೌಡ ಶಾಂತವೇರಿ ಕಾಲೇಜಿನ ಪ್ರಾಂಶುಪಾಲರಾದ ಯಶೋದಾ, ಕಾವೇರಿ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ನರ್ಸಿಂಗ್ ಸೂಪರಿಂಟೆಂಡೆಂಟ್ ಸ್ಮಿತಾ, ಸಂತ ಜೋಸೆಫರ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರಾದ ಮಮತಾ, ಕ್ಲಿಯರ್‌ಮೆಡಿ ರೇಡಿಯಂಟ್ ಆಸ್ಪತ್ರೆಯ ನರ್ಸಿಂಗ್ ಸೂಪರಿಂಟೆಂಡೆಂಟ್ ಡಾ.ಆಶಾ, ಶೇಷಾದ್ರಿಪುರಂ ಕಾಲೇಜಿನ ಪ್ರಾಂಶುಪಾಲರಾದ ಅರ್ಚನಾ ಮತ್ತು ನಾರಾಯಣ ಹೃದಯಾಲಯ ನರ್ಸಿಂಗ್ ಸೂಪರಿಂಟೆಂಡೆಂಟ್ ಶೇರ್ಲಿ ಅವರನ್ನು ಅಭಿನಂದಿಸಲಾಯಿತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ತಕ್ಷಣವೇ ಕೆಲಸ
ಮೈಸೂರು, ಹೆಬ್ಬಾಳ ಕಂಪನಿಯಲ್ಲಿ ಕೆಲಸ ಮಾಡಲು ಹುಡುಗರು, ಟೈಲರುಗಳು, ಹುಡುಗರು, ಹುಡುಗಿಯರು ಮತ್ತು ಗಂಡಸರು ಹೆಂಗಸರುಗಳು ಬೇಕಾಗಿದ್ದಾರೆ. ESI ಮತ್ತು PF ಹಾಗೂ ವಾರದ ರಜೆ ಇರುತ್ತದೆ. ಸಂಪರ್ಕಿಸಿ:
7795285485
8105249880

WANTED
Female Store Keeper for Medical Distributors - 4 No.s, Location - Ramavilas Road, (Near City Bus Stand), Timings : 10 to 7.30 (1 Hour Lunch Break) Contact:
7022345675
9739499933

ಟೀಕ್ (ಸಾಗವಾನಿ)
ಮರದ ರೌಂಡ್ ಲಾಗ್‌ಗಳು ಮಾರಾಟಕ್ಕಿವೆ.
Round Teak wood Logs for Sale
6360231221

FLAT FOR SALE
2 B/R Flat, 1370 sft., East Facing, 2nd Floor, RMV Elegance, beside Sindhoor Function Hall, Sterling Talkies, Heavy Discount on Full Payment Immediately.
Contact: 8867826676

ಸೈಟುಗಳು ಮಾರಾಟಕ್ಕಿವೆ
40x60 ಕಾರ್ನ್ ಯೂಬಿಟ್ಯಾಟ್ ದಟ್ಟಗಳ್ಳಿ
30x40 ಹೊಸ ಆರ್‌ಟಿ. ನಗರ ಹತ್ತಿರ
20x30 BEML ಲೇಔಟ್ ಹತ್ತಿರ.
Mob: 9740088990

20x30 ಡ್ಯೂಪ್ಲೆಕ್ಸ್ ಹೊಸ ಮನೆ – 68 ಲಕ್ಷ.
30x40 ಸೈಟು – ದಟ್ಟಗಳ್ಳಿ
20x30 ಸೈಟು – ದಟ್ಟಗಳ್ಳಿ ರೂ. 25 ಲಕ್ಷ.
ಹಳೆಮನೆ, ಹೊಸ ಮನೆ ಮಾರುವವರು, ಕೊಳ್ಳುವವರು ಸಂಪರ್ಕಿಸಿ:
Mob: 9945042875

ಬೇಕಾಗಿದ್ದಾರೆ
ಹೋಂ ನರ್ಸ್ ಕೆಲಸಕ್ಕೆ ಅನುಭವವಿರುವ ಯುವತಿಯರು ತಕ್ಷಣ ಬೇಕಾಗಿದ್ದಾರೆ. ವಯೋಮಿತಿ 18 ರಿಂದ 35 ವರ್ಷದವರಿರಬೇಕು, ವಿದ್ಯಾರ್ಹತೆ ಕನಿಷ್ಠ SSLC ಪಾಸ್ ಅಥವಾ ಫೇಲ್ ಆದವರು. ಸಂಬಳ: 18,000/- ದಿಂದ ಪ್ರಾರಂಭ. ಸಂಪರ್ಕಿಸಿ:
8951190340

ಬೇಕಾಗಿದ್ದಾರೆ
ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ.
(ಕನ್ನಡ, ತೆಲುಗು, ಹಿಂದಿ)
ಸ್ಥಳ: ಚಾಮುಂಡಿಪುರಂ ಮತ್ತು ಎನ್.ಆರ್.ಮೊಹಲ್ಲಾ, ಸಂಬಳ: 8000.
8150005111

ಜೆಮಿನಿ
ರೋಲಿಂಗ್ ಷಟ್ಟರ್ ಮೆಟೀರಿಯಲ್ಸ್
ಬಿಡಿ ಭಾಗಗಳ ತಯಾರಕರು ಮತ್ತು ಮಾರಾಟಗಾರರು
ರೌಂಡ್, ಬಾಕ್ಸ್, ಡಿಸೈನ್ ಪಟ್ಟಿಗಳು, ದಾಟಮ್ ಪ್ಲೇಟ್, ಚಾನಲ್, ಸ್ಪ್ರಿಂಗ್ ಇತ್ಯಾದಿ
ಚಿತ್ರವನ ರೆಸಾರ್ಟ್ ಎದುರು, ಮಾನಂದವಾಡಿ ರಸ್ತೆ, ಮೈಸೂರು
ಸಂಪರ್ಕಿಸಿ : 9740788263

SITE FOR SALE
GATEWAY MYSORE
30 X 40
WEST FACE
80% BANK LOAN AVAILABLE
(BROKER EXCUSE)
Opp. Manipal Hospital, Mys - Bang Ring Road Junction
Contact: 9945111044

ಬೇಕಾಗಿದ್ದಾರೆ
ಕಂಪನಿ ಕೆಲಸಕ್ಕೆ, ಯುವಕ–ಯುವತಿಯರು ಬೇಕಾಗಿದ್ದಾರೆ. ಊಟ ವಸತಿ ಉಚಿತ
10000–15000 ಸಂಬಳ
91485 16330
ಮಂಗಳೂರು

ಆಧುನಿಕ ವಿನ್ಯಾಸದ ಹೊಗೆ ರಹಿತ ಸೂರ್ಯ ಸೌದೆ ಒಲೆ ಗೃಹಬಳಕೆಗೆ ಹಾಗೂ ಹೋಟೆಲ್ ಕ್ಯಾಟರಿಂಗ್‌ಗಳಿಗೆ

ಕಡಿಮೆ ಖರ್ಚಿನಲ್ಲಿ ಬಳಸಬಹುದಾದ ಸೌದೆ ಒಲೆಗಳು ದೊರೆಯುತ್ತದೆ.
7019660686 / 8217329938

SITES FOR SALE
30x40 Sites BankLoan upto 80%, Near Gurur Bus Stop, Ramabainagar, Mysore. DTCP approved (Corporation Limits) 1.5 kms from J P Nagar Ring Road.
8660105902

ಬೇಕಾಗಿದ್ದಾರೆ
ವಿನಾಯಕ ಟ್ರಾಕ್ಟರ್ಸ್, ಮೈಸೂರು, ಜಾನ್ ಡೀರ್ ಟ್ರ್ಯಾಕ್ಟರ್ಸ್ ಅಧಿಕೃತ ಡೀಲರ್ ಟೆಕ್ನಿಷೀಯನ್– 05 ಪುರುಷರು ಮಾತ್ರ ಫೀಲ್ಡ್ ಆಫೀಸರ್ – 05, ಪುರುಷ ಮಾತ್ರ
9844269405
9743502602

ನೀವು ಚಲನಚಿತ್ರ ಕಲಾವಿದರೇ ಅಥವಾ ತಂತ್ರಜ್ಞರೇ
ನಿಮ್ಮಪ್ರತಿಭೆಗೆ ತಕ್ಕ ಅವಕಾಶ ನೀಡಲು ವೇದಿಕೆ ಸಿದ್ಧವಾಗಿದೆ. ಸದಸ್ಯರಾಗಲು ಕೂಡಲೇ ಸಂಪರ್ಕಿಸಿ:
ಮೈಸೂರು ಚಲನಚಿತ್ರ ಕಲಾವಿದರ ಹಾಗೂ ತಂತ್ರಜ್ಞರ ಒಕ್ಕೂಟ (ರಿ)
ಸಂಪರ್ಕಿಸಿ ಮೊಬೈಲ್:
8197966237/9880440098

ಬೇಕಾಗಿದ್ದಾರೆ
ಅಕೌಂಟ್ಸ್
ಟ್ಯಾಲಿ ಗೊತ್ತಿರಬೇಕು
ಹೆಲ್ಪರ್ಸ್‌ಗಳು ಬೇಕಾಗಿದ್ದಾರೆ
ಅನುಭವ ಬೇಕಾಗಿಲ್ಲ
ಜೈಭಾರತ್ ಮಾರ್ಕೆಟಿಂಗ್
ಗೀತಾ ಮಂದಿರ್ ರಸ್ತೆ, ದೊಡ್ಡ ಗುಜರಿ, ಮೈಸೂರು
Call: 0821-4252464

ಮನೆಯಿಂದಲೇ ಕೆಲಸ
ಪುಸ್ತಕ–ಬರೆಯುವುದು, ಡಾಟಾ ಎಂಟ್ರಿ, ಟೆಲಿಕಾಲಿಂಗ್ ಕೆಲಸ : ವಿದ್ಯಾರ್ಥಿಗಳು, ಗೃಹಿಣಿಯರು, ನಿರುದ್ಯೋಗಿಗಳು, ನಿವೃತ್ತ ನೌಕರರು ಮನೆಯಿಂದಲೇ ಕೆಲಸ ಮಾಡಿ ಉತ್ತಮ ಹಣವನ್ನು ಗಳಿಸಿ. ವಿದ್ಯಾರ್ಹತೆ ಅನುಭವ ಹಾಗೂ ಭಾಷೆಯ ಸಮಸ್ಯೆ ಇಲ್ಲ. ತಿಂಗಳಿಗೆ 15000 ದಿಂದ 30000 ಸಂಪಾದಿಸಿ.
7204299422 | 9980299833

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರೆ ನಾಲ್ವರ ದೈವ ಚೌಡಮ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

SITES FOR SALE
30x40 N/E Corner
30x50 West facing
40x60 Residential and 40x60 East facing commercial site.
Mob: 9844865607

JOB TRAINING AND PLACEMENT
1) CCTV Installation & Repair 2) Laptop Repair, 3) Drone Assembly, 4) ITR Filing / GST, 5) Soft Skills and Spoken English. Fees Rs 500/- Only. Duration, one Week
9663579654

FULL TIME JOBS FOR WOMENS
MNC is looking for Female Graduates/Diploma Age 29-45 Years Salary 1,80,000 /Annum +PF+ESI+Incentives
9880498509

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86000.
9740733021 / 9535028750

HOME LOANS
CORPORATION, MUDA, KHB GRAMATHANA PROPERTY
Site Purchase,
Site Construction
House Purchase
Site Mortgage
House Mortgage
ROI 6.65%
Contact: 9108416410

RS CONSTRUCTION
Engineers & Contractors
ನಿಮ್ಮ ಕನಸಿನ ಮನೆಯನ್ನು ಉತ್ಕೃಷ್ಟ ಗುಣಮಟ್ಟದಲ್ಲಿ ಅತ್ಯಂತ ಕಡಿಮೆ ಬೆಲೆಯಲ್ಲಿ ನಾವು ನಿರ್ಮಿಸಿ ಕೊಡುತ್ತೇವೆ.
ದರ 1,80,000/– ಪ್ರತಿ ಚದರ
ಉಚಿತ ಪ್ಲಾನ್ ಕೂಡ ಮಾಡಿಕೊಡಲಾಗುತ್ತದೆ. ಇಂದೇ ಸಂಪರ್ಕಿಸಿ:
9538575009, 7019151884

WANTED
For Furniture Showroom requred
Sales Executive - 1 No.
Accountant - 2 No.
Age: 18 to 35. Contact:
Mob: 8884551387

ತಕ್ಷಣ ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಮತ್ತು ಮೆಡಿಕಲ್ ಶಾಪ್‌ನಲ್ಲಿ ಕೆಲಸ ಮಾಡಲು ಮಹಿಳೆಯರು/ಹುಡುಗಿಯರು ಬೇಕಾಗಿದ್ದಾರೆ. ಸಂಬಳ: 8000 ರಿಂದ 11 ಸಾವಿರ ದವರೆಗೆ (ಅನುಭವದ ಆಧಾರದ ಮೇಲೆ). ಸಮಯ ಬೆ: 9.30ರಿಂದ ರಾತ್ರಿ 9.00 ರವರೆಗೆ. ಸ್ಥಳ: ಹೆಬ್ಬಾಳ, ಅಗ್ರಹಾರ, ನಜರ್‌ಬಾದ್ ಹಾಗೂ ಕೆ.ಜಿ.ಕೊಪ್ಪಲ್, ಮೈಸೂರು. ಸ್ಥಳೀಯರಿಗೆ ಆದ್ಯತೆ ಸಂಪರ್ಕಿಸಿ:
9986322444,
9986311444

ನಾಟಿ ಔಷಧ
ಮಂಡಿನೋವು ಎಷ್ಟು ಹಳೆಯದಾದರು ನಾವು ಕೊಡುವ ನಾಟಿ ಔಷಧಿಯಿಂದ ಕೇವಲ 15 ದಿನಗಳಲ್ಲಿ ಶಾಶ್ವತ ಪರಿಹಾರವಾಗುತ್ತದೆ. # 2129, ಶ್ರೀ ರಾಮಮಂದಿರ, ದೇವರಾಜ ಮಾರ್ಕೆಟ್ ಹಿಂಭಾಗ, ಸೀಬಯ್ಯ ರಸ್ತೆ, ದೇವರಾಜ ಮೊಹಲ್ಲಾ, ಮೈಸೂರು–570001
8884766288
7829087682

ಬೇಕಾಗಿದ್ದಾರೆ
ಮಾಟ್ರೆಸ್ ತಯಾರಿಕಾ ಕಂಪನಿಗೆ ಬೇಕಾಗಿದ್ದಾರೆ
* ಹೆಲ್ಪರ್ಸ್ – 10 * ಡ್ರೈವರ್ಸ್ – 2
4 ಚಕ್ರ ಮತ್ತು 6 ಚಕ್ರದ ವಾಹನಗಳ ಅನುಭವವಿರಬೇಕು. ಇಎಸ್‌ಐ ಮತ್ತು ಪಿಎಫ್ ಸೌಕರ್ಯ. ಸ್ಥಳ: ನಾಗವಾಲ, ಮೈಸೂರು. ವಯಸ್ಸು: 18 ರಿಂದ 35. ಸಂಪರ್ಕಿಸಿ:
Mob: 9686868912

ಬೇಕಾಗಿದ್ದಾರೆ
H.B.R.SILK ನಲ್ಲಿ ಕೆಲಸ ಮಾಡಲು (EXPERIENCE) ನುರಿತ ಲೇಡಿ ಸ್ಟಾಫ್ ಬೇಕಾಗಿದ್ದಾರೆ
ಸಂಬಳ 8000 ರಿಂದ 15000 ರವರೆಗೆ
ಸಂಪರ್ಕಿಸಿ : 9008931527, 9845112221

Sudarshan Saur
SOLAR WATER HEATER

ATTRACTIVE OFFER
ಸೇಲ್ಸ್&ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಶ್ರೀ ಮಹಾಲಕ್ಷ್ಮೀ ಟ್ರಾವೆಲ್ಸ್
27–3–2023: ಕಾಶಿ, ಗಯಾ, ಬುದ್ಧಗಯಾ, ಅಯೋಧ್ಯೆ. 17–4–2023: ಜಾರ್ಖಂಡ್, ಕೊಲ್ಕತ್ತಾ, ಭುವನೇಶ್ವರ, ಪುರಿ ಜಗನ್ನಾಥ್, ಕೋನಾರ್ಕ್. 26–4–2023: ಜಮ್ಮು, ಕಾಶ್ಮೀರ್, ವೈಷ್ಣೋದೇವಿ, ಪಂಜಾಬ್. 8–5–2023: ಗುಜರಾತ್, ನಾಗನಾಥ್, ಸೋಮ್‌ನಾಥ್, ದ್ವಾರಕಾ. 8–6–2023: ಚಾರ್ ಧಾಮ್ ಯಾತ್ರಾ, ಬದ್ರಿನಾಥ್, ಕೇದಾರ್‌ನಾಥ್, ಗಂಗೋತ್ರಿ, ಯಮುನೋತ್ರಿ. ಸಂಪರ್ಕಿಸಿ:
9591017782, 9964527782

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಇಂದೇ ಸಂಪರ್ಕಿಸಿ
ಮೈಸೂರಿನ ಪ್ರಸಿದ್ಧ ಕಂಪನಿ, ಆಫೀಸ್ ಮತ್ತು ಷೋರೂಂಗಳಿಗೆ ಕೆಲಸ ಮಾಡಲು 7th, SSLC, PUC, ITI, Any Degree,Pass/Fail ಆದವರಿಗೆ Cashier, Billing, Data Entry, Receptionist ಮತ್ತು Packers, Movers, Helpers ಮುಂತಾದ ಕೆಲಸಕ್ಕೆ 266 ಯುವಕ/ಯುವತಿಯರು ಬೇಕಾಗಿದ್ದಾರೆ. ಸಂಬಳ 14500/– ರಿಂದ 39000/– (ESI+PF+OT)ಪರತ್ತು ಅನ್ವಯ ಸಂಪರ್ಕಿಸಿ:
9980630131,
9980346131

ಸಂಪು
ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

Match Maker, Bride / Grooms
ಮದುವೆಯಾಗುವವರು ಸಂಪರ್ಕಿಸಿ
ಎಲ್ಲಾ ಜಾತಿಯ Govt. Jobs / Private ಸ್ವಂತ ಉದ್ದಿಮೆ / ಉದ್ಯೋಗ ಮೊದಲನೇ ಮದುವೆ, ಡಾಕ್ಟರ್ / ಇಂಜಿನಿಯರ್ / ಡಿಗ್ರಿ / etc. any ಎಲ್ಲಾ ಜಾತಿಯ ಸಾವಿರಾರು ವಧುಗಳು / ವರಗಳಿದ್ದಾರೆ. 16000 ವಧು ಗಳು, 32000 ವರರಿದ್ದಾರೆ. 1) ಲಿಂಗಾಯಿತ ಡೈವೋರ್ಸಿಗೆ ವರ. (2) ಒಕ್ಕಲಿಗ ಡೈವೋರ್ಸಿಗೆ 33 ವರ್ಷ. ಎಲ್ಲಾ ಜಾತಿಯ ವಧು / ವರರ ಮದುವೆಗೆ. ಓದಿಲ್ಲದ ಬಡವರ SSLC / PUC ವಧುಗಳಿಗೆ ಉಚಿತ / ಮದುವೆ / ಉದ್ಯೋಗ / ವಸತಿಗಾಗಿ.
7975728012

DOCUMENT LOST
Title Deed of House No. 2461, 2nd Stage, Rajivnagar, N.R. Mohalla, Mysuru, Regn. No. 1295/2002-03 North Sub Registrar Office, Mysuru, belongs to Ashok Patil. Finder will be please contact to this phone number
Mob: 9449130846
Sd/- Ayub Ahmed Khan, Advocate

SITE FOR SALE
40x50 West facing, Bogadi Railway Layout. Owner meeting. Brokers excuse.
Mob: 9844865607

PART TIME JOBS
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ.
(ಕೋರಿಯರ್ ಸೌಲಭ್ಯವಿದೆ)
87490 98879

JOB VACANCY
COUNSELLOR, Fresher, female, Graduate preferred. Communication skills, English, Kannada.
CADDCENTRE
V.V. Mohalla, Gokulam Road, Mysore-570 002
0821-4006323, 9880908444

HOUSE FOR RENT
30x40 Independent House 2 BHK With Solar Facility no 579, 9th Cross, Aravinda nagara, Mysore 570023
9448762797
9538307050

ಬೇಕಾಗಿದ್ದಾರೆ
ಹೂಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಆಟೋಮಿಟಿಕ್ ಅಕ್ಸೆಲ್ ಹತ್ತಿರ ಇರುವ ಕಂಪನಿಗೆ 50 ವರ್ಷದ ಒಳಗಿನ ಪುರುಷರು ಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳ: 12 ಗಂಟೆ ಕೆಲಸಕ್ಕೆ 15,000/– ಕೆಲಸದ ಸಮಯ :– ಬೆಳಿಗ್ಗೆ 8 ರಿಂದ ಸಂಜೆ 8 ರವರೆಗೆ ಕೂಡಲೇ ಸಂಪರ್ಕಿಸಿ: ಚಾಮುಂಡೇಶ್ವರಿ ಎಂಟರ್ ಪ್ರೈಸಸ್. ಲೋಕೇಶ್:
8722844236

ಶುಂಠಿ ಕೃಷಿಕರೆ
ಉತ್ತಮ ದರ್ಜೆಯ ಬೇವಿನ ಹಿಂಡಿ ಹಾಗೂ ಬೇವಿನ ಹುಡಿ ನಿಮ್ಮ ಸಮಕ್ಷಮ ಮಾಡಿಕೊಡಲಾಗುತ್ತದೆ.
ಶ್ರೀ ಕಾಮಾಕ್ಷಿ ಬಯೋ–ನೀಮ್ #203, ಬನ್ನಮಂಟಪ ಬಡಾವಣೆ, ಮೈಸೂರು–570 015
Mob: 80888-87802

Commercial (100x30) 80' Feet Road
@ Brahmin's Layout MUDA Approved (Near Srirampura Ring Road) Rs. 60 Lakhs.
Mob: 95388-39926

ಸೈಟ್ ಮಾರಾಟಕ್ಕೆ ಇದೆ
ಜ್ಞಾನ ಭಾರತಿ ಲೇಔಟ್ ಜೆ.ಪಿ. ನಗರ ಹತ್ತಿರ, ವೆಸ್ಟ್ ಫೇಸ್, ರಾಷ್ಟ್ರೋತ್ಥಾನ ಸ್ಕೂಲ್ ರೋಡ್
30x40 - Rs. 26.50 Lakhs, Nego.
Mob: 9901351633

HOUSE FOR RENT
1 BHK new house for rent in Krishnamurthypuram, East facing. Veg. only. Contact:
Mob: 9686895205

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಹೆಬ್ಬಾಳ್‌ದಲ್ಲಿ ಕೆಲಸ ಮಾಡಲು Telecaller (ಯುವತಿಯರು) ಬೇಕಾಗಿದ್ದಾರೆ. ವಯೋಮಿತಿ : 18–28, ಸಂಬಳ: 8,000 – 14,000, ವಿದ್ಯಾರ್ಹತೆ: SSLC, PUC, Diploma Any Degree. ಸಂಪರ್ಕಿಸಿ:
7899369558
7338009488

WANTED
Telecallers, Data Entry Operators
B.E. Civil, Accountant, Admin, 10th Pass / Fail. Male candidates requires.
Mob: 90355 60544

WANTED
Well Experienced Beautician Required for Reputed Beauty Parlour in Udayagiri, Mysore Attractive Salary offered. Contact:
9845591646

ತಕ್ಷಣ ಬೇಕಾಗಿದ್ದಾರೆ
ನಂಜನಗೂಡು ಸೇತುವೆ ಮತ್ತು ಕಲ್ಲಹಳ್ಳಿ ಇಂಡಸ್ಟ್ರೀಯಲ್ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಮತ್ತು ಸೆಕ್ಯೂರಿಟಿ ಸೂಪರ್‌ವೈಸರ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC, ಸಂಬಳ: S/Sup :- 16,000/- 8 hours, S/G :- 15,000 8 hours, ವಯೋಮಿತಿ : 50 ವರ್ಷದ ಒಳಗೆ. ESI ಮತ್ತು PF ಸೌಲಭ್ಯ ಇರುತ್ತದೆ. ಸಂಪರ್ಕಿಸ ಬೇಕಾದ ಸಂಖ್ಯೆಗಳು:
9620667819 / 9538567819

ಕಾರು ಚಾಲಕ ಬೇಕಾಗಿದ್ದಾರೆ
ಲೈಸೆನ್ಸ್ (ಪರವಾನಗಿ) ಹೊಂದಿರುವ 30 ರಿಂದ 50 ವರ್ಷ ವಯಸ್ಸಿನ ಕನಿಷ್ಠ 5 ವರ್ಷ ಅನುಭವವುಳ್ಳ ಕಾರು ಚಾಲಕ ಬೇಕಾಗಿದ್ದಾರೆ. ಸಂಬಳವನ್ನು ಅರ್ಹತೆ ಮೇಲೆ ನಿಗದಿ ಪಡಿಸಲಾಗುತ್ತದೆ. ದೂರವಾಣಿ ಅಥವಾ ಮೊಬೈಲ್ ಸಂಖ್ಯೆ ಇದ್ದರೆ ಅದರ ಜೊತೆಗೆ ಅರ್ಜಿ ಸಲ್ಲಿಸತಕ್ಕದ್ದು, ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ: 16.03.2023, ಅರ್ಜಿಯನ್ನು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ. ಹಿಂದೂಸ್ಥಾನ್ ಸ್ಪ್ರಿಂಗ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ. ನಂ.ಸಿ–111/112, ಇಂಡಸ್ಟ್ರಿಯಲ್ ಎಸ್ಟೇಟ್, ಯಾದವಗಿರಿ, ಮೈಸೂರು – 570020. e-mail id: springsbil@gmail.com

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್ ಮತ್ತು ಹೌಸ್‌ಕೀಪಿಂಗ್ Field officers age 35 to 50, ಸ್ಥಳ:– ಹೂಟಗಳ್ಳಿ, ಕೂರ್ಗಳ್ಳಿ, ಬೆಳವಾಡಿ ಸುತ್ತಮುತ್ತಲಿನ ಪ್ರದೇಶದಲ್ಲಿ
9945291877 / 8792089512
9901453272

ಸುವರ್ಣಾವಕಾಶ
ಸರ್ಕಾರದಿಂದ ನಿವೃತ್ತಿ ಹೊಂದಿರುವ ಹಾಗೂ ಸ್ವಯಂ ನಿವೃತ್ತಿ ಪಡೆದುಕೊಂಡಿರುವ ಸರ್ಕಾರಿ ಅಧಿಕಾರಿಗಳಿಗೆ ಮತ್ತು ಗೃಹಿಣಿಯರಿಗೆ ಹಾಗೂ ಆಸಕ್ತಿ ಇರುವ ಅಭ್ಯರ್ಥಿಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಫಿಕ್ಸಡ್ ತಿಂಗಳ ಸಂಬಳ, ESI / PF ಸಂಪರ್ಕಿಸಿ.
9110676257 / 9739239004

ಸೈಟುಗಳು ಮಾರಾಟಕ್ಕಿದೆ
ಚಾಮರಾಜನಗರದಲ್ಲಿ CHUDA Approved Layout NH ಗೆ ಹೊಂದಿಕೊಂಡಂತೆ ಇರುವ 30x40 ಅಳತೆಯ ಸೈಟುಗಳು ಮುಂಗಡ ಹಣ ಪಾವತಿಸಿ ಸೈಟು ನಿಮ್ಮದಾಗಿಸಿಕೊಳ್ಳಿ ಮತ್ತು ಬ್ಯಾಂಕ್ ಸಾಲ ದೊರೆಯುತ್ತದೆ. ಸಂಪರ್ಕಿಸಿ:
7411877778

WANTED
1BHK House or Flat.
Contact:
7259872695

ಹೆಸರು ಬದಲಾವಣೆ
Nandeesha S/o ಬಸವರಾಜೇ ಅರಸು ಕೆಂಚಲಗೂಡು ಗ್ರಾಮ, ಜಯಪುರ ಹೋಬಳಿ, ಮೈಸೂರು ಜಿಲ್ಲೆ – 570008 ಆದ ನಾನು ಈ ಮೂಲಕ ಪ್ರಮಾಣೀಕರಿಸುವುದೇನೆಂದರೆ, ಆಧಾರ್ ಕಾರ್ಡ್‌ನಲ್ಲಿ Nandeesha ಎಂಬುದಾಗಿ ನಮೂದಾಗಿರುತ್ತಾರೆ. ಆಕ್ಸಿಸ್ ಬ್ಯಾಂಕ್‌ನ ಖಾತೆಯಲ್ಲಿ Nandiesh ಎಂಬುದಾಗಿ ನಮೂದಿಸಿರುತ್ತದೆ. ಆಧಾರ್ ಕಾರ್ಡ್‌ನಲ್ಲಿ ನಮೂದಾಗಿರುವ Nandeesha ಎಂಬ ಹೆಸರು ಸರಿಯಾಗಿರುತ್ತದೆ ಎಂದು ದಿನಾಂಕ: 1–3–2023 ರಂದು ನೋಟರಿ ಸಿ.ಆರ್.ಸೀತಾರಾಮ ರವರ ಸಮ್ಮುಖದಲ್ಲಿ ಪ್ರಮಾಣೀಕರಿಸಿರುತ್ತೇನೆ.
ಸಹಿ/– Nandeesha

ಬೇಕಾಗಿದ್ದಾರೆ
ಟೆಲಿಕಾಲರ್ಸ್ – 10
ಟೀಮ್ ಲೀಡರ್ಸ್ – 05
ಫೀಲ್ಡ್ ಎಕ್ಸಿಕ್ಯೂಟಿವ್ಸ್ – 10
ಮೈಸೂರಿನ ಕಲೆಕ್ಷನ್ ಕಚೇರಿಯಲ್ಲಿ ಕೆಲಸ ಮಾಡಲು ಈ ಮೇಲ್ಕಂಡ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಪರ್ಕಿಸಿ:
8867574400 / 8861993337

ಸೈಟು ಮಾರಾಟಕ್ಕಿದೆ
30x40 C/W face Bramin Layout D. Block, Near Dattagalli.
9886481265
8310972636

SITE FOR SALE
KHB ಕೆಂಚಲಗೂಡು 20x30, W/F Behind Bramin Layout
9886481265
8310972636

SITE FOR SALE
MUDA SITE measurement 30x40, East Face, Kalparuksha Nagar, Kesare 3rd Stage.
9900581604
7676126645

ಮೈಸೂರು ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ಎಲ್ಲಾ ವಯಸ್ಸಿನ ಎಲ್ಲಾ ವಿದ್ಯಾವಂತ ವಧು ವರರಿಗೆ ಸಂಪರ್ಕಿಸಿ. ಮತ್ತು ವಿದೇಶದಲ್ಲಿರುವ ಎಲ್ಲಾ ಜಾತಿಯ ವಧುವರರಿಗೆ ಸಂಪರ್ಕಿಸಿ. ವಧುವರರ ಸಂಪೂರ್ಣ ಜಾತಕವನ್ನು ಮಾಡಿಕೊಡಲಾಗುತ್ತದೆ.
ಡಾ.ಗುರೂಜಿ ಮೈಸೂರು
9448229184
7899625268

ನಿವೃತ್ತ ನೌಕರರಿಗೆ ಉದ್ಯೋಗಾವಕಾಶ ಸೆಮಿನಾರ್
ಭಾರತದ ಅತ್ಯಂತ ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಉದ್ಯೋಗ ಮತ್ತು Business ಅವಕಾಶದ ಸೆಮಿನಾರ್ ಏರ್ಪಡಿಸಲಾಗಿದೆ. Benifits: Fixed Salary + PF + ESI + ಇತರೆ ಭತ್ಯೆಗಳು ಲಭ್ಯವಿರುತ್ತದೆ. ಬೇಕಾಗುವ ದಾಖಲಾತಿಗಳು : ಫೋಟೋ, ಪಾನ್ ಕಾರ್ಡ್, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಪುಸ್ತಕ. ಮೌರ್ಯ ರೆಸಿಡೆನ್ಸಿ, ಹರ್ಷ ರಸ್ತೆ, ಮೈಸೂರು.
9448376423 / 9886883858

ಕಳೆದಿದೆ
ಮೊಹಮ್ಮದ್ ಆತಿಫ್.ಕೆ.ಎ S/o ಲೇಟ್ ಅಬು ಮೊಹಮ್ಮದ್ ರವರ ಬಾಬ್ತು ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಬೆಲವತ್ತ ಗ್ರಾಮದ ಸರ್ವೆ ನಂ. 137/1 ರಲ್ಲಿ ನಿರ್ಮಿಸಿರುವ ಬಡವಾಣೆಯ ಬೆಂಚ್ ಮಾರ್ಕ್ ಲೇ ಔಟ್ ನ ನಿವೇಶನ ಸಂಖ್ಯೆ 25 ನಂಬರಿಗೆ ಸಂಬಂಧಿಸಿದ ಮುಡಾ ಖಾತೆಯ ಮೂಲ ದಾಖಲಾತಿಗಳು ಕಳೆದು ಹೋಗಿರುತ್ತದೆ. ಸಿಕ್ಕವರು ಈ ಕೆಳಕಂಡ ಮೊಬೈಲ್ ಸಂಖ್ಯೆ ಸಂಪರ್ಕಿಸುವುದು.
9742707892

WANTED DTP OPERATOR
having good Kannada & English Typing skills Computer Knowledge Only for Female.
ಕಂಪ್ಯೂಟರ್ ಮತ್ತು ಡಿ.ಟಿ.ಪಿ ಆಪರೇಟರ್ ಬೇಕಾಗಿದ್ದಾರೆ. (ಕನ್ನಡ & ಇಂಗ್ಲೀಷ್ ಟೈಪಿಂಗ್ ಉತ್ತಮವಾಗಿ ತಿಳಿದಿರುವವರು) ಸಂಪರ್ಕಿಸಿ:
8050473454 / 9964982228

ಬೇಕಾಗಿದ್ದಾರೆ
ಟ್ರೆಂಡ್ಸ್ ಸೆರಾಮಿಕ್ ಅಂಡ್ ಸಾನಿಟೇಷನ್ ಬೋಗಾದಿ ಮೈಸೂರು. ಟೈಲ್ಸ್ ಜ್ಞಾನ ಮತ್ತು ಕಂಪ್ಯೂಟರ್ Tally ಜ್ಞಾನ ಹೊಂದಿರುವ ಹುಡುಗಿ ಮತ್ತು ಟೈಲ್ಸ್ ಲೋಡಿಂಗ್ ಮಾಡಲು ಹುಡುಗ ಬೇಕಾಗಿದ್ದಾರೆ.
9108668282 / 9448361818

Part Time JOB ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ
Mens Wear Shop, Kuvempunagar
9742076736
8310093516

ಬೇಕಾಗಿದ್ದಾರೆ
ಪ್ರತಿಷ್ಠಿತ ಕಂಪನಿಗಳಲ್ಲಿ Loan Recovery ಮಾಡಲು Collection Executive ಗಳು ಬಿಳಿಕೆರೆ, ಹುಣಸೂರು, ಕೆ.ಆರ್.ನಗರ ಈ ಸ್ಥಳಗಳಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಸ್ವಂತ ದ್ವಿಚಕ್ರ ವಾಹನವುಳ್ಳವರು ಮತ್ತು ದ್ವಿತೀಯ ಪಿಯುಸಿ ಪಾಸಾದವರಿಗೆ ಆದ್ಯತೆ. ಸಂದರ್ಶನ ದಿ: 10/3/2023
9901945444 / 9980929313

ಹೊಸ ಮನೆ ಬಾಡಿಗೆಗೆ ಇದೆ
30x40, 2BHK
ಸಸ್ಯಾಹಾರಿಗಳಿಗೆ ಆದ್ಯತೆ, ಶ್ರೀ ಬೈರವೇಶ್ವರ ಬಡಾವಣೆ, ನ್ಯಾಯಾಂಗ ಬಡಾವಣೆ ಪಕ್ಕ, ಮೈಸೂರು. ಸಂಪರ್ಕಿಸಿ:
9480482815
9482063693

SITE FOR SALE
30x40 West Facing Panchacharya Layout Near SVEI School Vijayanagar 4th Stage
9620451565

SITE FOR SALE
40x60 East facing 40 Feet Road Vijayanagara 4th stage 2nd PHASE Near MARIMALLAPPA SCHOOL
9845809369

ಸಾಲ /LOANS
* House Purchase Loan
* Site Purchase Loan
* Construction Loan
* Mortgage Loan
MUDA, Corporation & Revenue Property
7760598705

WANTED
Office Assistant (Female Only) Qualification: Any Degree with knowledge of MS Excel, Word. Contact:
9606539394
08212953294

HOUSE FOR RENT
Bank / Govt. Employees only. 1BHK 2nd Floor at Srirampura 2nd Stage, Main Road, Mysore - 570023. Contact No.
9739004633

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 6 ರಲ್ಲಿ

ಶ್ರೀ ಆದಿಚುಂಚನಗಿರಿ ಜಾತ್ರಾ ಮಹೋತ್ಸವಕ್ಕೆ ತೆರೆ



ನಾಗಮಂಗಲ, ಮಾ.8– ತಾಲೂಕಿನ ಇತಿಹಾಸ ಪ್ರಸಿದ್ಧ ಆದಿಚುಂಚನಗಿರಿಯಲ್ಲಿ 9 ದಿನಗಳ ಕಾಲ ನಡೆದ ಜಾತ್ರಾ ಮಹೋತ್ಸವವು ಇಂದು ಜಗದ್ಗುರು ಡಾ. ನಿರ್ಮಲಾನಂದನಾಥ ಸ್ವಾಮೀಜಿಯವರಿಂದ ಧರ್ಮ ಧ್ವಜಾವರೋಹಣ, ಬೆಟ್ಟದ ಮೇಲ್ಭಾಗದಲ್ಲಿರುವ ಬಿಂದು ಸರೋವರದಲ್ಲಿ ರಕ್ಷಾಬಂಧನ ವಿಸರ್ಜಿಸಿ, ಅವಭೃತ ಸ್ನಾನ ಮತ್ತು ವಿವಿಧ ಪೂಜಾ ಕೈಂಕರ್ಯಗಳೊಂದಿಗೆ ಸಮಾರೋಪಗೊಂಡಿತು.

ಫೆಬ್ರವರಿ 28ರಂದು ಆರಂಭಗೊಂಡಿದ್ದ ಜಾತ್ರಾ ಮಹೋತ್ಸವವು ಪ್ರತಿದಿನ ಗುರು ದೈವತಾ ಉತ್ಸವಗಳು, ಕ್ರೀಡಾ ಸ್ಪರ್ಧೆಗಳು, ನಾಟಕಗಳು, ಕೃಷಿ ಮತ್ತು ಕೈಗಾರಿಕೆ ವಸ್ತು ಪ್ರದರ್ಶನ, ಸಾಮೂಹಿಕ ವಿವಾಹ, ಹಿರಿಯ ದಂಪತಿಗಳಿಗೆ ಸನ್ಮಾನ, ಸಂಘ–ಸಂಸ್ಥೆಗಳ ಸಮ್ಮಿಲನ, ಪವಿತ್ರ ಜ್ವಾಲಾಪೀಠಾರೋಹಣ, ಸರ್ವಧರ್ಮ ಸಮ್ಮೇಳನ, ಮಹಾರಥೋತ್ಸವ ಹಾಗೂ 164 ಗ್ರಾಮ ದೇವತೆಗಳೊಂದಿಗೆ ಗಿರಿ ಪ್ರದಕ್ಷಿಣೆ ಹೀಗೆ ಅನೇಕ ಕಾರ್ಯಕ್ರಮಗಳು ನಡೆದು ಇಂದು ಆದಿಚುಂಚನಗಿರಿ ಶಾಖಾ ಮಠಗಳ ಪೂಜ್ಯರುಗಳು ಮತ್ತು ಭಕ್ತಾದಿಗಳ ಸಮ್ಮುಖದಲ್ಲಿ ಶುಭ ಸಂಪನ್ನಗೊಂಡಿತು.

ನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಗಳು ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ ಇತರರಿಂದ ಸಹಾಯ ಪಡೆದವರೆಲ್ಲರೂ ಕೃತಜ್ಞತಾ ಭಾವದಿಂದ ಋಣದ ಭಾರವನ್ನು ಕಳೆದುಕೊಳ್ಳಬೇಕು, ದೇವರು ಸಕಲ ಜೀವ ಸಂಕುಲದಲ್ಲಿ ಸೇವೆಯನ್ನು ಮಾಡುವ ಮಾನವನಿಗೆ ಮಾತ್ರ ಪಂಚ ಋಣ ಭಾರವನ್ನು ನೀಗಿ, ದೈವತ್ವಕ್ಕೆ ಏರುವ ಅವಕಾಶವನ್ನು ಕೊಟ್ಟಿದ್ದಾನೆ, ಆದ್ದರಿಂದ ಸದಾ ಶ್ರೇಷ್ಠ ಸೇವೆಯನ್ನು ಮಾಡುತ್ತಾ ಪುನೀತರಾಗಿ ಎಂದು ಹರಸಿದರು.

ಶ್ರೀ ಮಠದ ಪ್ರಧಾನ ಕಾರ್ಯದರ್ಶಿ ಶ್ರೀ ಪ್ರಸನ್ನನಾಥ ಸ್ವಾಮೀಜಿ ಪ್ರಾಸ್ತಾವಿಕ ನುಡಿಗಳನ್ನಾಡಿದರು, ಸಂಸ್ಕೃತ ವಿದ್ವಾಂಸರಾದ ಶ್ರೀಕಾಂತ ಪುರೋಹಿತರು ಅವಭೃತ ಸ್ನಾನದ ಮಹತ್ವ ಮತ್ತು ಹಿನ್ನೆಲೆಯನ್ನು ವಿವರಿಸಿದರು. ವಿಶ್ವೇಶ್ವರಯ್ಯ ಜಲ ಭಾಗ್ಯ ನಿಗಮದ ನಿವೃತ್ತ ಅಭಿಯಂತರ ಶ್ರೀಮಾಧವ ವಿದ್ಯಾರ್ಥಿಗಳ ಅಭ್ಯುದಯಕ್ಕೆ ಪ್ರೋತ್ಸಾಹಕ ನುಡಿಗಳನ್ನಾಡಿದರು. ಕರ್ನಾಟಕ ಸರ್ಕಾರದ ನೀರಾವರಿ ಇಲಾಖೆಯ ಮುಖ್ಯ ಕಾರ್ಯದರ್ಶಿ ಮೃತ್ಯುಂಜಯ ಸ್ವಾಮಿ, ಶ್ರೀ ಮಠದ ಚೈತನ್ಯನಾಥ ಸ್ವಾಮೀಜಿ, ಹಾಸನ ಶಾಖಾ ಮಠದ ಶಂಭುನಾಥ ಸ್ವಾಮೀಜಿ, ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್‌ನ ಆಡಳಿತಾಧಿಕಾರಿ ಡಾ. ಎ.ಟಿ.ಶಿವರಾಮು, ಬಿಜಿಎಸ್ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಬಿ.ಕೆ. ನರೇಂದ್ರ, ಜಾನಪದ ವಿದ್ವಾಂಸ ಹ.ಕ. ರಾಜೇಗೌಡರ ಪುತ್ರಿ ಡಾ. ಚೇತನಾ ರಾಜೇಗೌಡ, ಡಾ. ರಮ್ಯಾ ಸೂರಜ್ ಹಾಗೂ ಇತರರಿದ್ದರು.

ಮಹಿಳಾ ಸಬಲೀಕರಣದಿಂದ ಆರ್ಥಿಕ ಸ್ವಾವಲಂಬನೆ

ನಗರಸಭಾ ಅಧ್ಯಕ್ಷ ಮಂಜು ಅಭಿಮತ



ಮಂಡ್ಯ, ಮಾ.8– ಮಹಿಳೆ ಸಬಲೀಕರಣಗೊಂಡರೆ ಆರ್ಥಿಕ ಸ್ವಾವಲಂಬನೆ ಚೇತರಿಸಿಕೊಳ್ಳುತ್ತದೆ ಎಂದು ನಗರಸಭಾ ಅಧ್ಯಕ್ಷ ಮಂಜು ಅಭಿಪ್ರಾಯಪಟ್ಟರು.

ನಗರಸಭೆ ಕಾರ್ಯಾಲಯ ಆವರಣದಲ್ಲಿ ಜಿಲ್ಲಾ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ನಗರಸಭೆ, ಪುರಸಭೆ ಮತ್ತು ಪಟ್ಟಣಪಂಚಾಯತ್ ಇವರು ಆಯೋಜಿಸಿದ್ದ ವಿಶ್ವ ಮಹಿಳಾ ದಿನಾಚಣೆ ಪ್ರಯುಕ್ತ ಡೇ.ನಲ್ಮ್ ಯೋಜನೆಯ ಸ್ವ–ಸಹಾಯ ಗುಂಪುಗಳು ಉತ್ಪಾದಿಸಿದ ಉತ್ಪನ್ನಗಳ ವಸ್ತು ಪ್ರದರ್ಶನ ಮತ್ತು ಮಾರಾಟ ಹಾಗೂ ಸ್ವನಿಧಿ–ಸೇ–ಸಮೃದ್ಧಿ ಮೇಳವನ್ನು ಉದ್ಘಾಟಿಸಿ ಮಾತನಾಡಿದರು.

ಸಕಲ ಕ್ಷೇತ್ರಗಳಲ್ಲೂ ಮಹಿಳೆ ಸಬಲೀಕರಣಗೊಂಡರೆ ಆರ್ಥಿಕ ಸ್ವಾವಲಂಬನೆ ಚೇತರಿಸಿಕೊಳ್ಳುತ್ತದೆ. ಹೆಣ್ಣು ಅಬಲೆಯಲ್ಲ, ಸಬಲೆಯಾಗಿ ಬೆಳೆಯುತ್ತಿದ್ದಾಳೆ. ಮಗಳಾಗಿ, ತಾಯಿಯಾಗಿ, ಹೆಂಡತಿಯಾಗಿ ನಮ್ಮ ಬಾಳಲ್ಲಿ ತಮ್ಮದೇ ಆದ ಕೊಡುಗೆಗಳನ್ನು ನೀಡುತ್ತಿದ್ದಾರೆ ಎಂದು ನುಡಿದರು. ನಲ್ಮ್ ಯೋಜನೆಯಡಿ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು, ಸ್ವ ಉದ್ಯೋಗಿಯಾಗಿ ಇತರರಿಗೆ ಉದ್ಯೋಗ ನೀಡುತ್ತಿರುವುದು ಸಂತಸ ನೀಡುತ್ತಿದೆ. ಯಾವುದೇ ಅಡಮಾನವಿಲ್ಲದೆ ಆಧಾರ್ ದಾಖಲಾತಿ ನೀಡಿ 10 ಸಾವಿರ ರೂ. ಸಾಲ ಪಡೆದು, ಉದ್ಯಮ ಆರಂಭಿಸಿ, ಸಮರ್ಪಕವಾಗಿ ಸಾಲ ತೀರಿಸಿದವರು 50 ಸಾವಿರ ರೂ.ವರೆಗೂ ಸಾಲ ಪಡೆಯಬಹುದಾಗಿದೆ ಎಂದು ಮಾಹಿತಿ ನೀಡಿದರು. ಬಳಿಕ ಮಾತನಾಡಿದ ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಎನ್.ಆರ್.ವೇಣುಗೋಪಾಲ್, ಪಿಎಂ.ಸ್ವನಿಧಿ ಯೋಜನೆಯಡಿ ಸಾಲ ಸೌಲಭ್ಯ ಪಡೆದಿರುವ ಬೀದಿ ಬದಿ ವ್ಯಾಪಾರಸ್ಥರಿಗೆ ಮಾಹಿತಿ ನೀಡಲಾಗುತ್ತಿದೆ, ಕೇಂದ್ರ ಸರ್ಕಾರದ 8 ಯೋಜನೆಗಳ ಸೌಲಭ್ಯಗಳನ್ನು ಒದಗಿಸುವ ಮಹತ್ವವಾದ ಕಾರ್ಯ ಸಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಪೌರಾಯುಕ್ತ ಮಂಜುನಾಥ್, ನಗರಸಭಾ ಸ್ಥಾಯಿ ಸಮಿತಿ ಅಧ್ಯಕ್ಷೆ ಮೀನಾಕ್ಷಿ, ಸದಸ್ಯರಾದ ಶ್ರೀಧರ್, ನಾಗೇಶ್, ರಜನಿ, ಸೌಭಾಗ್ಯ, ಪವಿತ್ರಾ, ಪ್ರಾಧ್ಯಾಪಕಿ ಡಾ.ಎಂ.ಬಿ.ಪ್ರಮೀಳಾ ಮತ್ತಿತರರಿದ್ದರು.

ಶಾಲೆಯಲ್ಲಿ ಸಿಲಿಂಡರ್, ಆಹಾರ ಪದಾರ್ಥ ಕಳವು



ಕಿಕ್ಕೇರಿ– ಹೋಬಳಿಯ ಚುಜ್ಜಲಕ್ಯಾತನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಅಂಗನವಾಡಿ ಕೇಂದ್ರದಲ್ಲಿದ್ದ ಬಿಸಿಯೂಟದ ಗ್ಯಾಸ್ ಸಿಲಿಂಡರ್ ಗಳನ್ನು ದುಷ್ಕರ್ಮಿಗಳು ಕಳವು ಮಾಡಿರುವ ಪ್ರಕರಣ ಸೋಮವಾರ ರಾತ್ರಿ ಜರುಗಿದೆ.

ಸೋಮವಾರ ಎಂದಿನಂತೆ ಶಾಲೆಯ ಬಾಗಿಲು ಹಾಕಿಕೊಂಡು ಮನೆಗೆ ಶಿಕ್ಷಕರು ತೆರಳಿದ್ದಾರೆ. ದುಷ್ಕರ್ಮಿಗಳು ಅಂಗನವಾಡಿ ಹಾಗೂ ಶಾಲೆಯ ಬಾಗಿಲು ಬೀಗ ಮುರಿದು ಒಳ ಪ್ರವೇಶ ಮಾಡಿ ಗ್ಯಾಸ್ ಸ್ಟವ್, ಸಿಲಿಂಡರ್ ಹಾಗೂ 22 ಕೆ.ಜಿ. ಬ್ಯಾಗ್ ಇರುವ ಅಕ್ಕಿ ಮೂಟೆ ಕದ್ದಿದ್ದಾರೆ. ಪಕ್ಕದಲ್ಲಿಯೇ ಇದ್ದ ಶಾಲೆ ಬೀಗ ಮುರಿದು ಅಡುಗೆ ಕೋಣೆಯಲ್ಲಿದ್ದ ಒಂದು ತುಂಬಿದ ಹಾಗೂ 2 ಖಾಲಿ ಗ್ಯಾಸ್ ಸಿಲಿಂಡರ್ ಕದ್ದಿದ್ದಾರೆ. ಮುಖ್ಯಶಿಕ್ಷಕರ ಕೊಠಡಿ ಬೀಗ ಮುರಿದು ಇಲ್ಲಿದ್ದ ಎಣ್ಣೆ, ಸಕ್ಕರೆ, ಕಡಲೆಬೇಳೆ, ಹಾಲಿನ ಪುಡಿ, ಕಡಲೆಬೀಜ, ತೊಗರಿ ಬೇಳೆಯಂತಹ ಆಹಾರ ಪದಾರ್ಥ ಕಳವು ಮಾಡಿದ್ದಾರೆ. ಮಂಗಳವಾರ ಅಡುಗೆ ಮಾಡಲು ಸಿಲಿಂಡರ್ ಇಲ್ಲದೆ ಸೌದೆ ಬಳಸಿ ಮಕ್ಕಳಿಗೆ ತೊಂದರೆಯಾಗದಂತೆ ಬಿಸಿಯೂಟ ವ್ಯವಸ್ಥೆ ಮಾಡಲಾಗಿದೆ. ಕಿಕ್ಕೇರಿ ಪೊಲೀಸ್ ಠಾಣೆಗೆ ಮುಖ್ಯಶಿಕ್ಷಕ ಎಲ್.ಎಸ್. ಧರ್ಮಪ್ಪ ದೂರು ನೀಡಿದ್ದಾರೆ.

ನಾಗಮಂಗಲದಲ್ಲಿ ಬಿಜೆಪಿ ವಿಜಯ ಸಂಕಲ್ಪ ಯಾತ್ರೆ



ನಾಗಮಂಗಲ, ಮಾ.8– ವಿಧಾನಸಭಾ ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ನಾಗಮಂಗಲ ತಾಲೂಕಿಗೆ ಇಂದು ಬಿಜೆಪಿ ವಿಜಯ ಸಂಕಲ್ಪ ಯಾತ್ರೆಯ ರಥ ಸೌಮ್ಯಕೇಶವ ಸ್ವಾಮಿ ದೇವಸ್ಥಾನದ ಹತ್ತಿರ ಆಗಮಿಸಿದಾಗ ಸಮಾಜ ಕಲ್ಯಾಣ ಇಲಾಖೆ ಸಚಿವ ಕೋಟಾ ಶ್ರೀನಿವಾಸ ಪೂಜಾರಿ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್, ಸೌಮ್ಯ ಕೇಶವ ಸ್ವಾಮಿಗೆ ಪೂಜೆ ಸಲ್ಲಿಸುವ ಮೂಲಕ ರಥಕ್ಕೆ ಚಾಲನೆ ನೀಡಿದರು.

ಸಮಾಜ ಸೇವಕ ಮಲ್ಲಿಕಾರ್ಜುನ (ಫೈಟರ್ ರವಿ) ಅವರ ನೇತೃತ್ವದಲ್ಲಿ ಪಟ್ಟಣದ ಸೌಮ್ಯ ಕೇಶವ ಸ್ವಾಮಿ ದೇವಸ್ಥಾನದಿಂದ ಟಿಬಿ ಬಡಾವಣೆ ವೃತ್ತದವರೆಗೂ ಸಾಗಿದ ಮೆರವಣಿಗೆಯಲ್ಲಿ ಸಾವಿರಾರು ಜನರು ಭಾಗವಹಿಸಿದ್ದರು. ಮೆರವಣಿಗೆ ಉದ್ದಕ್ಕೂ ಫೈಟರ್ ರವಿ ಪರ ಜಯ ಘೋಷಣೆಗಳನ್ನು ಕೂಗುತ್ತಾ ಸಾಗಿದ್ದು, ಬಲ ಪ್ರದರ್ಶನದಂತೆ ಭಾಸವಾಗಿತ್ತು.

ಸಚಿವ ಕೋಟಾ ಶ್ರೀನಿವಾಸ ಪೂಜಾರಿ ಮಾತನಾಡುತ್ತಾ, ಮಂಡ್ಯ ಜಿಲ್ಲೆಯಲ್ಲಿ ಬಿಜೆಪಿಯ ಅಲೆ ಎದ್ದಿದೆ. ಪ್ರಧಾನಿ ನರೇಂದ್ರ ಮೋದಿ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಆಡಳಿತ ಅವಧಿಯಲ್ಲಿ ದೇಶ ಮತ್ತು ರಾಜ್ಯಕ್ಕೆ ನೀಡಿದ ಜನಪರ ಕಲ್ಯಾಣ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿರುವುದರಿಂದ ಇಂದು ಬಿಜೆಪಿಗೆ ಜನರ ಒಲವಿದೆ ಎಂಬುದು ವಿಜಯ ಸಂಕಲ್ಪ ಯಾತ್ರೆಗೆ ಸೇರಿರುವ ಜನರೇ ಸಾಕ್ಷಿ ಎಂದು ನುಡಿದರು.

ಈ ಬಾರಿ ನಾಗಮಂಗಲ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮಲ್ಲಿಕಾರ್ಜುನ (ಫೈಟರ್ ರವಿ) ಅವರಿಗೆ ಆಶೀರ್ವಾದ ನೀಡಿ, ಪೂರ್ಣ ಬೆಂಬಲದೊಂದಿಗೆ ಸರ್ಕಾರ ರಚಿಸಲು ಅನುವು ಮಾಡಿಕೊಟ್ಟರೆ ನಿಮ್ಮ ತಾಲೂಕನ್ನು ಮಾದರಿ ಮಾಡಿ ಅಭಿವೃದ್ಧಿಯತ್ತ ಕೊಂಡೊಯ್ಯಲಾಗುವುದು ಹಾಗೂ ಗ್ರಾಮೀಣ ಜನರ ಭಾವನೆಗಳಿಗೆ ಮಿಡಿಯುವ ಬಿಜೆಪಿ ಸರ್ಕಾರ ಮತ್ತೊಮ್ಮೆ ರಾಜ್ಯದಲ್ಲಿ ಅಧಿಕಾರ ಹಿಡಿಯಲು ಅನುವು ಮಾಡಿಕೊಡಬೇಕೆಂದು ಮನವಿ ಮಾಡಿದರು.

ಬಿಜೆಪಿ ಸಂಕಲ್ಪ ಯಾತ್ರೆಯಲ್ಲಿ ಮಾಜಿ ಶಾಸಕ ಮಾರುತಿರಾವ್ ಪವಾರ್, ಜಿಲ್ಲಾಧ್ಯಕ್ಷ ಉಮೇಶ್, ನಾಗಮಂಗಲ ತಾಲೂಕು ಅಧ್ಯಕ್ಷ ಸೋಮಶೇಖರ್, ಡಾ.ವಿಷ್ಣುವರ್ಧನ್ ಬಟ್, ಬಿಜೆಪಿ ಮುಖಂಡರಾದ ತೊಳಲಿ ಕೃಷ್ಣಮೂರ್ತಿ, ಉಪ್ಪಾರಹಳ್ಳಿ ಸುರೇಶ್ ಹಾಗೂ ಬಿಜೆಪಿ ಕಾರ್ಯಕರ್ತರು ಉಪಸ್ಥಿತರಿದ್ದರು.

ಬಿಜೆಪಿಯದ್ದು ನಕಲಿ ಯಾತ್ರೆ

ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಚಿದಂಬರ್



ಮಂಡ್ಯ, ಮಾ.8– ಬಿಜೆಪಿ ನಡೆಸುತ್ತಿರುವುದು ವಿಜಯಸಂಕಲ್ಪ ಯಾತ್ರೆಯಲ್ಲ ಬದಲಾಗಿ ಅದು ನಕಲಿ ಯಾತ್ರೆಯಾಗಿದ್ದು, ಬಹುಮತ ಇಲ್ಲದಿದ್ದರೂ ವಾಮ ಮಾರ್ಗದಿಂದ ಭ್ರಷ್ಟಾಚಾರದ ಹಣ ಬಳಸಿ, ಶಾಸಕರನ್ನು ಖರೀದಿಸಿ ನಡೆಸುತ್ತಿರುವ ಬಿಜೆಪಿ ಸರ್ಕಾರವನ್ನು ಜನ ಕಿತ್ತೊಗೆದು ಬಡವರ ಪರ ದುಡಿಯುವ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಬೇಕೆಂದು ಜಿಲ್ಲಾ ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಎಂ.ಎಸ್.ಚಿದಂಬರ್ ಮನವಿ ಮಾಡಿದರು.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಬಿಜೆಪಿ ಅಧಿಕಾರದಲ್ಲಿದ್ದಾಗ ಕೋವಿಡ್ ಸಂದರ್ಭದಲ್ಲಿ ಸಾವಿರಾರು ಕೋಟಿ ಲೂಟಿ ಮಾಡಿದೆ. ಗುತ್ತಿಗೆ ಕಾಮಗಾರಿಯಲ್ಲಿ 40% ಕಮಿಷನ್ ಹೊಡೆದಿದ್ದು, ಪೊಲೀಸ್ ಹಾಗೂ ಶಿಕ್ಷಣ ಇಲಾಖೆ ನೇಮಕಾತಿಯಲ್ಲಿ ಭಾರೀ ಭ್ರಷ್ಟಾಚಾರ ನಡೆಸಿದೆ. ಈ ಎಲ್ಲವನ್ನು ಮುಚ್ಚಿ ಹಾಕಲು ವಿಜಯಸಂಕಲ್ಪ ಹೆಸರಲ್ಲಿ ನಕಲಿ ಯಾತ್ರೆ ನಡೆಸುತ್ತಿದೆ ಎಂದು ಆರೋಪಿಸಿದ್ದಾರೆ. ಕಳೆದ ಉಪಚುನಾವಣೆಯಲ್ಲಿ ಕೆ.ಆರ್.ಪೇಟೆಯಲ್ಲಿ ಗೆದ್ದಂತೆ ಮಂಡ್ಯದಲ್ಲಿ ಗೆಲ್ಲಬಹುದೆಂದು ಬಿಜೆಪಿ ನಾಯಕರು ಭಾವಿಸಿದ್ದಾರೆ. ಮಂಡ್ಯ ಜಿಲ್ಲೆಗೆ ಇವರ ಕೊಡುಗೆ ಶೂನ್ಯವಾಗಿದ್ದು, ಇವರಿಗೆ ಮಂಡ್ಯ ಜನ ಸೊಪ್ಪು ಹಾಕಬಾರದೆಂದು ಮನವಿ ಮಾಡಿದ್ದಾರೆ. ಪ್ರಧಾನಿ ಮೋದಿ ಚುನಾವಣೆ ಲಾಭಕ್ಕಾಗಿ ಮಂಡ್ಯಕ್ಕೆ ಬರುತ್ತಿದ್ದು, ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯಲ್ಲಿ ಭಾರೀ ಭ್ರಷ್ಟಾಚಾರ ನಡೆದಿದ್ದು, ರಾಜಕೀಯ ಲಾಭಕ್ಕಾಗಿ ಚುನಾವಣೆ ಸಮಯದಲ್ಲಿ ರಸ್ತೆ ಉದ್ಘಾಟನೆಗೆ ಮೋದಿ ಬರುತ್ತಿದ್ದಾರೆಂದು ಟೀಕಿಸಿದರು.

ಒಂದನೇ ಪುಟದಿಂದ

ಇಂದಿನಿಂದ ದ್ವಿತೀಯ ಪಿಯು ಪರೀಕ್ಷೆ

ಮಾಡಲಾಗಿದೆ. ಎಲ್ಲಾ ಕೇಂದ್ರಗಳಲ್ಲಿ ಈಗಾಗಲೇ ವಿದ್ಯಾರ್ಥಿಗಳ ನೋಂದಣಿ ಸಂಖ್ಯೆ ನಮೂದಿಸಲಾಗಿದ್ದು, ಕೊಠಡಿಗಳ ಮಾಹಿತಿ, ನೀರು, ಶೌಚಾಲಯದ ವ್ಯವಸ್ಥೆ ಮಾಡಲಾಗಿದೆ ಎಂದು ನಾಗಮಲ್ಲೇಶ್ ತಿಳಿಸಿದ್ದಾರೆ. ಪರೀಕ್ಷಾ ಕೇಂದ್ರಗಳ ಸುತ್ತ 200 ಮೀಟರ್ ವ್ಯಾಪ್ತಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದ್ದು, ಪರೀಕ್ಷೆ ಅವಧಿಯಲ್ಲಿ ಸುತ್ತಮುತ್ತಲ ಜೆರಾಕ್ಸ್ ಅಂಗಡಿಗಳನ್ನು ಬಂದ್ ಮಾಡಿಸಲಾಗುವುದು. ಆಯಾ ಠಾಣೆಯ ಸಿಬ್ಬಂದಿಗಳನ್ನು ಭದ್ರತೆಗೆ ನಿಯೋಜಿಸಲಾಗುವುದು ಎಂದು ಉಪನಿರ್ದೇಶಕರು ಹೇಳಿದ್ದಾರೆ. ಪರೀಕ್ಷಾ ಅಕ್ರಮಗಳನ್ನು ತಡೆಯಲು ಸ್ಕ್ವಾಡ್‌ಗಳನ್ನು ರಚಿಸಿ ಅನಿರೀಕ್ಷಿತ ಭೇಟಿ ನೀಡಿ ಪರಿಶೀಲನೆ ನಡೆಸುವ ಜವಾಬ್ದಾರಿ ನೀಡಲಾಗಿದೆ. ವಿದ್ಯಾರ್ಥಿಗಳು ಆನ್‌ಲೈನ್‌ನಲ್ಲಿ ಬಿಟ್ಟಿರುವ ಪ್ರವೇಶಾತಿ ಪತ್ರಗಳ ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಹೆಣ್ಣು ಮಕ್ಕಳ ಆತ್ಮಸ್ಥೈರ್ಯ ಕುಗ್ಗಿಸಬೇಡಿ

ಗಂಡು ಮಕ್ಕಳಿಗೆ ಕ್ರಿಕೆಟ್ ಬ್ಯಾಟ್ ತೆಗೆದುಕೊಡುವುದನ್ನು ಕಾಣುತ್ತೇವೆ. ಮನೆಯಲ್ಲಿಯೇ ನಡೆಯುವ ತಾರತಮ್ಯ ನಿಲ್ಲಬೇಕು ಎಂದು ಸಲಹೆ ನೀಡಿದರು. ಮಹಿಳೆಯರು ಪುರುಷರಿಗಿಂತ ದೊಡ್ಡ ದೊಡ್ಡ ಕೆಲಸ ಮಾಡುತ್ತಿದ್ದಾರೆ. ಮಹಿಳೆಯರು ಅಂತರರಾಷ್ಟ್ರೀಯ ಬ್ಯಾಂಕ್‌ಗಳ ಮುಖ್ಯಸ್ಥರಾಗಿ, ವಿಜ್ಞಾನ–ತಂತ್ರಜ್ಞಾನ, ಸಂಶೋಧನೆ, ಇಸ್ರೋ, ಡಿಆರ್‌ಡಿಓ ಸೇರಿದಂತೆ ಇನ್ನಿತರ ಸಂಸ್ಥೆಗಳಲ್ಲಿ ಅತ್ಯುನ್ನತ ಹುದ್ದೆಯನ್ನು ಅಲಂಕರಿಸಿ, ತಮ್ಮ ಜವಾಬ್ದಾರಿಯನ್ನು ನಿಭಾಯಿಸಿದ್ದಾರೆ. ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತ ದೇಶದ ಭವಿಷ್ಯ ರೂಪಿಸುತ್ತಿದ್ದಾರೆ ಎಂದರು.

ಉದ್ಯಮಶೀಲರಾಗಬೇಕು: ಮಹಿಳೆಯರಲ್ಲಿರುವ ಉದ್ಯಮಶೀಲತೆಯನ್ನು ಹೊರಗೆ ತಂದು ಸದೃಢರಾಗಬೇಕು. ಮೈಸೂರಲ್ಲಿ ವುಮೆನ್ಸ್ ಪಾರ್ಕ್ ನಿರ್ಮಾಣವಾಗಿದೆ. ಮಹಿಳಾ ಕೈಗಾರಿಕೋದ್ಯಮಿಗಳಿಗಾಗಿ ಈ ಪಾರ್ಕ್ ನಿರ್ಮಿಸಲಾಗಿದ್ದು, ಹಲವು ಪೂರಕ ಕಾರ್ಯಕ್ರಮ ರೂಪಿಸಲಾಗಿದೆ. ಮಹಿಳೆಯರು ಚಿಕ್ಕ ಅಥವಾ ದೊಡ್ಡ ಉದ್ಯಮಗಳನ್ನೇ ಸ್ಥಾಪಿಸಿದರೂ ಅದರಲ್ಲಿ ಏಳಿಗೆ ಸಾಧಿಸಬೇಕು. ಕಿರು ಉದ್ಯಮಕ್ಕೆ ಸಾಲ ಸೌಲಭ್ಯ ಪಡೆಯಬಹುದು. ಹೋಮ್ ಮೇಡ್ ವ್ಯವಸ್ಥೆಯೊಳಗೆ ತಿಂಡಿ, ತಿನಿಸು ಪಡೆಯಲು ಜನ ಇಚ್ಛಿಸುತ್ತಿದ್ದಾರೆ. ಇದರ ಸದುಪಯೋಗ ಪಡೆದುಕೊಳ್ಳಬೇಕು. ತಂತ್ರಜ್ಞಾನ ಬಳಸಿಕೊಂಡು ತಮ್ಮ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಬೇಕು ಎಂದು ಸಲಹೆ ನೀಡಿದರು.

ರಾಜಕೀಯದಲ್ಲೂ ಮಹಿಳೆಯರ ಸಾಧನೆ: ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಎಲ್.ನಾಗೇಂದ್ರ ಮಾತನಾಡಿ, ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲೂ ಸಾಧನೆ ಮಾಡುತ್ತಿದ್ದಾರೆ. ರಾಜಕೀಯ ಕ್ಷೇತ್ರದಲ್ಲೂ ಮಹಿಳೆಯರು ಸಕ್ರಿಯರಾಗಿದ್ದಾರೆ. ದೇಶದ ಅತ್ಯುನ್ನತ ಹುದ್ದೆಯಾಗಿರುವ ಪ್ರಧಾನ ಮಂತ್ರಿ ಸ್ಥಾನವನ್ನು 30 ವರ್ಷಗಳ ಹಿಂದೆಯೇ ಇಂದಿರಾ ಗಾಂಧಿ ಅಲಂಕರಿಸಿ, ಎರಡು ಬಾರಿ ದೇಶವನ್ನು ಮುನ್ನಡೆಸಿದ್ದಾರೆ. ರಾಷ್ಟ್ರಪತಿಯಾಗಿ ಪ್ರತಿಭಾ ಪಾಟೀಲ್ ಈ ಹಿಂದೆ ಆಡಳಿತ ನಡೆಸಿದ್ದರೆ, ಹಾಲಿ ರಾಷ್ಟ್ರಪತಿಯಾಗಿ ದ್ರೌಪದಿ ಮುರ್ಮು ಸೇವೆ ಸಲ್ಲಿಸುತ್ತಿದ್ದಾರೆ. ಮುಖ್ಯಮಂತ್ರಿಗಳಾಗಿ ಶೀಲಾ ದೀಕ್ಷಿತ್, ಜೆ.ಜಯಲಲಿತಾ, ಮಮತಾ ಬ್ಯಾನರ್ಜಿ, ಮಾಯಾವತಿ ಹಾಗೂ ಇನ್ನಿತರರು ಉತ್ತಮ ಆಡಳಿತ ನೀಡಿದ್ದಾರೆ ಎಂದರು. ಮೇಯರ್ ಶಿವಕುಮಾರ್ ಮಾತನಾಡಿ, ಮಹಿಳೆಯರಿಗೆ ಭಾರತದ ಸಂಸ್ಕೃತಿಯಲ್ಲಿ ಪೂಜ್ಯ ಸ್ಥಾನವಿದೆ. ಮಾತೃಸ್ವರೂಪ. ಪರಿಸರ ಜೀವಜಲಕ್ಕೂ ಮಾತೆಯ ಸ್ವರೂಪ ಕೊಡಲಾಗಿದೆ. ಆರ್ಥಿಕವಾಗಿ ಸಬಲರನ್ನಾಗಿಸಲು ಸರ್ಕಾರ ಕಾರ್ಯಕ್ರಮ ರೂಪಿಸಿದೆ. ಸ್ಥಳೀಯ ಸಂಸ್ಥೆಗಳಲ್ಲಿ ಶೇ. 50 ಮೀಸಲು ನೀಡುವ ಮೂಲಕ ರಾಜಕೀಯ ಅಧಿಕಾರ ನೀಡಲಾಗಿದೆ. ನಗರ ಪಾಲಿಕೆಯಲ್ಲಿ ಬಳಸುವಂತಹ ಸ್ತ್ರೀಶಕ್ತಿ ಸಂಘ ಮತ್ತು ಮಹಿಳೆಯರು ತಯಾರಿಸುವ ವಸ್ತುಗಳನ್ನು ಖರೀದಿ ಮಾಡಿ ಉತ್ತೇಜನ ಕೊಡಲಾಗುವುದು. ಮುಂದಿನ ಕೌನ್ಸಿಲ್ ಸಭೆಯಲ್ಲಿ ಈ ಸಂಬಂಧ ಚರ್ಚಿಸಿ ತೀರ್ಮಾನ ಮಾಡುತ್ತೇವೆ. ಎಂದರು. ಕಾರ್ಯಕ್ರಮದಲ್ಲಿ ಉಪ ಮೇಯರ್ ಡಾ.ಜಿ.ರೂಪಾ, ಜಿಪಂ ಸಿಇಒ ಗಾಯತ್ರಿ, ಜಿಪಂ ಯೋಜನಾ ನಿರ್ದೇಶಕಿ ಬಿ.ಎಂ.ಸವಿತಾ, ಜಿಲ್ಲಾ ಸ್ತ್ರೀ ಶಕ್ತಿ ಕೂಟದ ಅಧ್ಯಕ್ಷೆ ಪ್ರೇಮಕುಮಾರಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣಾಧಿಕಾರಿ ಬಸವರಾಜು, ಪಾಲಿಕೆ ಸದಸ್ಯೆ ಪ್ರಮೀಳಾ ಭರತ್, ಸಂಪನ್ಮೂಲ ವ್ಯಕ್ತಿ ಕವಿತಾ ರೈ ಇದ್ದರು. ಜಿಪಂ ಯೋಜನಾ ನಿರ್ದೇಶಕಿ ಬಿ.ಎಂ.ಸವಿತಾ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಖಾಲಿ ಮಳಿಗೆಗಳ ದರ್ಶನ

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಜೆ.ಕೆ.ಮೈದಾನದಲ್ಲಿ ಆಯೋಜಿಸಿರುವ 7 ದಿನಗಳ ವಿಭಾಗೀಯ ಮಟ್ಟದ ವಸ್ತುಪ್ರದರ್ಶನದಲ್ಲಿ ಮೊದಲನೇ ದಿನವೇ ಖಾಲಿ ಮಳಿಗೆಗಳ ದರ್ಶನವಾಯಿತು. 50ಕ್ಕೂ ಹೆಚ್ಚು ಮಳಿಗೆಗಳ ಸ್ಥಾಪಿಸಲಾಗಿದೆ. ಅರ್ಧಕ್ಕಿಂತ ಹೆಚ್ಚಿನ ಮಳಿಗೆಗಳು ಖಾಲಿ ಇದ್ದವು. ಕೆಲವರು ಮಧ್ಯಾಹ್ನದ ಬಳಿಕ ತಮ್ಮ ಉತ್ಪನ್ನಗಳನ್ನು ತಂದು ಮಾರಾಟ ಆರಂಭಿಸಿದರು. ಸರಿಯಾದ ವ್ಯವಸ್ಥೆ ಮಾಡಿಲ್ಲವೆಂದು ಮಹಿಳೆಯರು ಬೇಸರ ವ್ಯಕ್ತಪಡಿಸಿದರು. ಮೈಸೂರು ಕಬೀರ ರಸ್ತೆಯ ಭಗೀರಥ ಸ್ತ್ರೀ ಶಕ್ತಿ ಸ್ವಸಹಾಯ ಸಂಘ ಜ್ಯುವೆಲ್ಸ್, ಕೆ.ಆರ.ನಗರ ತಾಲೂಕಿನ ಶ್ಯಾಬಾಳು ಸ್ತ್ರೀಶಕ್ತಿ ಸ್ವಸಹಾಯ ಸಂಘ ಸೀರೆ, ಸಂಜೀವಿ ಕರ್ಪೂರ, ಮದ್ದೂರಮ್ಮ ಮಹಿಳಾ ನೇಕಾರರ ಸಂಘದಿಂದ ವಿವಿಧ ಉಡುಪುಗಳ ಮಾರಾಟವಿತ್ತು. ನಯನ ಕುಮಾರ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಸಿಬ್ಬಂದಿ ಸಮಾರಂಭಕ್ಕೆ ಆಗಮಿಸಿದ ಮಹಿಳೆಯರಿಗೆ ಉಚಿತವಾಗಿ ಬಿಪಿ, ಮಧುಮೇಹ ಪರೀಕ್ಷೆ ಮಾಡಿದರು. ಒಂದು ವಾರ ಕಾಲ ಈ ಪ್ರದರ್ಶನ ಇರಲಿದೆ.

ಸರಬರಾಜಾಗುತ್ತಿದೆ ಡ್ರಗ್ಸ್

ಹಠಾತ್ ದಾಳಿ ನಡೆಸಿ, ಈ ನಾಲ್ವರನ್ನೂ ವಶಕ್ಕೆ ಪಡೆದು ಪರಿಶೀಲನೆ ನಡೆಸಿದಾಗ ಅವರ ಬಳಿ ಡ್ರಗ್ಸ್ ಪತ್ತೆಯಾಗಿದೆ. ಇವರು, ಮೈಸೂರಿನ ನಾಯ್ಡು ನಗರದಲ್ಲಿರುವ ವ್ಯಕ್ತಿಯೋರ್ವನ ಮೂಲಕ ಬೆಂಗಳೂರಿನ ಪೆಡ್ಲರ್‌ವೊಬ್ಬನಿಂದ ಈ ಡ್ರಗ್ಸ್ ಖರೀದಿ ಮಾಡಿ, ಮಾರಾಟಗಾರರು ಅದನ್ನು ಗ್ರಾಂವೊಂದಕ್ಕೆ 5 ರಿಂದ 6 ಸಾವಿರ ರೂಗಳಿಗೆ ಮಾರಾಟ ಮಾಡುತ್ತಿದ್ದರು ಎಂಬುದು ವಿಚಾರಣೆ ವೇಳೆ ತಿಳಿದು ಬಂದಿದೆ. ಈ ವ್ಯಕ್ತಿಗಳು ಮಾದಕ ವ್ಯಸನಿಗಳಾದ ವಿದ್ಯಾರ್ಥಿಗಳನ್ನು ಪರಿಚಯ ಮಾಡಿಕೊಂಡು ಅವರಲ್ಲಿ ಬಹಳ ನಂಬಿಕಸ್ಥನೊಬ್ಬನಿಗೆ ಮಾಹಿತಿ ನೀಡುತ್ತಾರೆ. ಆತ ಉಳಿದ ಎಲ್ಲರಿಗೂ ವಿಷಯ ತಿಳಿಸಿ ಮಾರಾಟಗಾರರು ಹೇಳುವ ಸ್ಥಳಕ್ಕೆ ಬಂದು ಕ್ಷಣಮಾತ್ರದಲ್ಲಿ ಅವರಿಂದ ಡ್ರಗ್ಸ್ ಪಡೆದು ಮಿಂಚಿನ ವೇಗದಲ್ಲಿ ದ್ವಿಚಕ್ರ ವಾಹನದಲ್ಲಿ ಮರೆಯಾಗುತ್ತಾರೆ.

ಪ್ರಕರಣವು ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿದೆ. ಮೈಸೂರಿನಲ್ಲಿ ಡ್ರಗ್ಸ್ ದಂಧೆ ಚೈನ್ ಲಿಂಕ್‌ನಂತೆ ನಡೆಯುತ್ತಿದ್ದು, ಇದೀಗ ಬಂಧಿತರಾಗಿರುವ ನಾಲ್ವರಿಂದ ದೊರೆತಿರುವ ಮಾಹಿತಿಯನ್ನಾಧರಿಸಿ, ಇವರಿಗೆ ಡ್ರಗ್ಸ್ ಸರಬರಾಜು ಮಾಡುತ್ತಿರುವವರು ಹಾಗೂ ಅದಕ್ಕೆ ಮಧ್ಯವರ್ತಿಯಾಗಿ ಕೆಲಸ ಮಾಡುತ್ತಿರುವವರ ಪತ್ತೆಗಾಗಿ ಸಿಸಿಬಿ ಪೊಲೀಸರು ಕಾರ್ಯಾಚರಣೆ ಆರಂಭಿಸಿದ್ದಾರೆ.

ಜನರು ತತ್ತರ

ಜಿಲ್ಲಾಡಳಿತಗಳಿಗೆ ಪ್ರತ್ಯೇಕ ಮಾರ್ಗಸೂಚಿ ಪ್ರಕಟಿಸಿದ್ದು, ಆಯಾ ಜಿಲ್ಲೆ ಹಾಗೂ ಪಾಲಿಕೆಗಳ ವ್ಯಾಪ್ತಿಗಳ ಜನರಿಗೆ ಉಷ್ಣ ಮಾರುತಗಳಿಂದ ರಕ್ಷಣೆ ಪಡೆಯಲು ಅಗತ್ಯ ವ್ಯವಸ್ಥೆ ಮಾಡುವಂತೆ ಸೂಚಿಸಿದೆ.

ನವಜಾತ ಶಿಶುಗಳು, ಪುಟ್ಟಮಕ್ಕಳು, ಗರ್ಭಿಣಿಯರು, ಹೊರಾಂಗಣದಲ್ಲಿ ಕೆಲಸ ನಿರ್ವಹಿಸುವವರು, ಮಾನಸಿಕ ಸಮಸ್ಯೆಗಳಿಂದ ಬಳಲುತ್ತಿರುವವರು, ಅನಾರೋಗ್ಯ ಸಮಸ್ಯೆಗಳಿರುವವರು, ವಿಶೇಷವಾಗಿ ಹೃದ್ರೋಗ ಹಾಗೂ ರಕ್ತದ ಒತ್ತಡದಿಂದ ಬಳಲುತ್ತಿರುವವರು ಮುನ್ನೆಚ್ಚರಿಕೆ ವಹಿಸುವಂತೆ ಎಚ್ಚರಿಸಲಾಗಿದೆ. ಜೊತೆಗೆ ಕೆಲಸದ ಸ್ಥಳಗಳಲ್ಲಿ ಕಾರ್ಮಿಕರು ಹಾಗೂ ಮಾಲೀಕರಿಗೂ ಮಾರ್ಗಸೂಚಿ ನೀಡಿದ್ದು, ಬಿಸಿಲಿನಲ್ಲಿ ಕೆಲಸ ಮಾಡುವ ಕಾರ್ಮಿಕರ ಆರೋಗ್ಯ ಸಂರಕ್ಷಣೆಗಾಗಿ ಸೂಕ್ತ ಮಾರ್ಪಾಡುಗಳನ್ನು ಮಾಡಿಕೊಳ್ಳುವಂತೆ ಮಾಲೀಕರಿಗೆ ನಿರ್ದೇಶನ ನೀಡಲಾಗಿದೆ. ಕಾರ್ಮಿಕರು ಪ್ರತಿ 20 ನಿಮಿಷಗಳಿಗೊಮ್ಮೆ ಒಂದು ಲೋಟ ನೀರು ಕುಡಿಯಬೇಕು. ಪ್ರತಿ 1 ಗಂಟೆಯ ಕೆಲಸಕ್ಕೆ 5 ನಿಮಿಷ ಬಿಡುವು ನೀಡಬೇಕು. ಕೆಲಸಗಾರರಿಗೆ ನೆರಳಿಗಾಗಿ ತಾತ್ಕಾಲಿಕ ಶೆಡ್ ವ್ಯವಸ್ಥೆ ಮಾಡಬೇಕು. ಗರ್ಭಿಣಿಯರು, ವೃದ್ಧರಿಗೆ ಕೆಲಸ ಮಾಡಲು ಆಗುತ್ತದೆಯೇ ಎಂಬುದನ್ನು ಮೊದಲೇ ಪರೀಕ್ಷಿಸಿಕೊಳ್ಳಬೇಕು ಎಂಬಿತ್ಯಾದಿ ನಿರ್ದೇಶನಗಳನ್ನು ನೀಡಲಾಗಿದೆ.

ಹಲವು ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಸಮಾನ ಅವಕಾಶ ದೊರೆತಿಲ್ಲ

ಸಾಧಕ ಮಹಿಳೆಯರ ಸನ್ಮಾನಿಸಿ ಹಿರಿಯ ವೈದ್ಯೆ ಡಾ.ಸುಷ್ಮಾ ವಿಷಾದ



ಮೈಸೂರು, ಮಾ.8(ಎಸ್‌ಪಿಎನ್)– ಆಧುನಿಕ ಸಮಾಜದಲ್ಲಿ ಮಹಿಳೆ ಪುರುಷನಷ್ಟೇ ಪ್ರಬುದ್ಧಳಾದರೂ ಇನ್ನು ಹಲವು ಕ್ಷೇತ್ರದಲ್ಲಿ ಸಮಾನ ಅವಕಾಶ ದೊರತಿಲ್ಲ ಎಂದು ಹಿರಿಯ ವೈದ್ಯ ಡಾ.ಸುಷ್ಮಾ ವಿಷಾದಿಸಿದರು. ಮೈಸೂರು ವಿಜಯನಗರ ಒಂದನೇ ಹಂತದಲ್ಲಿರುವ ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಭೈರವಿ ಗೌಡತಿಯರ ಬಳಗದಿಂದ ಬುಧವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳ ಮಹಿಳೆಯರನ್ನು ಸನ್ಮಾನಿಸಿ, ಮಾತನಾಡಿದರು.

ಮಹಿಳೆ ಪುರುಷನಷ್ಟೇ ಪ್ರಬುದ್ಧಳು. ಹೆಣ್ಣು ವಿಶ್ರಾಂತಿ ಇಲ್ಲದೇ ದುಡಿದರೂ ಯಾವತ್ತೂ ಸಹನೆ ಕಳೆದುಕೊಳ್ಳದೆ ಸಂಸಾರ ನಡೆಸುತ್ತಿದ್ದಾಳೆ. ಇತ್ತೀಚಿನ ದಿನಗಳಲ್ಲಿ ಹೆಣ್ಣು ಭ್ರೂಣಹತ್ಯೆ, ಹೆಣ್ಣು ಮಕ್ಕಳ ಮಾರಾಟ, ಅತ್ಯಾಚಾರ ಪ್ರಕರಣಗಳು ಹೆಚ್ಚುತ್ತಿದ್ದು, ಇದರ ಬಗ್ಗೆ ಪೋಷಕರು ಜಾಗೃತರಾಗಿರಬೇಕು ಎಂದು ತಿಳಿಸಿದರು.

ಭೈರವಿ ಪ್ರಶಸ್ತಿ ಪ್ರದಾನ: ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಸಾಧಕರಾದ ರಚನಾ ಮಹೇಶ್(ಉದ್ಯಮ), ಎನ್.ಸಿ. ಕೌಶಲ್ಯ(ಶಿಕ್ಷಣ), ಚಂದ್ರವತಿ(ಆರೋಗ್ಯ ಕ್ಷೇತ್ರ) ಹಾಗೂ ಸಂಗೀತ ಸೆಲ್ವನ್(ಸ್ವಚ್ಛತಾ ಕ್ಷೇತ್ರ) ಅವರಿಗೆ 'ಬೈರವಿ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಈ ವೇಳೆ ನಗರ ಪಾಲಿಕೆ ಸದಸ್ಯೆ ಪ್ರೇಮಾ ಶಂಕರೇಗೌಡ, ಬಿಜೆಪಿ ನಗರ ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮಾ ನಂದೀಶ್, ರೂಪದರ್ಶಿ ತನಿಷ್ಕಾ ಶೆಟ್ಟಿ, ಭೈರವಿ ಗೌಡತಿಯರ ಬಳಗದ ರೇಣುಕಾ ಜಗದೀಶ್, ರಾಧಾ ಜೈರಾಮ್, ಕೋಮಲಾ ವೆಂಕಟೇಶ್, ಸುಶೀಲಾ ಬಸವರಾಜ್, ಉಮಾ ನಾಗೇಶ್, ರೇವತಿ ಕೃಷ್ಣಪ್ಪ, ರಾಧಾ ಲಂಕೇಗೌಡ ಉಪಸ್ಥಿತರಿದ್ದರು.

ಶೇ.10ರಷ್ಟು ವೇತನ ಹೆಚ್ಚಳ ಪ್ರಸ್ತಾಪ ತಿರಸ್ಕರಿಸಿದ ಸಾರಿಗೆ ನೌಕರರು

ಮೈಸೂರು, ಮಾ.7– ಕೆಎಸ್‌ಆರ್‌ಟಿಸಿ ನೌಕರರ ವೇತನ ಹೆಚ್ಚಳ ಸಂಬಂಧ ಸಾರಿಗೆ ಸಚಿವ ಬಿ.ಶ್ರೀರಾಮುಲು ಶೇ.10ರಷ್ಟು ವೇತನ ಪರಿಷ್ಕರಣೆ ಪ್ರಸ್ತಾವನೆಯನ್ನು ಕಾರ್ಮಿಕ ಸಂಘಟನೆಗಳು ಒಮ್ಮತದಿಂದ ತಿರಸ್ಕರಿಸಿವೆ ಎಂದು ಕಾರ್ಮಿಕ ಮುಖಂಡ ಹೆಚ್.ವಿ.ಅನಂತಸುಬ್ಬರಾವ್ ಮಾಧ್ಯಮಗಳಿಗೆ ತಿಳಿಸಿದ್ದಾರೆ. ಕೆಎಸ್‌ಆರ್‌ಟಿಸಿ ನಾಲ್ಕು ನಿಗಮಗಳ ನೌಕರರ ವೇತನ ಪರಿಷ್ಕರಣೆ ಸಂಬಂಧ ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಬಿ.ಶ್ರೀರಾಮುಲು ನೇತೃತ್ವದಲ್ಲಿ ಬುಧವಾರ ಸಂಜೆ ವಿಧಾನ ಸೌಧದ 3ನೇ ಮಹಡಿಯ ಕೊಠಡಿ ಸಂಖ್ಯೆ: 313ರಲ್ಲಿ ವಿವಿಧ ಕಾರ್ಮಿಕ ಮುಖಂಡರ ಸಭೆಯಲ್ಲಿ ಈ ಪ್ರಸ್ತಾವನೆಯನ್ನು ತಿರಸ್ಕರಿಸಲಾಗಿದೆ ಎಂದು ತಿಳಿಸಿದರು.

ಸ್ವಯಂವರಾ ಪಾರ್ವತಿ ಹೋಮ

ಮೈಸೂರು, ಮಾ.8–ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಮಾ.10ರ ಶುಕ್ರವಾರ ಬೆಳಗ್ಗೆ 7.30ಕ್ಕೆ ಸ್ವಯಂವರಾ ಪಾರ್ವತಿ ಹೋಮವನ್ನು ಹಮ್ಮಿಕೊಳ್ಳಲಾಗಿದೆ. ವಿವಾಹ ವಿಳಂಬ ದೋಷ ಪರಿಹಾರ ಮತ್ತು ಶೀಘ್ರ ವಿವಾಹಕ್ಕೆ ಪ್ರತಿಯೊಬ್ಬ ವಿವಾಹಾಪೇಕ್ಷಿತ ವಧು–ವರರಿಗೆ ಸಂಕಲ್ಪ ಮತ್ತು ಪ್ರತ್ಯೇಕವಾಗಿ ಪೂಜೆ, ಹೋಮ ಮಾಡಿಸಲಾಗುವುದು. ಹೆಚ್ಚಿನ ವಿವರಗಳಿಗೆ ಮೊ.ನಂ. 9845183399 9845183392 ಸಂಪರ್ಕಿಸಬಹುದು.

ಆಕಸ್ಮಿಕ ಬೆಂಕಿ: ಕಬ್ಬು ಬೆಳೆ ನಾಶ

ಮೈಸೂರು, ಮಾ. 8(ಆರ್‌ಕೆ)– ಮೈಸೂರು ತಾಲೂಕು ದಡದಹಳ್ಳಿ ಗ್ರಾಮದ ಸರ್ವೆ ನಂಬರ್ 229ರಲ್ಲಿ 2 ಎಕರೆ ಜಮೀನಿನಲ್ಲಿ ಬೆಳೆದಿದ್ದ ಕಬ್ಬಿನ ಬೆಳೆಗೆ ಆಕಸ್ಮಿಕವಾಗಿ ಬೆಂಕಿ ತಗುಲಿದೆ. ಮಾ.6ರಂದು ಸಂಜೆ 5 ಗಂಟೆ ವೇಳೆ ಬೆಂಕಿ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಅಗ್ನಿಶಾಮಕ ದಳಕ್ಕೆ ವಿಷಯ ಮುಟ್ಟಿಸಿದರೂ, ಸಕಾಲದಲ್ಲಿ ಬರಲಿಲ್ಲ ಎಂದು ಜಮೀನಿನ ಮಾಲೀಕ ಬ್ಯಾತನಹಳ್ಳಿ ಗ್ರಾಮದ ಮಾದಪ್ಪ ದೂರಿದ್ದಾರೆ. ನಂತರ ತಾನು ತಹಸೀಲ್ದಾರ್ ಗಿರೀಶ್ ಅವರಿಗೆ ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ರಾತ್ರಿ ಸುಮಾರು 7 ಗಂಟೆಗೆ ಬಂದ ಅಗ್ನಿಶಾಮಕ ದಳದ ಸಿಬ್ಬಂದಿ ಸಾರ್ವಜನಿಕರ ನೆರವಿನಿಂದ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರಾದರೂ, ಅಷ್ಟರಲ್ಲಿ ಅಳವಡಿಸಿದ್ದ ಡ್ರಿಪ್ ನೀರಾವರಿ ಪೈಪ್, ತೆಂಗಿನ ಗಿಡ ಹಾಗೂ ಕಬ್ಬಿನ ಬೆಳೆ ಸುಟ್ಟು ಹೋಯಿತು ಎಂದು ತಿಳಿಸಿದ್ದಾರೆ.

ಆಸ್ಟ್ರೇಲಿಯಾದ ಮಾಸ್ಟರ್ ಗೇಮ್ಸ್ ಚಾಂಪಿಯನ್‌ಶಿಪ್

ಭಾರತವನ್ನು ಪ್ರತಿನಿಧಿಸಲಿರುವ ಕೊಡಗಿನ ಮೂವರು ಕ್ರೀಡಾಪಟುಗಳು





ಮಡಿಕೇರಿ, ಮಾ.8– ಕೊಡಗಿನ ಮೂವರು ಕ್ರೀಡಾಪಟುಗಳು ಭಾರತವನ್ನು ಪ್ರತಿನಿಧಿಸಿ ಆಸ್ಟ್ರೇಲಿಯಾದಲ್ಲಿ ನಡೆಯಲಿರುವ ಮಾಸ್ಟರ್ ಗೇಮ್ಸ್ ಚಾಂಪಿಯನ್‌ಶಿಪ್‌ನಲ್ಲಿ ಭಾಗವಹಿಸಲಿದ್ದಾರೆ. ಅದರಲ್ಲೂ ವಿಶೇಷವೆಂಬಂತೆ ಇಬ್ಬರು ಸಹೋದರರು ಈ ಹಿರಿಯರ ಕ್ರೀಡಾಕೂಟದಲ್ಲಿ ಭಾಗವಹಿಸುತ್ತಿದ್ದಾರೆ.

ಗೋಣಿಕೊಪ್ಪ ಹಾಗೂ ಕದನೂರು ಗ್ರಾಮಗಳ ನಿವಾಸಿಗಳಾದ ಪಾಲೆಕಂಡ ಬೆಳ್ಳಿಯಪ್ಪ (86) ಹಾಗೂ ಪಾಲೆಕಂಡ ಬೋಪಯ್ಯ(95) ಭಾಗವಹಿಸುತ್ತಿರುವ ಅಪರೂಪದ ಸಹೋದರರಾಗಿದ್ದಾರೆ. ಇವರಿಬ್ಬರೂ ಭಾರತದಲ್ಲಿ ನಡೆದ ಮಾಸ್ಟರ್ಸ್ ಗೇಮ್ಸ್ ಕ್ರೀಡಾಕೂಟದಲ್ಲಿ ಇದುವರೆಗೆ 13 ಚಿನ್ನದ ಪದಕಗಳನ್ನು ಪಡೆದುಕೊಂಡಿದ್ದಾರೆ. ಇದೀಗ ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಕೂಟದಲ್ಲಿ ಅವರು ಭಾಗವಹಿಸುತ್ತಿದ್ದಾರೆ. ಬೋಪಯ್ಯ ಅವರು ಜಾವಲಿನ್ ಥ್ರೋ ಹಾಗೂ ಡಿಸ್ಕಸ್ ಥ್ರೋನಲ್ಲಿ ಹಾಗೂ ಬೆಳ್ಳಿಯಪ್ಪನವರು 100, 200, 1500 ಮೀಟರ್ ಕಾಲ್ನಡಿಗೆ ರೇಸ್‌ನಲ್ಲಿ ಭಾಗವಹಿಸಲಿದ್ದಾರೆ.

ಮಾ.10ರಿಂದ 15ರವರೆಗೆ ಆಸ್ಟ್ರೇಲಿಯಾದ ಸಿಡ್ನಿಯಲ್ಲಿ ನಡೆಯಲಿರುವ ಹಿರಿಯರ ಕ್ರೀಡಾಕೂಟದಲ್ಲಿ ಬಿ.ಎಸ್.ಎನ್.ಎಲ್.ನ ನಿವೃತ್ತ ಉದ್ಯೋಗಿ, ಕರ್ನಾಟಕದ ಮಾಸ್ಟರ್ಸ್ ಕ್ರೀಡಾಕೂಟ ಸಂಘದ ಅಧ್ಯಕ್ಷೆ ಮರಾಮಡ ಮಾಚಮ್ಮ(77) ಅವರು ಕೂಡ ಈ ಕ್ರೀಡಾಕೂಟದಲ್ಲಿ ಭಾಗವಹಿಸಲು ತೆರಳುತ್ತಿದ್ದಾರೆ. ಇವರು ರಾಷ್ಟ್ರೀಯ ಮಟ್ಟದಲ್ಲಿ ಹಲವಾರು ಪದಕಗಳನ್ನು ಪಡೆದಿದ್ದಾರೆ. ಈ ಹಿಂದೆ ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸಿದ್ದು, ಇದೀಗ ಈ ಮೂವರು ಭಾರತವನ್ನು ಪ್ರತಿನಿಧಿಸಲಿದ್ದಾರೆ.

ನಾಳೆ, ಮರುದಿನ ಕೊಡಗಲ್ಲಿ ಬಿಜೆಪಿ ವಿಜಯಸಂಕಲ್ಪ ಯಾತ್ರೆ

ವಿರಾಜಪೇಟೆ, ಮಡಿಕೇರಿಯಲ್ಲಿ ಭರದ ಸಿದ್ಧತೆ



ಮಡಿಕೇರಿ, ಮಾ.8– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಮತ್ತೆ ಬಿಜೆಪಿಯನ್ನು ಅಧಿಕಾರಕ್ಕೆ ತರುವ ಪ್ರಯತ್ನದ ಭಾಗವಾಗಿ ಕೊಡಗು ಜಿಲ್ಲೆಯಲ್ಲಿ ಪಕ್ಷದ ಸರಣಿ ಕಾರ್ಯಕ್ರಮಗಳು ಆಯೋಜಿಸಲಾಗಿದ್ದು, ಮಾ.10 ಮತ್ತು 11 ರಂದು ಜಿಲ್ಲೆಯ ಎರಡು ಕ್ಷೇತ್ರಗಳಲ್ಲಿ ವಿಜಯಸಂಕಲ್ಪ ಯಾತ್ರೆ ನಡೆಯಲಿದೆ. ಇದರೊಂದಿಗೆ ಮಾ.20 ರವರೆಗೆ ವಿವಿಧ ಮೋರ್ಚಾಗಳ ಸಮಾವೇಶಗಳನ್ನು ಆಯೋಜಿಸಲಾಗಿದೆ ಎಂದು ಜಿಲ್ಲಾ ಬಿಜೆಪಿ ಅಧ್ಯಕ್ಷ ರಾಬಿನ್ ದೇವಯ್ಯ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಕ್ಷದ ವಿವಿಧ ಕಾರ್ಯಕ್ರಮಗಳ ಜೊತೆಯಲ್ಲೇ ಮಾ.18ರಂದು ಬೆಳಗ್ಗೆ 10.30 ಗಂಟೆಗೆ ನಗರದ ಗಾಂಧಿ ಮೈದಾನದಲ್ಲಿ 'ಫಲಾನುಭವಿಗಳ ಸಮಾವೇಶ' ನಡೆಯಲಿದೆ. ಇದರಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪಾಲ್ಗೊಳ್ಳಲಿದ್ದಾರೆ. ಈ ಸಮಾವೇಶದಲ್ಲಿ 10 ಸಾವಿರಕ್ಕೂ ಹೆಚ್ಚಿನ ಜನರು ಪಾಲ್ಗೊಳ್ಳುವ ನಿರೀಕ್ಷೆ ಇರುವುದಾಗಿ ತಿಳಿಸಿದರು.

ವಿಜಯಸಂಕಲ್ಪ ಯಾತ್ರೆ: ರಾಜ್ಯದ 224 ವಿಧಾನಸಭಾ ಕ್ಷೇತ್ರಗಳನ್ನು ಸಂಪರ್ಕಿಸುವ 4 ವಿಜಯ ಸಂಕಲ್ಪ ಯಾತ್ರೆಗಳು ಈಗಾಗಲೇ ಆರಂಭವಾಗಿವೆ. ಚಾಮರಾಜನಗರದ ಮಲೆಮಹದೇಶ್ವರದಿಂದ ಆರಂಭವಾಗಿರುವ ವಿಜಯ ಸಂಕಲ್ಪಯಾತ್ರೆ ಮಾ.10 ರಂದು ವಿರಾಜಪೇಟೆ ಕ್ಷೇತ್ರದ ಗೋಣಿಕೊಪ್ಪಲು ಮೂಲಕ ಕೊಡಗನ್ನು ಪ್ರವೇಶಿಸಲಿದ್ದು, ರಥಕ್ಕೆ ಭವ್ಯ ಸ್ವಾಗತವನ್ನು ಪಕ್ಷದ ವತಿಯಿಂದ ನೀಡಲಾಗುತ್ತದೆ ಎಂದರು. ಅಂದು ಸಂಜೆ 5.30 ಗಂಟೆಗೆ ಗೋಣಿಕೊಪ್ಪಲಿನಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಕೆ.ಎಸ್. ಈಶ್ವರಪ್ಪ ನೇತೃತ್ವದಲ್ಲಿ ವಿಜಯಸಂಕಲ್ಪ ಯಾತ್ರೆಯ ಬೃಹತ್ ಸಮಾವೇಶ ನಡೆಯಲಿದೆ. ಅಂದು ಸಂಜೆ ಮಡಿಕೇರಿಯಲ್ಲಿ ವಾಸ್ತವ್ಯ ಹೂಡಲಿರುವ ಪಕ್ಷದ ನಾಯಕರು ವಿವಿಧ ಸಮುದಾಯದವರನ್ನು ಭೇಟಿಯಾಗುವ ಕಾರ್ಯಕ್ರಮವಿದೆ ಎಂದರು.

ಮರುದಿನ ಮಾ.11ರಂದು ಬೆಳಗ್ಗೆ 10.30 ಗಂಟೆಗೆ ನಗರದ ಶ್ರೀ ಚೌಡೇಶ್ವರಿ ದೇವಸ್ಥಾನದಿಂದ ಜನರಲ್ ಕೆ.ಎಸ್. ತಿಮ್ಮಯ್ಯ ವೃತ್ತದವರೆಗೆ 'ರೋಡ್ ಶೋ' ಮತ್ತು ವಿಜಯ ಸಂಕಲ್ಪ ರಥದಲ್ಲಿ ಪಕ್ಷದ ನಾಯಕರು ಮಾತನಾಡಲಿದ್ದಾರೆ. ಬಳಿಕ ರಥ ದಕ್ಷಿಣಕನ್ನಡದತ್ತ ತೆರಳಲಿದೆಯೆಂದು ಕಾರ್ಯಕ್ರಮಗಳ ವಿವರ ನೀಡಿದರು.

ವಿಜಯಸಂಕಲ್ಪ ಯಾತ್ರೆಯ ಸಮಾರೋಪ ಮಾ.25 ಇಲ್ಲವೆ 26 ರಂದು ದಾವಣಗೆರೆಯಲ್ಲಿ ನಡೆಯಲಿದೆ. ಇದರಲ್ಲಿ ಪ್ರಧಾನಮಂತ್ರಿ ನರೇಂದ್ರಮೋದಿ ಪಾಲ್ಗೊಳ್ಳಲಿದ್ದಾರೆ. ಈ ಕಾರ್ಯಕ್ರಮದಲ್ಲಿ ಜಿಲ್ಲೆಯ ಸಾವಿರಾರು ಸಂಖ್ಯೆಯ ಕಾರ್ಯಕರ್ತರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಮೋರ್ಚಾಗಳ ಸಮಾವೇಶ: ಪಕ್ಷದ ವಿವಿಧ ಮೋರ್ಚಾಗಳ ಸಮಾವೇಶಗಳನ್ನು ಆಯೋಜಿಸಲಾಗುತ್ತಿದ್ದು, ಈಗಾಗಲೇ ವಿರಾಜಪೇಟೆ ಕ್ಷೇತ್ರದ ಚೆನ್ನಯ್ಯನಕೋಟೆಯಲ್ಲಿ ಒಬಿಸಿ ಸಮಾವೇಶ ನಡೆದಿದೆ. ಮಾ.13 ರಂದು ಸೋಮವಾರಪೇಟೆಯ ಒಕ್ಕಲಿಗರ ಸಮುದಾಯ ಭವನದಲ್ಲಿ ಯುವ ಮೋರ್ಚಾ ಸಮಾವೇಶ ನಡೆಯಲಿದ್ದು, ಇಂಧನ ಸಚಿವ ವಿ.ಸುನಿಲ್ ಕುಮಾರ್ ಭಾಗವಹಿಸಲಿದ್ದಾರೆ ಎಂದರು. ಮಾ.14ರಂದು ಮೂರ್ನಾಡು ಕೊಡವ ಸಮಾಜದಲ್ಲಿ ರೈತ ಮೋರ್ಚಾ ಸಮಾವೇಶ ನಡೆಯಲಿದ್ದು, ಗೃಹ ಸಚಿವ ಆರಗ ಜ್ಞಾನೇಂದ್ರ ಪಾಲ್ಗೊಳ್ಳಲಿದ್ದಾರೆ. ಮಾ.15 ರಂದು ವಿರಾಜಪೇಟೆಯಲ್ಲಿ ಮಹಿಳಾ ಮೋರ್ಚಾ ಸಮಾವೇಶ ಜರುಗಲಿದ್ದು, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಭಾಗವಹಿಸಲಿದ್ದಾರೆ. ಮಾ.16 ರಂದು ಕುಶಾಲನಗರದಲ್ಲಿ ಎಸ್.ಸಿ. ಮೋರ್ಚಾದ ಕಾರ್ಯಕ್ರಮ ಆಯೋಜಿತವಾಗಿದ್ದು, ಇದರಲ್ಲಿ ಸಚಿವ ಗೋವಿಂದ ಕಾರಜೋಳ ಪಾಲ್ಗೊಳ್ಳಲಿದ್ದಾರೆ. ಮಾ.20ರಂದು ಪೊನ್ನಂಪೇಟೆಯಲ್ಲಿ ಎಸ್.ಟಿ. ಮೋರ್ಚಾದ ಸಮಾವೇಶ ನಡೆಯಲಿರುವುದಾಗಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಜೀವ ವೈವಿಧ್ಯ ಮಂಡಳಿಯ ಅಧ್ಯಕ್ಷ ನಾಪಂಡ ರವಿ ಕಾಳಪ್ಪ, ಜಿಲ್ಲಾ ಬಿಜೆಪಿ ವಕ್ತಾರ ಮಹೇಶ್ ಜೈನಿ, ಪ್ರಧಾನ ಕಾರ್ಯದರ್ಶಿ ಹೆಚ್.ಕೆ. ಮಾದಪ್ಪ ಉಪಾಧ್ಯಕ್ಷೆ ರೂಪ ಸತೀಶ್, ನಗರಾಧ್ಯಕ್ಷ ಮನು ಮಂಜುನಾಥ್ ಉಪಸ್ಥಿತರಿದ್ದರು.

ಇಂದು ವಿದ್ಯುತ್ ವ್ಯತ್ಯಯ

ಮಡಿಕೇರಿ, ಮಾ.7– ಮಡಿಕೇರಿ ವಿದ್ಯುತ್ ಉಪ–ಕೇಂದ್ರದಿಂದ ಹೊರಹೋಗುವ ಗದ್ದಿಗೆ ಮತ್ತು ಓಂಕಾರೇಶ್ವರ ಫೀಡರ್‌ನಲ್ಲಿ ತುರ್ತು ನಿರ್ವಹಣೆ ಕಾರ್ಯ ನಿರ್ವಹಿಸಬೇಕಿರುವುದರಿಂದ ಮಾ.9 ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಉಪ ಕೇಂದ್ರಗಳಲ್ಲಿ ವಿದ್ಯುತ್ ಸರಬರಾಜು ಸ್ಥಗಿತಗೊಳಿಸಲಾಗುವುದು.

ಗೌಡ ಸಮಾಜ, ಕನ್ನಂಡಬಾಣೆ, ಓಂಕಾರೇಶ್ವರ ದೇವಸ್ಥಾನ ರಸ್ತೆ ಬೈಪಾಸ್, ಗಣಪತಿಬೀದಿ, ಜೂನಿಯರ್ ಕಾಲೇಜು, ಸಂಪಿಗೆಕಟ್ಟೆ, ಅಜಾದ್‌ನಗರ, ಮಾರ್ಕೆಟ್, ಎ.ವಿ.ಶಾಲೆ, ಭಗವತಿನಗರ, ಕಾನ್ವೆಂಟ್ ಜಂಕ್ಷನ್, ಗಾಳಿಬೀಡು, ಕಾಲೂರು, ಹೆಬ್ಬೆಟ್ಟಗೇರಿ ಹಾಗೂ ಸುತ್ತಮುತ್ತಲ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಮೂರ್ನಾಡು, ವಿದ್ಯುತ್ ಉಪ–ಕೇಂದ್ರದಿಂದ ಹೊರಹೋಗುವ ನಾಪೋಕ್ಲು ಮತ್ತು ಹೊದ್ದೂರು ಫೀಡರ್‌ನಲ್ಲಿ ತುರ್ತು ನಿರ್ವಹಣೆ ಕಾರ್ಯ ನಿರ್ವಹಿಸಬೇಕಿರುವುದರಿಂದ ಮಾರ್ಚ್ 9 ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಉಪಕೇಂದ್ರಗಳಲ್ಲಿ ವಿದ್ಯುತ್ ಸರಬರಾಜು ಸ್ಥಗಿತಗೊಳಿಸಲಾಗುವುದು.

ಅಶೋಕ್ ನಿಧನ



ವಿರಾಜಪೇಟೆ, ಮಾ.8– ಕೊಡಗು ಖಾಸಗಿ ಬಸ್ ಕಾರ್ಮಿಕರ ಸಂಘದ ಸಂಸ್ಥಾಪಕ ಅಧ್ಯಕ್ಷ ಮುಲ್ಲೇಂಗಡ ಸಿ. ಅಶೋಕ್ (62) ಅವರು ಮಂಗಳವಾರ ರಾತ್ರಿ ಹೃದಯಾಘಾತದಿಂದ ನಿಧನ ಹೊಂದಿದ್ದಾರೆ.

ಮುಲ್ಲೇಂಗಡ ಅಶೋಕ್ ಅವರು ವಿರಾಜಪೇಟೆಯ ಕರ್ನಾಟಕ ಸಂಘದ ಸಹ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದರು. ಮೃತರು ಪತ್ನಿ, ಓರ್ವ ಪುತ್ರ ಹಾಗೂ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಬುಧವಾರ ಸಮೀಪದ ಬಿಟ್ಟಂಗಾಲದ 2ನೇ ರುದ್ರಗುಪ್ಪೆ ಗ್ರಾಮದಲ್ಲಿ ನಡೆಯಿತು.

ಕೊಡವ ಮಹಿಳೆಯರ ಸಬಲೀಕರಣಕ್ಕೆ ಆಗ್ರಹಿಸಿ ಕೊಡವ ನ್ಯಾಷನಲ್ ಕೌನ್ಸಿಲ್‌ನಿಂದ ಸತ್ಯಾಗ್ರಹ



ಮಡಿಕೇರಿ, ಮಾ.8– ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ದಿನವಾದ ಇಂದು ಜಿಲ್ಲಾಧಿಕಾರಿಗಳ ಕಚೇರಿ ಎದುರು ಕೊಡವ ಮಹಿಳೆಯರ ಸಬಲೀಕರಣಕ್ಕಾಗಿ ಒತ್ತಾಯಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ವತಿಯಿಂದ ಧರಣಿ ಸತ್ಯಾಗ್ರಹ ನಡೆಸಿ ಹಕ್ಕೊತ್ತಾಯಗಳನ್ನು ಮಂಡಿಸಲಾಯಿತು. ನಗರದ ಜಿಲ್ಲಾಧಿಕಾರಿಗಳ ಕಚೇರಿ ಎದುರು ಕೊಡವ ಮಹಿಳೆಯರ ಪರವಾಗಿ ವಿವಿಧ ಹಕ್ಕೊತ್ತಾಯಗಳನ್ನು ಮಂಡಿಸಿದ ನಾಚಪ್ಪ, ಬಳಿಕ ಜಿಲ್ಲಾಡಳಿತದ ಮೂಲಕ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿದರು.

ನಂತರ ಮಾತನಾಡಿದ ಸಿಎನ್‌ಸಿ ಅಧ್ಯಕ್ಷ ಎನ್.ಯು. ನಾಚಪ್ಪ, ಅತ್ಯಂತ ಸೂಕ್ಷ್ಮ ಕೊಡವ ಬುಡಕಟ್ಟು ಜನಾಂಗದ ಮಹಿಳೆಯರಿಗೆ ಸಂವಿಧಾನದತ್ತವಾದ ಹಕ್ಕುಗಳನ್ನು ನೀಡಬೇಕು. ಸ್ವಾಯತ್ತ ಕೊಡವ ಲ್ಯಾಂಡ್ ಘೋಷಿಸಬೇಕು ಎಂದು ಆಗ್ರಹಿಸಿದರು. ನೆಲ, ಜಲ, ಭಾಷೆ, ಸಂಸ್ಕೃತಿ, ಪರಂಪರೆ, ಆರ್ಥಿಕ ಮತ್ತು ರಾಜಕೀಯ ಸ್ವಾತಂತ್ರ್ಯದೊಂದಿಗೆ ಸಾಂವಿಧಾನಿಕ ಭದ್ರತೆಯನ್ನು ಖಾತ್ರಿಪಡಿಸಬೇಕು. ಆಂತರಿಕ ರಾಜಕೀಯ ಸ್ವ–ನಿರ್ಣಯದ ಹಕ್ಕುಗಳನ್ನು ನೀಡಬೇಕು. ಕೊಡವರ ಜನ್ಮಸಿದ್ಧಹಕ್ಕಾಗಿರುವ ಕೋವಿ ಹೊಂದುವ ವಿನಾಯಿತಿಯನ್ನು ಶಾಶ್ವತಗೊಳಿಸಬೇಕು. ಆ ಮೂಲಕ ಆಡಳಿತ ವ್ಯವಸ್ಥೆಗಳು ಕೊಡವ ಮಹಿಳಾ ಸಬಲೀಕರಣಕ್ಕೆ ಆದ್ಯತೆ ನೀಡಬೇಕೆಂದು ನಾಚಪ್ಪ ಹಕ್ಕೊತ್ತಾಯಗಳನ್ನು ಮಂಡಿಸಿದರು.

ಸತ್ಯಾಗ್ರಹದಲ್ಲಿ ಪಟ್ಟಮಾಡ ಲಲಿತ, ಕಲಿಯಂಡ ಮೀನಾ ಪ್ರಕಾಶ್, ಪುಲ್ಲೇರ ಸ್ವಾತಿ ಕಾಳಪ್ಪ, ಲೆ.ಕರ್ನಲ್ ಬಿ.ಎಂ ಪಾರ್ವತಿ, ಅರೆಯಡ ಸವಿತ, ಅಪ್ಪಚ್ಚಿರ ರೀನಾ ರಮ್ಮಿ, ಕೂಪದಿರ ಪುಷ್ಪ ಮುತ್ತಪ್ಪ, ಪುಟ್ಟಿಚಂಡ ನಿಮಿತ ದೇವಯ್ಯ, ಚೋಳಪಂಡ ಜ್ಯೋತಿ ನಾಣಯ್ಯ, ಇಟ್ಟಿರ ಸಬಿತ, ನಂದಿನೆರವಂಡ ನಿಶ ಅಚ್ಚಯ್ಯ, ಬೊಪ್ಪಂಡ ಬೊಳ್ಳಮ್ಮ ನಾಣಯ್ಯ, ಕಲಿಯಂಡ ಪ್ರಕಾಶ್, ಅರೆಯಡ ಗಿರೀಶ್, ಚಂಬಂಡ ಜನತ್, ಕಿರಿಯಮಾಡ ಶರೀನ್, ಬೇಪಡಿಯಂಡ ದಿನು, ಪುಲ್ಲೇರ ಕಾಳಪ್ಪ, ಅಪ್ಪಚ್ಚಿರ ರಮ್ಮಿ ನಾಣಯ್ಯ, ನಂದಿನೆರವಂಡ ವಿಜು, ಕೂಪದಿರ ಸಾಬು, ಪುಟ್ಟಿಚಂಡ ದೇವಯ್ಯ, ಮಣುವಟ್ಟಿರ ಚಿಣ್ಣಪ್ಪ, ಮಂಡಪಂಡ ಮನೋಜ್, ಚಂಗಂಡ ಚಾಮಿ, ಮೇದುರ ಕಂಠಿ, ಬಡುವಂಡ ವಿಜಯ, ಅಜ್ಜಿನಿಕಂಡ ಸನ್ನಿ, ನಂದಿನೆರವಂಡ ಅಯ್ಯಣ್ಣ, ನಂದಿನೆರವಂಡ ಅಪ್ಪಯ್ಯ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು.

ಛಾಯಾಗ್ರಾಹಕರು ಅದ್ಭುತ ಕಲಾವಿದರು...



ಕುಶಾಲನಗರ, ಮಾ.8– ಛಾಯಾಗ್ರಾಹಕರು ಕತ್ತಲೆಯಲ್ಲಿ ನಿಂತು ಜನರನ್ನು ಬೆಳಕಿನಲ್ಲಿ ನಿಲ್ಲಿಸಿ ಫೋಟೋ ತೆಗೆಯುವ ಅದ್ಭುತ ಕಲಾವಿದರು ಎಂದು ಕೊಡಗು ಜಿಲ್ಲಾಧಿಕಾರಿ ಡಾ. ಬಿ.ಸಿ. ಸತೀಶ್, ಛಾಯಾಗ್ರಾಹಕರನ್ನು ಶ್ಲಾಘಿಸಿದರು.

ಕೊಡಗು ಜಿಲ್ಲಾ ಛಾಯಾಗ್ರಾಹಕರ ಕ್ಷೇಮಾಭಿವೃದ್ಧಿ ಸಂಘ ಮತ್ತು ಕ್ಯಾನನ್ ಕಂಪೆನಿಯ ಆಶ್ರಯದಲ್ಲಿ ಮಂಗಳವಾರ ನಡೆದ ಛಾಯಾ ಸಮ್ಮಿಲನ 2023 ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಂಘದ ಆಶಯದಂತೆ ಸಂಘಟನೆಗಾಗಿ ನಿವೇಶನ ಒಂದಕ್ಕೆ ಬೇಡಿಕೆ ಇಟ್ಟಿದ್ದಾರೆ. ಪತ್ರಕರ್ತರು ಮತ್ತು ಛಾಯಾಗ್ರಾಹಕರು ಒಂದೇ ನಾಣ್ಯದ 2 ಮುಖಗಳು. ಅದರಿಂದ ಈ ಎರಡು ಸಂಘಟನೆಗಳಿಗೆ ಒಂದೇ ನಿವೇಶನ ನೀಡಿ ಕಟ್ಟಡದಲ್ಲಿ ಮೇಲೆ ಒಬ್ಬರಿಗೆ ಮತ್ತು ಕೆಳಗೆ ಒಬ್ಬರಿಗೆ ನೀಡುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎನ್ನುವ ಭರವಸೆ ನೀಡಿದರು.

ಕೊಡಗು ಜಿಲ್ಲಾ ಛಾಯಾಗ್ರಾಹಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಸ್.ಆರ್.ವಸಂತ ಮಾತನಾಡಿ, ಜಿಲ್ಲೆಯ ಛಾಯಾಗ್ರಾಹಕರ ಆರ್ಥಿಕ ಸಂಕಷ್ಟಕ್ಕೆ ಸರ್ಕಾರ ವಿಶೇಷ ಸೌಲಭ್ಯ ಘೋಷಣೆ ಮಾಡಬೇಕು. ಛಾಯಾಗ್ರಾಹಕರ ಅಕಾಡೆಮಿ ಸ್ಥಾಪನೆ ಮಾಡಬೇಕು ಎಂದು ಸರ್ಕಾರವನ್ನು ಕೇಳಿಕೊಂಡರು.

ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ್ದ ಫೋಟೋ ಕಲರ್ ಲ್ಯಾಬ್ ಅವರ ಸ್ಟಾಲ್‌ಗಳು, ಆಲ್ಬಮ್ ಪ್ರಿಂಟಿಂಗ್‌ನ ವಿವಿಧ ಮಾದರಿಗಳನ್ನು ಪ್ರದರ್ಶನ ಮಾಡಲಾಯಿತು. ಕೆನಾನ್ ಕಂಪೆನಿಯ ಅತ್ಯಾಧುನಿಕ ಕ್ಯಾಮರಾಗಳನ್ನು ಪ್ರದರ್ಶಿಸಿ ವಿಶೇಷ ರಿಯಾಯಿತಿ ದರದಲ್ಲಿ ವ್ಯಾಪಾರ ಮಾಡಿದರು.

ಕುಶಾಲನಗರ ತಾಲೂಕು ತಹಸೀಲ್ದಾರ್ ಟಿ.ಎಂ. ಪ್ರಕಾಶ್, ಕೊಡಗು ಜಿಲ್ಲಾ ಛಾಯಾಗ್ರಾಹಕರ ಕ್ಷೇಮಾಭಿವೃದ್ಧಿ ಸಂಘದ ಪ್ರಧಾನ ಕಾರ್ಯದರ್ಶಿ ಸೊಲೊಮನ್ ಡೇವಿಡ್, ಸಹ ಕಾರ್ಯದರ್ಶಿ ರಂಜಿತ್, ಐಪಿಪಿ ಸುರೇಶ್ ಮಾವಟ್ಕರ್, ಖಜಾಂಚಿ ಪ್ರಕಾಶ್, ಮುನೀರ್ ಅಹಮ್ಮದ್, ರೋಷನ್, ಮಾಜಿ ಅಧ್ಯಕ್ಷರಾದ ಗುಡ್ಡೆಮನೆ ವಿಶ್ವ ಕುಮಾರ್, ಮಾಳೆಟಿರ ಲಕ್ಷ್ಮಣ್, ಡಾಡು ಜೋಸೆಫ್ ಇತರರು ಉಪಸ್ಥಿತರಿದ್ದರು.

ಬಿಜೆಪಿ ಪ್ರಣಾಳಿಕೆ ಸಲಹಾ ಸಂಗ್ರಹ ಅಭಿಯಾನ

ಮಾ.20ರವರೆಗೆ ಒಂದು ಕೋಟಿ ಜನರಿಂದ ಸಲಹೆ ಸಂಗ್ರಹ



ಚಾಮರಾಜನಗರ, ಮಾ.8– ಜನರ ಆಶೋತ್ತರಗಳಿಗೆ ಅನುಗುಣವಾಗಿ ಬಿಜೆಪಿಯ ಪ್ರಣಾಳಿಕೆಯನ್ನು ಸಿದ್ಧಪಡಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ರಾಜ್ಯಾದ್ಯಂತ ಪ್ರಣಾಳಿಕೆ ಸಲಹಾ ಸಂಗ್ರಹ ಅಭಿಯಾನ ಆರಂಭಿಸಲಾಗಿದೆ ಎಂದು ಬಿಜೆಪಿ ಪ್ರಣಾಳಿಕೆ ಸಲಹಾ ಅಭಿಯಾನದ ಮೈಸೂರು ವಿಭಾಗದ ಸಂಚಾಲಕರೂ ಆದ ಶಾಸಕ ಎನ್. ಮಹೇಶ್ ತಿಳಿಸಿದರು.

ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಮಾ.2ರಿಂದ ಬಿಜೆಪಿ ಪ್ರಣಾಳಿಕೆ ಸಲಹಾ ಸಂಗ್ರಹ ಅಭಿಯಾನ ಆರಂಭವಾಗಿದ್ದು, ಮಾ.20ರವರೆಗೆ ನಡೆಯಲಿದೆ. ರಾಜ್ಯಾದ್ಯಂತ ಒಂದು ಕೋಟಿ ಜನರಿಂದ ಸಲಹೆ ಸಂಗ್ರಹಿಸಲಾಗುತ್ತಿದೆ ಎಂದು ತಿಳಿಸಿದರು. ರಾಜ್ಯಾಧ್ಯಕ್ಷರ ನೇತೃತ್ವ ದಲ್ಲಿ ಸಮಿತಿ ರಚನೆಯಾಗಿದ್ದು, ಒಟ್ಟು 16 ಜನ ಸದಸ್ಯರಿದ್ದಾರೆ. ಆರೋಗ್ಯ ಸಚಿವ ವಿ. ಸುಧಾಕರ್, ತೇಜಸ್ವಿನಿ ಅನಂತ ಕುಮಾರ್ ಸಮಿತಿಯ ಸಂಚಾಲಕರಾಗಿ, ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಸಹ ಸಂಚಾಲಕರಾಗಿ ನೇಮಕಗೊಂಡಿದ್ದಾರೆ ಎಂದು ಮಾಹಿತಿ ನೀಡಿದರು.

ಪ್ರತಿ ವಿಧಾನಸಭಾ ಕ್ಷೇತ್ರಕ್ಕೂ 25 ಬಾಕ್ಸ್: ಬಿಜೆಪಿಯ ಪ್ರಣಾಳಿಕೆ ಸಲಹಾ ಸಂಗ್ರಹ ಅಭಿಯಾನಕ್ಕೆ ಸಂಬಂಧಿಸಿದಂತೆ ಪ್ರತಿ ವಿಧಾನಸಭಾ ಕ್ಷೇತ್ರವಾರು ಸಮಿತಿ ರಚನೆ ಮಾಡಿ, 25 ಬಾಕ್ಸ್‌ಗಳೊಂದಿಗೆ ಸಾರ್ವಜನಿಕರ ಮುಂದೆ ಹೋಗಲಿದ್ದೇವೆ. ಅವರ ನಿರೀಕ್ಷೆ ಹಾಗೂ ಬೇಡಿಕೆ, ಸರ್ಕಾರಕ್ಕೆ ಅವರು ನೀಡುವ ಸಲಹೆಗಳನ್ನು ಸಂಗ್ರಹಣೆ ಮಾಡಲಾಗುತ್ತದೆ. ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರದಿಂದ ಒಟ್ಟು 100 ಸಲಹಾ ಪೆಟ್ಟಿಗೆಗಳನ್ನು ಜನರ ಬಳಿಗೆ ತೆಗೆದುಕೊಂಡು ಹೋಗಲಾಗುತ್ತಿದೆ ಎಂದು ತಿಳಿಸಿದರು.

ವಿವಿಧ ವರ್ಗಗಳಿಂದ ಸಲಹೆ ಸಂಗ್ರಹ: ವೈದ್ಯರು, ವಕೀಲರು, ರೈತರು, ಕಾರ್ಮಿಕರು, ಶಿಕ್ಷಕರು, ವಿದ್ಯಾರ್ಥಿಗಳು ಸೇರಿದಂತೆ ಸಮಾಜ ವಿವಿಧ ವರ್ಗಗಳ ಜನರಿಂದ ಸಲಹೆಗಳನ್ನು ಸಂಗ್ರಹಣೆ ಮಾಡಿ ನಂತರ ಮೂರು ಹಂತದಲ್ಲಿ ತಜ್ಞರಿಂದ ಪರಿಶೀಲಿಸಲಾಗುವುದು. ಚುನಾವಣೆ ದಿನಾಂಕ ಘೋಷಣೆಯಾದ ಬಳಿಕ ಬಿಜೆಪಿ ಪ್ರಣಾಳಿಕೆ ಬಿಡುಗಡೆ ಮಾಡಲಾಗುವುದು ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಆರಂಭ: ಜಿಲ್ಲೆಯಲ್ಲಿ ಈಗಾಗಲೇ ಕೊಳ್ಳೇಗಾಲ, ಯಳಂದೂರು, ಸಂತೇಮರಹಳ್ಳಿಯಲ್ಲಿ ಅಭಿಯಾನ ಆರಂಭವಾಗಿದೆ. ಮಾ. 8ರಂದು ಹನೂರು, ಮಾ. 9ರಂದು ಗುಂಡ್ಲುಪೇಟೆ ಹಾಗೂ ಮಾ. 13ರಂದು ಚಾಮರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ಅಭಿಯಾನ ಪ್ರಾರಂಭವಾಗಲಿದೆ. ನಂತರ ಪಂಚಾಯಿತಿ ಮಟ್ಟದಲ್ಲಿ ಅಭಿಯಾನ ನಡೆಯಲಿದ್ದು, ಎಲ್ಲಾ ವಿಧಾನಸಭಾ ಕ್ಷೇತ್ರದಲ್ಲಿ ಒಬ್ಬರು ಸಂಚಾಲಕರು ಹಾಗೂ ಇಬ್ಬರು ಸಹ ಸಂಚಾಲಕರ ನೇತೃತ್ವದಲ್ಲಿ ಸಮಿತಿಯು ಕೆಲಸ ಮಾಡಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಲಹಾ ಸಮಿತಿಯ ಜಿಲ್ಲಾ ಸಂಚಾಲಕ ಬಾಲಸುಬ್ರಮಣ್ಯಂ, ಬಿಜೆಪಿ ಜಿಲ್ಲಾ ಪ್ರಧಾನಕಾರ್ಯದರ್ಶಿ ಜಿ. ನಾಗಶ್ರೀ ಪ್ರತಾಪ್, ಜಿಲ್ಲಾ ಉಪಾಧ್ಯಕ್ಷ ಪಿ.ವೃಷಬೇಂದ್ರಪ್ಪ, ತಾಲೂಕು ಅಧ್ಯಕ್ಷ ಬಸವಣ್ಣ, ಟೌನ್ ಅಧ್ಯಕ್ಷ ರಾಜು, ಮುಖಂಡ ಸಿದ್ದರಾಜು ಇದ್ದರು.

ಶೀಘ್ರದಲ್ಲೇ ಕೊಳ್ಳೇಗಾಲ ಬಸ್ ನಿಲ್ದಾಣ ಉದ್ಘಾಟನೆ

ಕೊಳ್ಳೇಗಾಲ ಪಟ್ಟಣದಲ್ಲಿ ನಿರ್ಮಾಣವಾಗುತ್ತಿರುವ ನೂತನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಶೀಘ್ರದಲ್ಲೇ ಉದ್ಘಾಟನೆ ಮಾಡಲಾಗುವುದು ಎಂದು ಶಾಸಕ ಎನ್. ಮಹೇಶ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಪಟ್ಟಣದಲ್ಲಿ 23.50 ಕೋಟಿ ವೆಚ್ಚದಡಿ 1.30 ಸೆಂಟ್‌ಗಳಲ್ಲಿ ಬಸ್ ನಿಲ್ದಾಣ ನಿರ್ಮಾಣವಾಗಿದೆ. ಇನ್ನೊಂದು ವಾರದೊಳಗೆ ದಿನಾಂಕ ನಿಗದಿ ಮಾಡಿ ಉದ್ಘಾಟನೆ ಮಾಡಲಾಗುವುದು. ಈ ಸಂಬಂಧ ಸಿದ್ಧತೆ ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಲಾಗುವುದು ಎಂದರು. ನಿಲ್ದಾಣದಲ್ಲಿರುವ ಕೆಲವು ಹಳೆ ಮಳಿಗೆಯನ್ನು ಖಾಲಿ ಮಾಡದೆ ನ್ಯಾಯಾಲಯದಲ್ಲಿ ಪ್ರಕರಣ ಹೂಡಿದ್ದಾರೆ. ಹೀಗಾಗಿ ತೊಡಕಾಗಿದೆ. ಈ ಸಂಬಂಧ ಅಧಿಕಾರಿಗಳು ಮಳಿಗೆ ಮಾಲೀಕರೊಂದಿಗೆ ಸಂಧಾನ ಸಭೆ ನಡೆಸಿ, ಅವರಿಂದ ಪ್ರಕರಣ ಹಿಂಪಡೆಯುವಂತೆ ಮನವೊಲಿಸಲಾಗುವುದು ಎಂದರು.



ಚಾಮರಾಜನಗರ ತಾಲೂಕಿನ ಬೆಂಡರವಾಡಿ ಗ್ರಾಮದಲ್ಲಿ ಸೋಮವಾರ ಶ್ರೀ ಲಕ್ಷ್ಮೀ ನಾರಾಯಣಸ್ವಾಮಿ ರಥೋತ್ಸವ ಬಹಳ ವಿಜೃಂಭಣೆಯಿಂದ ನಡೆಯಿತು .ಚಿತ್ರ .ಬದನಗುಪ್ಪೆ ಮಲ್ಲಣ್ಣ

ಶಾಸಕ ಮಹೇಶ್‌ರಿಂದ ವಿಶೇಷಚೇತನರಿಗೆ ತ್ರಿಚಕ್ರ ವಾಹನ ವಿತರಣೆ



ಚಾಮರಾಜನಗರ, ಮಾ.8– ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಎಂಟು ಮಂದಿ ವಿಶೇಷಚೇತನರಿಗೆ ತ್ರಿಚಕ್ರ ವಾಹನವನ್ನು ಶಾಸಕ ಎನ್. ಮಹೇಶ್ ಇಂದು ವಿತರಿಸಿದರು.

ನಗರದ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿಂದು ಶಾಸಕ ಎನ್. ಮಹೇಶ್ ಅವರು ಅಂಗವಿಕಲರ ಕಲ್ಯಾಣ ಇಲಾಖೆ ವತಿಯಿಂದ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಖರೀದಿಸಿರುವ 8 ತ್ರಿಚಕ್ರ ವಾಹನಗಳ ಕೀ ಗಳನ್ನು ವಿಶೇಷಚೇತನರಿಗೆ ಹಸ್ತಾಂತರಿಸಿದರು. ಇದೇ ವೇಳೆ ಮಾತನಾಡಿದ ಅವರು, 2021–22ನೇ ಸಾಲಿನ ತಮ್ಮ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ವಿಶೇಷಚೇತನರಿಗೆ ವಾಹನ ಸೌಲಭ್ಯ ಒದಗಿಸುವ ಸಲುವಾಗಿ 10 ಲಕ್ಷ ರೂ. ನಿಗದಿಪಡಿಸಿಕೊಳ್ಳಲಾಗಿತ್ತು. ಈ ಪೈಕಿ 8 ಮಂದಿ ವಿಶೇಷಚೇತನರಿಗೆ ವಾಹನ ಖರೀದಿಸಿ ವಿತರಿಸಲಾಗಿದೆ. ಪ್ರತಿ ವಾಹನಕ್ಕೆ 70,384 ರೂ. ವೆಚ್ಚವಾಗಿದೆ ಎಂದರು.

ಒಟ್ಟಾರೆ 10 ಲಕ್ಷ ರೂ. ಅನುದಾನದಲ್ಲಿ 8 ವಾಹನಗಳ ಖರೀದಿಗೆ 5.65 ಲಕ್ಷ ರೂ. ವೆಚ್ಚವಾಗಿದೆ. ಇನ್ನೂ 4.35 ಲಕ್ಷ ರೂ. ಉಳಿದಿದೆ. ಈ ಹಣದಲ್ಲಿ ಇನ್ನೂ 6 ಮಂದಿ ವಿಶೇಷಚೇತನರಿಗೆ ವಾಹನ ವಿತರಿಸಲು ಅವಕಾಶವಿದೆ. ಹೀಗಾಗಿ ತಮ್ಮ ಕ್ಷೇತ್ರದ ಕೊಳ್ಳೇಗಾಲ, ಸಂತೇಮರ ಹಳ್ಳಿ ಹಾಗೂ ಯಳಂದೂರು ಭಾಗದ ಅರ್ಹ ವಿಶೇಷಚೇತನರನ್ನು ಗುರುತಿಸಿ ಒಂದು ವಾರದೊಳಗೆ ವಾಹನ ಖರೀದಿಸಿ ವಿತರಿಸಲು ಕ್ರಮವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ತಿಳಿಸಿದರು.

ವಿಶೇಷಚೇತನರಿಗೆ ನೆರವಾಗುವುದು ಅತ್ಯಂತ ಮಾನವೀಯ ಕಾರ್ಯವಾಗಿದೆ. ಗ್ರಾಮೀಣ ಪ್ರದೇಶದಲ್ಲಿ ವಿಶೇಷಚೇತನರು ವಾಹನ ಕೋರಿ ಮನವಿ ಸಲ್ಲಿಸಿದ್ದರು. ಅವರಿಗೆ ಸೌಲಭ್ಯ ನೀಡಲಾಗಿದೆ. ಇಂದು ವಾಹನ ಪಡೆದಿರುವ ವಿಶೇಷಚೇತನರ ಕುಟುಂಬಕ್ಕೆ ಶುಭ ಹಾರೈಸುವುದಾಗಿ ಶಾಸಕ ಎನ್. ಮಹೇಶ್ ಹೇಳಿದರು.

ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಸರಸ್ವತಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಗೀತಾಲಕ್ಷ್ಮಿ, ಪ್ರಭಾರ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಗೋವಿಂದ, ಇತರರು ಹಾಜರಿದ್ದರು.

ಅಪರಿಚಿತ ವಾಹನ ಡಿಕ್ಕಿ: ಮಹಿಳೆ ಸಾವು

ಚಾಮರಾಜನಗರ, ಮಾ.8– ತಾಲೂಕಿನ ವೀರನಪುರ ಕ್ರಾಸ್ ಹಾಗೂ ಉಡಿಗಾಲ ಮಾರ್ಗಮಧ್ಯದಲ್ಲಿರುವ ಬಣ್ಣಾರಿ ದೇವಸ್ಥಾನದ ಸಮೀಪ ಗುರುವಾರ ಮಧ್ಯಾಹ್ನ ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ರಸ್ತೆ ಬದಿ ಬಸ್‌ಗಾಗಿ ನಿಂತಿದ್ದ ಮಹಿಳೆಯೊಬ್ಬರು ಮೃತಪಟ್ಟಿದ್ದಾರೆ.

ನಗರದ ಮೇಗಲನಾಯಕರ ಬೀದಿಯ ಪದ್ಮ(60) ಮೃತ ದುರ್ದೈವಿ. ಇವರು ಪ್ರತಿದಿನ ವೀರನಪುರ ಕ್ರಾಸ್ ಬಳಿ ಇರುವ ತಮಿಳುನಾಡು ಮೂಲದವರ ಜಮೀನಿಗೆ ಕೆಲಸಕ್ಕೆ ಹೋಗುತ್ತಿದ್ದರು.

ಎಂದಿನಂತೆ ಗುರುವಾರವೂ ಸಹ ಕೆಲಸಕ್ಕೆ ಹೋಗಿದ್ದು, ಬೆಂಡರವಾಡಿ ದೇವಸ್ಥಾನಕ್ಕೆ ಹೋಗುವು ದಾಗಿ ತಿಳಿಸಿ, ಮಧ್ಯಾಹ್ನ ನಗರಕ್ಕೆ ತೆರಳಲು ರಸ್ತೆ ಬದಿಯಲ್ಲಿ ಬಂದು ನಿಂತಿದ್ದಾಗ ಗುಂಡ್ಲುಪೇಟೆಯಿಂದ ಚಾಮರಾಜನಗರದ ಕಡೆಗೆ ಬಂದ ಅಪರಿಚಿತ ವಾಹನವು ಡಿಕ್ಕಿ ಹೊಡೆದಿದ್ದು, ತಕ್ಷಣವೇ ಆಂಬ್ಯುಲೆನ್ಸ್ ಮೂಲಕ ಸಿಮ್ಸ್ ಆಸ್ಪತ್ರೆಗೆ ಕರೆದುಕೊಂಡು ಬರುತ್ತಿದ್ದ ಮಾರ್ಗಮಧ್ಯೆ ಕೊನೆಯುಸಿ ರೆಳೆದಿದ್ದಾರೆ.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ: ರೆಡ್‌ಕ್ರಾಸ್ ಸೊಸೈಟಿಯಿಂದ ಮಕ್ಕಳಿಗೆ ಹೆಲ್ತ್‌ಕಿಟ್ ವಿತರಣೆ



ಚಾಮರಾಜನಗರ, ಮಾ.8– ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ರೆಡ್‌ಕ್ರಾಸ್ ಸೊಸೈಟಿ ವತಿಯಿಂದ ನಗರದ ದೀನಬಂಧು ಶಾಲೆಯ ಮಕ್ಕಳಿಗೆ ಹಾಗೂ ಪಾರ್ವತಿ ಬಾಲ ಮಂದಿರದ ಮಕ್ಕಳಿಗೆ ಇಂದು ಹೆಲ್ತ್‌ಕಿಟ್ ವಿತರಿಸಲಾಯಿತು.

ನಗರದ ರಾಮಸಮುದ್ರದಲ್ಲಿರುವ ದೀನಬಂಧು ಶಾಲೆಯಲ್ಲಿ ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಅವರು ವಿದ್ಯಾರ್ಥಿಗಳಿಗೆ ಹೆಲ್ತ್‌ಕಿಟ್ ವಿತರಿಸಿದರು. ಇದೇ ಸಂದರ್ಭದಲ್ಲಿ ಮಾತನಾಡಿದ ಅವರು, ಸಮಾಜದಲ್ಲಿ ಪುರುಷರಿಗೆ ಸಿಗುವ ಎಲ್ಲ ಅವಕಾಶಗಳು ಮಹಿಳೆಯರಿಗೂ ನ್ಯಾಯ ಸಮ್ಮತವಾಗಿ ಸಿಗಬೇಕು. ಮಹಿಳೆಯೂ ಸಹ ಪುರುಷರಷ್ಟೇ ಸರಿಸಮಾನರು ಎಂಬ ವಾತಾವರಣ ನಿರ್ಮಾಣವಾಗಬೇಕು ಎಂದರು. ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಸಂದರ್ಭದಲ್ಲಿ ರೆಡ್‌ಕ್ರಾಸ್ ಸೊಸೈಟಿಯಿಂದ ನೈರ್ಮಲ್ಯ ಕಿಟ್‌ಗಳನ್ನು ವಿದ್ಯಾರ್ಥಿನಿಯರಿಗೆ ವಿತರಿಸುತ್ತಿರುವುದು ಪ್ರಶಂಸನೀಯ ಕಾರ್ಯವೆಂದು ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಅವರು ತಿಳಿಸಿದರು.

ಮಕ್ಕಳ ಸ್ನೇಹಿ ನ್ಯಾಯಾಲಯದ ನ್ಯಾಯಾಧೀಶರಾದ ನಿಶಾರಾಣಿ, ದೀನ ಬಂಧು ಸಂಸ್ಥೆಯ ಪ್ರೊ. ಜಯದೇವ್, ವೈದ್ಯಕೀಯ ಕಾಲೇಜಿನ ಡೀನ್ ಡಾ. ಸಂಜೀವ್, ರೆಡ್‌ಕ್ರಾಸ್ ಸೊಸೈಟಿಯ ಕಾರ್ಯದರ್ಶಿ ಡಾ.ಮಹೇಶ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಕೆ.ಎಂ. ವಿಶ್ವೇಶ್ವರಯ್ಯ, ಜಿಲ್ಲಾ ಸರ್ಜನ್ ಡಾ. ಕೃಷ್ಣಪ್ರಸಾದ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಇದಕ್ಕೂ ಮೊದಲು ಪಾರ್ವತಿ ಬಾಲ ಮಂದಿರದಲ್ಲಿ ಮಕ್ಕಳಿಗೆ ಮಕ್ಕಳ ಸ್ನೇಹಿ ನ್ಯಾಯಾಲಯದ ನ್ಯಾಯಾಧೀಶರಾದ ನಿಶಾರಾಣಿ ಅವರು ನೈರ್ಮಲ್ಯದ ಕಿಟ್‌ಗಳನ್ನು ವಿತರಣೆ ಮಾಡಿದರು.

ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಜಿಲ್ಲಾಧಿಕಾರಿಗೆ ಗ್ರಾಮಸ್ಥರ ಮನವಿ

ಚಾಮರಾಜನಗರ, ಮಾ.8– ಹನೂರು ತಾಲೂಕಿನ ವಡಕೆಹಳ್ಳ, ಅಂಬಿಕಾಪುರ ಹಾಗೂ ಎ.ಜಿ.ದೊಡ್ಡಿ ಗ್ರಾಮಸ್ಥರು ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ದಲಿತ ಸಂಘರ್ಷ ಸಮಿತಿ ಅಂಬೇಡ್ಕರ್ ವಾದ ಮೈಸೂರು ವಿಭಾಗೀಯ ಸಂಚಾಲಕ ಕೆ.ಸಿದ್ದರಾಜು ದೊಡ್ಡಿಂದುವಾಡಿ ಅವರ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಡಿ.ಎಸ್.ರಮೇಶ್ ಅವರಿಗೆ ಮನವಿ ಸಲ್ಲಿಸಿದರು.

ವಡಕೆಹಳ್ಳ ಗ್ರಾಮದಲ್ಲಿ ಓಂ ಶಕ್ತಿ ದೇವಾಲಯ ನಿರ್ಮಿಸಲು ತಮ್ಮ ವಿಶೇಷ ಅನುದಾನದ ಯೋಜನೆಯಡಿಯಲ್ಲಿ ಅನುದಾನ ನೀಡಬೇಕು. ಅಂಬಿಕಾಪುರದಲ್ಲಿ ಸಾರ್ವಜನಿಕ ಸ್ಮಶಾನಕ್ಕೆ ಕಾಯ್ದಿರಿಸಿರುವ ಜಾಗಕ್ಕೆ ಹದ್ದುಬಸ್ತು ಮಾಡಿಕೊಡಬೇಕು. ಎಂ.ಜಿ.ದೊಡ್ಡಿಯಲ್ಲಿ ಸುಳ್ವಾಡಿ ವಿಷಪ್ರಸಾದ ದುರಂತದಲ್ಲಿ ಮೃತಪಟ್ಟವರಿಗೆ ನೀಡಿರುವ ನಿವೇಶನ ಸಮಸ್ಯೆ ಬಗೆಹರಿಸಿಕೊಡುವಂತೆ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿರುವ ಮನವಿಯಲ್ಲಿ ಒತ್ತಾಯಿಸಿದ್ದಾರೆ. ಈ ಸಂದರ್ಭದಲ್ಲಿ ಜಿಲ್ಲಾ ಸಂಚಾಲಕ ಹಿಂಡಯ್ಯ ಮಾಂಬಳ್ಳಿ, ಹನೂರು ತಾಲೂಕು ಸಂಯೋಜಕ ಮಾದೇಶ್, ಬಣ್ಣಾರಿ ಅಂಬಿಕಾಪುರ, ಮುರುಗೇಶ್, ತಂಗವೇಲು ಹಾಜರಿದ್ದರು.

ಮೈಸೂರು ಮಿತ್ರ

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ

ಸೈಕಲ್ ಜಾಥಾ ಮೂಲಕ 'ಆರೋಗ್ಯವಂತ ಮಹಿಳೆ-ಆರೋಗ್ಯವಂತ ಭಾರತ' ಸಂದೇಶ



ಮೈಸೂರು, ಮಾ.8(ಆರ್‌ಕೆ)-ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಮೈಸೂರಲ್ಲಿ ಇಂದು ಸೈಕಲ್ ಜಾಥಾದ ಮೂಲಕ "ಆರೋಗ್ಯವಂತ ಮಹಿಳೆ-ಆರೋಗ್ಯವಂತ ಭಾರತ" ಸಂದೇಶ ಸಾರಲಾಯಿತು.

ವಿವಿಧ ಇಲಾಖೆಯ ನಾನಾ ಕಾರ್ಯಕ್ರಮದಡಿ ಏರ್ಪಡಿಸಲಾಗಿದ್ದ ಸೈಕ್ಲೊಥಾನ್ ಅನ್ನು ಮೈಸೂರಿನ ಅರಮನೆ ಮುಂದೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹೆಚ್ಚುವರಿ ನಿರ್ದೇಶಕರಾದ ಡಾ. ಪುಷ್ಪಲತಾ ಹಸಿರು ನಿಶಾನೆ ನೀಡುವ ಮೂಲಕ ಉದ್ಘಾಟಿಸಿದರು.

ಜಿಲ್ಲಾ ಆರೋಗ್ಯಾಧಿಕಾರಿ ಡಾ. ಕೆ.ಹೆಚ್. ಪ್ರಸಾದ್, ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ. ಸಿ.ಎಂ. ಜಯಂತ್, ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಡಾ.ಸಿರಾಜ್ ಅಹಮದ್, ಡಾ.ಎಸ್.ಮಹೇಶ್ವರಿ, ಡಾ.ಸುಧಾರಾಣಿ ನಾಯಕ, ಡಾ.ಭಾರತಿ, ಡಾ.ಆಶಾ, ಡಾ.ಅರ್ಚನಾ, ಮಹಾರಾಣಿ ಕಾಲೇಜು, ಎಟಿಎಂಇ, ವಿದ್ಯಾವರ್ಧಕ, ಎಂಐಟಿ, ಎನ್‌ಐಇ ಕಾಲೇಜು ವಿದ್ಯಾರ್ಥಿಗಳು ಸೈಕಲ್ ಜಾಥಾದಲ್ಲಿ ಪಾಲ್ಗೊಂಡು "ಆರೋಗ್ಯವಂತ ಮಹಿಳೆಯರಿಂದ ಆರೋಗ್ಯಕರ ಭಾರತ" ಘೋಷಣೆಯೊಂದಿಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು.

ಈ ಸಂದರ್ಭ ಮಾತನಾಡಿದ ಡಾ.ಪ್ರಸಾದ್, ಮಹಿಳೆಯರು ಇಂದು ಎಲ್ಲಾ ಕ್ಷೇತ್ರಗಳಲ್ಲೂ ಪುರುಷರಿಗೆ ಸರಿಸಮನಾಗಿ ಕೆಲಸ ಮಾಡುತ್ತಿದ್ದಾರೆ. ಹೆಣ್ಣು ಮಕ್ಕಳಿಗಾಗಿ ಪಿಂಕ್ ಕ್ಲಿನಿಕ್, ಸ್ನೇಹ ಕ್ಲಿನಿಕ್, ಆರೋಗ್ಯ ಮತ್ತು ಕ್ಷೇಮ ಕೇಂದ್ರ ಹಾಗೂ ಸಂಪೂರ್ಣ ತಾಯಿ ಮತ್ತು ಮಕ್ಕಳ ಆರೋಗ್ಯಕ್ಕೆ ಸಂಬಂಧಪಟ್ಟಂತೆ ಇಲಾಖೆಯು ಹಲವು ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ ಎಂದರು. ಶ್ರೀ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಆರಂಭವಾದ ಸೈಕಲ್ ಜಾಥಾವು ಕೆ.ಆರ್.ಸರ್ಕಲ್, ಸಯ್ಯಾಜಿ ರಾವ್ ರಸ್ತೆ, ಸರ್ಕಾರಿ ಆಯುರ್ವೇದ ಸರ್ಕಲ್, ರೈಲ್ವೇ ಸ್ಟೇಷನ್ ಸರ್ಕಲ್, ಜೆಎಲ್‌ಬಿ ರಸ್ತೆ, ಡಿ. ದೇವರಾಜ ಅರಸು ರಸ್ತೆ ಜಂಕ್ಷನ್ ಮೂಲಕ ಜಿಲ್ಲಾಧಿಕಾರಿ ಕಚೇರಿ ಬಳಿ ಅಂತ್ಯಗೊಂಡಿತು.

ಮಾರ್ಗದುದ್ದಕ್ಕೂ ಮಹಿಳೆ ಆರೋಗ್ಯವಾಗಿದ್ದರೆ ಕುಟುಂಬ ಆರೋಗ್ಯವಾಗಿರುತ್ತದೆ. ದೇಶದ ಸ್ವಾಸ್ಥ್ಯ ಸಾಧ್ಯವಾಗಲಿದೆ ಎಂಬ ಸಂದೇಶವನ್ನು ಜಾಥಾದಲ್ಲಿ ಸಾರುವ ಮೂಲಕ ಸಾರ್ವಜನಿಕರಿಗೆ ಮಹಿಳಾ ದಿನಾಚರಣೆ ಮಹತ್ವದ ಜಾಗೃತಿ ಮೂಡಿಸಲಾಯಿತು. ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳೂ ಸೈಕಲ್ ಜಾಥಾದಲ್ಲಿ ಭಾಗವಹಿಸಿದ್ದರು.



ಭಾರತದಲ್ಲಿ ಅನಾದಿ ಕಾಲದಿಂದ ಮಹಿಳೆಯರಿಗೆ ಪೂಜ್ಯನೀಯ ಸ್ಥಾನವಿದೆ

● ಮೈಸೂರು ಮೇಯರ್ ಶಿವಕುಮಾರ್ ಅಭಿಮತ

● ಸ್ತ್ರೀ ಸಂಘಗಳ ಉತ್ಪನ್ನ ಮಾರಾಟ, ಪ್ರದರ್ಶನ ಮೇಳಕ್ಕೆ ಚಾಲನೆ

ಮೈಸೂರು, ಮಾ.8(ಎಂಟಿವೈ)-ಭಾರತದಲ್ಲಿ ಮಹಿಳೆಯರನ್ನು ಪೂಜ್ಯನೀಯ ಭಾವನೆಯಿಂದ ನೋಡಲಾಗುತ್ತದೆ. ಅವರಿಗೆ ಎಲ್ಲಾ ಕ್ಷೇತ್ರದಲ್ಲೂ ಉತ್ತಮ ಸ್ಥಾನಮಾನ ನೀಡಿದ ಮಾದರಿ ಸಂಸ್ಕೃತಿ ನಮ್ಮದಾಗಿದೆ ಎಂದು ಮೇಯರ್ ಶಿವಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ನಂಜರಾಜ ಬಹದ್ದೂರ್ ಕಲ್ಯಾಣ ಮಂಟಪದಲ್ಲಿ ವಿವಿಧ ಇಲಾಖೆ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ, ಮಹಿಳಾ ಸ್ವ-ಸಹಾಯ ಸಂಘಗಳ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮೇಳ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ದೇಶದಲ್ಲಿ ಹರಿಯುವ ನದಿಗಳಿಗೆ ಹೆಣ್ಣಿನ ಹೆಸರನ್ನು ಇಡಲಾಗಿದೆ. ಇದರ ಅರ್ಥ ಪುರಾತನ ಕಾಲದಿಂದಲೂ ಹೆಣ್ಣಿಗೆ ಉತ್ತಮ ಸ್ಥಾನ ಕಲ್ಪಿಸಲಾಗಿದೆ. ಕೇಂದ್ರ ಸರ್ಕಾರ ಹೆಣ್ಣು ಮಕ್ಕಳ ಕಲ್ಯಾಣಕ್ಕಾಗಿ 'ಬೇಟಿ ಪಡಾವೊ ಬೇಟಿ ಬಚಾವೋ' ಯೋಜನೆ ಮೂಲಕ ಹಲವಾರು ಕಾರ್ಯಕ್ರಮ ರೂಪಿಸಿದೆ. ಗ್ರಾಮೀಣ ಪ್ರದೇಶಗಳಲ್ಲಿರುವ ಮಹಿಳೆಯರು ಕೇವಲ ತಮ್ಮ ಕುಟುಂಬಕ್ಕೆ ಸೀಮಿತವಾಗಿರದೆ ಸಮಾಜದ ಮುಖ್ಯವಾಹಿನಿಗೆ ಬಂದು ತಮ್ಮ ಕೌಶಲ್ಯ ಬೆಳೆಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ವರ್ಧಿನಿ ಗುಂಪು ಉದ್ದಿಮೆ, ಪರಂಜ್ಯೋತಿ ಮಹಿಳಾ ಸ್ವಸಹಾಯ ಸಂಘ, ಐಸಿರಿ ಸ್ತ್ರೀ ಶಕ್ತಿ ಸಂಘ ಹಾಗೂ ಭುವನೇಶ್ವರಿ ಮಹಿಳಾ ಸ್ವ-ಸಹಾಯ ಸಂಘ ಸೇರಿದಂತೆ ಇನ್ನಿತರ ಸ್ಥಳೀಯ ಸ್ವಸಹಾಯ ಗುಂಪುಗಳ ಸದಸ್ಯರು ತಾವು ತಯಾರಿಸಿದ ಉತ್ಪನ್ನಗಳನ್ನು ಮಾರಾಟಕ್ಕಿಟ್ಟಿದ್ದರು. ಕಾರ್ಯಕ್ರಮದಲ್ಲಿ ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ನಾರಾಯಣ ಮೂರ್ತಿ, ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆಯ ಸಹಾಯಕ ನಿರ್ದೇಶಕ ಸಿ.ಎಸ್.ಸುದರ್ಶನ್, ನೋಟರಿ ಅಧ್ಯಕ್ಷ ನಂಜುಂಡಸ್ವಾಮಿ, ಪಿರಿಯಾಪಟ್ಟಣದ ಸಮುದಾಯ ಸಮನ್ವಯ ಸಮಿತಿಯ ಅಧಿಕಾರಿ ಶರ್ಮಿಳಾ, ಕೆ.ಆರ್. ನಗರದ ಸಮುದಾಯ ಸಮನ್ವಯ ಸಮಿತಿಯ ಅಧಿಕಾರಿ ಶಂಕರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮಹಾಜನ ಕಾಲೇಜಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ



ಮೈಸೂರು, ಮಾ.8-ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಹಿಳಾ ಸಬಲೀಕರಣ ವೇದಿಕೆ,ಸ್ಪರ್ಶ ಹಾಗೂ ಐಕ್ಯೂಎಸಿ ಸಹಯೋಗದೊಂದಿಗೆ ಅಂತರರಾಷ್ಟ್ರೀಯ ಮಹಿಳಾ ದಿನ ಆಚರಿಸಲಾಯಿತು.

'ಡಿ' ಗ್ರೂಪ್ ಮಹಿಳಾ ಸಿಬ್ಬಂದಿಗಳಾದ ಶ್ರೀಮತಿ ಪಲ್ಲಮ್ಮ ಹಾಗೂ ಶ್ರೀಮತಿ ವಲ್ಲಿ ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಈ ವೇಳೆ ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ ಮಾತನಾಡಿ, ಕಾಲೇಜನ್ನು ಪ್ರತಿನಿತ್ಯ ಸ್ವಚ್ಛಗೊಳಿಸಿ, ಶುಚಿತ್ವವನ್ನು ಕಾಪಾಡಿಕೊಂಡು ಬಂದಿರುವ ಶ್ರೀಮತಿ ಪಲ್ಲಮ್ಮ ಮತ್ತು ಶ್ರೀಮತಿ ವಲ್ಲಿ ಅವರ ನಿರಂತರ ಸೇವೆ ಪ್ರಶಂಸನೀಯ ಎಂದು ಶ್ಲಾಘಿಸಿದರು. ಈ ವರ್ಷದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ವಿಷಯವಾದ ಲಿಂಗ ಸಮಾನತೆಗಾಗಿ 'ಆವಿಷ್ಕಾರ ಮತ್ತು ತಂತ್ರಜ್ಞಾನ'ದ ಬಗ್ಗೆ ಮಾತನಾಡಿ, ಪ್ರಸ್ತುತದಲ್ಲಿ ಮಹಿಳೆಯರ ಆರೋಗ್ಯ ಮತ್ತು ಅಭಿವೃದ್ಧಿಯನ್ನು ಸಾಧಿಸಲು ಅಗತ್ಯವಿರುವ ತಂತ್ರಜ್ಞಾನಗಳನ್ನು ಆವಿಷ್ಕರಿಸಿ, ಲಿಂಗ ಸಮಾನತೆಯನ್ನು ಕಾಪಾಡುವ ನಿಟ್ಟಿನಲ್ಲಿ ಮಹಿಳಾ ಸಬಲೀಕರಣ ಕಾರ್ಯ ಆಗಬೇಕಿದೆ ಎಂದರು.

ಲಿಂಗ ತಾರತಮ್ಯ ನಿರ್ಮೂಲನೆ ಆಗದೆ ಸ್ತ್ರೀ ಸ್ವತಂತ್ರ ಸಾಧ್ಯವಿಲ್ಲ

ಸಿಎಫ್‌ಟಿಆರ್‌ಐ ನಿವೃತ್ತ ಮುಖ್ಯ ವಿಜ್ಞಾನಿ ಡಾ. ರೇಣು ಅಗರ್‌ವಾಲ್ ಪ್ರತಿಪಾದನೆ




ಮೈಸೂರು, ಮಾ.8(ಎಂಕೆ)- ಲಿಂಗತಾರತಮ್ಯ ಕಡಿಮೆಯಾಗಿದೆಯೇ ಹೊರತು ನಿರ್ಮೂಲನೆಯಾಗಿಲ್ಲ. ಈ ಸಮಸ್ಯೆ ನಿವಾರಣೆಯಾಗದೆ ಸ್ತ್ರೀ ಸ್ವತಂತ್ರವಾಗಲು ಸಾಧ್ಯವಿಲ್ಲ ಎಂದು ಸಿಎಸ್‌ಐಆರ್-ಸಿಎಫ್‌ಟಿಆರ್‌ಐನ ನಿವೃತ್ತ ಮುಖ್ಯ ವಿಜ್ಞಾನಿ ಡಾ.ರೇಣು ಅಗರ್‌ವಾಲ್ ಹೇಳಿದರು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ 'ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ'ಯಲ್ಲಿ ಮಾತನಾಡಿದ ಅವರು, ಕಳೆದೆರಡು ದಶಕದಿಂದ ಮಹಿಳೆಯರು ಸಮಾನತೆಗಾಗಿ ತೀವ್ರ ಹೋರಾಟ ನಡೆಸುತ್ತಿದ್ದಾರೆ. ಸಮಾಜದ ವಿವಿಧ ಸ್ತರಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಲಿಂಗ ತಾರತಮ್ಯವು ಕಡಿಮೆಯಾಗಿದೆಯೇ ಹೊರತು ನಿರ್ಮೂಲನೆಯಾಗಿಲ್ಲ. ಈ ಸಮಸ್ಯೆ ನಿವಾರಣೆಯಾಗದೆ ಸ್ತ್ರೀ ಸ್ವತಂತ್ರವಾಗಲು ಸಾಧ್ಯವಿಲ್ಲ ಎಂದು ವಿಷಾದಿಸಿದರು.

ಸಮಾಜದ ಎಲ್ಲಾ ಕ್ಷೇತ್ರದಲ್ಲಿ ಮಹಿಳೆ ಮುಂಚೂಣಿಗೆ ಬಂದರೂ, ಆಕೆಯ ಮೇಲೆ ನಡೆಯುವ ಶೋಷಣೆಗಳಿಂದಾಗಿ ಅರ್ಹ ಸ್ಥಾನಮಾನ ಪಡೆಯುವಲ್ಲಿ ವಿಫಲವಾಗುತ್ತಿದ್ದಾಳೆ. ಮಹಿಳೆಯು ತನ್ನ ಸ್ವ-ಸಾಮರ್ಥ್ಯದ ಮೂಲಕ ಆಸಕ್ತ ಕ್ಷೇತ್ರದಲ್ಲಿ ಬೆಳೆಯಲು ಮನೆಯಲ್ಲಿರುವ ಪುರುಷರು ಸಹಕರಿಸಬೇಕು. ನಮ್ಮ ಆಲೋಚನಾ ವಿಧಾನವನ್ನು ಬದಲಿಸಿ ಆಕೆಯ ಬೆಳವಣಿಗೆಯನ್ನು ಪ್ರೋತ್ಸಾಹಿಸಬೇಕು ಎಂದು ತಿಳಿಸಿದರು. ಸ್ತ್ರೀಯರೂ ಧನಾತ್ಮಕ ವಿಚಾರಗಳನ್ನು ಮೈಗೂಡಿಸಿಕೊಂಡು ಬೆಳೆಯಬೇಕು. ಸವಾಲುಗಳನ್ನು ಮೆಟ್ಟಿ ನಿಂತು ಸಾಧಕರಾಗಬೇಕು. ಮಹಿಳೆಯು ಸಮಾಜದಲ್ಲಿ ಮುಂದೆ ಬಂದಷ್ಟೂ, ಶೋಷಣೆಗಳು ಕಡಿಮೆಯಾಗುತ್ತದೆ. ನಾವು ಸ್ತ್ರೀ ವಾದಿಗಳಲ್ಲ ಘನತೆ ಹಾಗೂ ಸಮಾನತೆಗಾಗಿ ಹೋರಾಡುವವರು ಎಂದರು. ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಮೈಸೂರು ವಿಭಾಗದ ಅಧ್ಯಕ್ಷ ಬಿ.ಎಸ್.ಪ್ರಭಾಕರ, ಕಾರ್ಯದರ್ಶಿ ಹೆಚ್.ಎಸ್.ಸುರೇಶ್ ಬಾಬು, ಪದಾಧಿಕಾರಿಗಳಾದ ಕವಿತಾ, ಕೆ.ಆರ್.ವಿದ್ಯಾಶ್ರೀ, ಹೆಚ್.ಎಂ.ಸುಜಾತಾ ಮತ್ತಿತರರಿದ್ದರು.



ಭೂ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆಯ ನೂತನ ಆಯುಕ್ತರಾದ ಸಿ.ಎನ್. ಶ್ರೀಧರ್ ಅವರನ್ನು ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ನಿಗಮದ ಮಾಜಿ ಅಧ್ಯಕ್ಷರಾದ ಕೆ. ವಿವೇಕಾನಂದ ಬುಧವಾರ ಅಭಿನಂದಿಸಿದರು. ಚಿತ್ರದಲ್ಲಿ ಜೆಡಿಎಸ್ ಮುಖಂಡ ಕುಮಾರಸ್ವಾಮಿ ಇತರರಿದ್ದಾರೆ.



ರೋಟರಿ ಮೈಸೂರು ರಾಯಲ್ ಹಾಗೂ ರಾಯಲ್ ಪ್ರೇರಣ ಸಮುದಾಯದಿಂದ ನಡೆದ ಅಂತಾರಾಷ್ಟ್ರಿಯ ಮಹಿಳಾ ದಿನಾಚರಣೆಯ ಅಂಗವಾಗಿ ಬುಕ್ ಕ್ಲಬ್, ಮೈಸೂರು ಸಾಹಿತ್ಯ ಸಂಭ್ರಮ ಸ್ಥಾಪಕಿ ಶುಭ ಸಂಜಯ ಅರಸ್ ಅವರನ್ನು ಸನ್ಮಾನಿಸಲಾಯಿತು. ರೋಟರಿಯ ಆರ್.ಕೃಷ್ಣ, ರಾಮಾರಾಧ್ಯ, ರಾಜಶೇಖರ ಕದಂಬ,ಹರೀಶ್, ಗಣೇಶ್ ಲಾಡ್,ಹನುಮಂತರಾವ್ ಮುಂತಾದವರು ಉಪಸ್ಥಿತರಿದ್ದರು.

ರೈಲ್ವೆ ಪೆನ್ಷನರ್ಸ್ ವೆಲ್ಫೇರ್ ಅಸೋಸಿಯೇಷನ್ ಸಭೆ

ಮೈಸೂರು, ಮಾ. 8- ರೈಲ್ವೆ ಪೆನ್ಷನರ್ಸ್ ವೆಲ್ಫೇರ್ ಅಸೋಸಿಯೇಷನ್ ವತಿಯಿಂದ ಮಾ. 11ರಂದು ಬೆಳಗ್ಗೆ 10.30ಕ್ಕೆ ನಗರದ ಶೇಷಾದ್ರಿ ಐಯ್ಯರ್ ರಸ್ತೆಯಲ್ಲಿರುವ ಸಂಘದ ಕಚೇರಿಯಲ್ಲಿ ಮಾಸಿಕ ಸಭೆಯನ್ನು ಸ್ವಾಮಿನಾಥನ್ ಅವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ವಿಶ್ವದಲ್ಲೇ ಭಾರತದಲ್ಲಿ ಮಹಿಳೆಯರಿಗೆ ಅತ್ಯಂತ ಹೆಚ್ಚಿನ ಗೌರವ-ಸ್ಥಾನಮಾನ

ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡ ಅಭಿಮತ



ಮೈಸೂರು, ಮಾ. 8- ಇಂದು ಮಹಿಳೆ ಎಲ್ಲಾ ಕ್ಷೇತ್ರಗಳಲ್ಲೂ ತನ್ನನ್ನು ತಾನು ತೊಡಗಿಸಿಕೊಂಡು, ತನ್ನಲ್ಲಿರುವ ಪ್ರತಿಭೆಯನ್ನು ಪ್ರದರ್ಶಿಸಿ, ವಿಶ್ವಮಟ್ಟದಲ್ಲಿ ಗೌರವಕ್ಕೆ ಪಾತ್ರವಾಗುತ್ತಿದ್ದಾಳೆ ಎಂದು ಕಾಂಗ್ರೆಸ್ ಮುಖಂಡ ಹರೀಶ್‌ಗೌಡ ತಿಳಿಸಿದರು. ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಚಾಮುಂಡೇಶ್ವರಿ ಮೆಮೋರಿಯಲ್ ಹಾಸ್ಪಿಟಲ್‌ನ ಮಹಿಳಾ ಸಿಬ್ಬಂದಿಗೆ ಮೈಸೂರು ಗೆಳೆಯರ ಬಳಗದ ವತಿಯಿಂದ ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಸನ್ಮಾನಿಸಿ ಮಾತನಾಡಿದ ಅವರು, ಇಡೀ ಪ್ರಪಂಚದಲ್ಲಿ ಮಹಿಳೆಯರಿಗೆ ಹೆಚ್ಚಿನ ಗೌರವ ಸ್ಥಾನ ನೀಡಿರುವುದು ನಮ್ಮ ಭಾರತ ಮಾತ್ರ ಮಹಿಳೆಯರು ಈ ದೇಶದ ಆಸ್ತಿ. ಮಹಿಳೆಯರು ಹಲವಾರು ಕ್ಷೇತ್ರಗಳಲ್ಲಿ ಎದುರಿಸುತ್ತಿರುವ ಸಮಸ್ಯೆಗಳು ಕೇವಲ ಮಹಿಳೆಯರಿಗೆ ಮಾತ್ರ ಅನ್ವಯಿಸದೆ, ಅದು ಇಡೀ ಸಮಾಜದ ಸಮಸ್ಯೆ ಎಂದು ಹೇಳಿದರು. ಡಾ.ಲೋಕೇಶ್, ರವಿ (ಡೆಲ್ಲಿ ರವಿ), ಗುರುರಾಜ್, ಪ್ರಶಾಂತ್, ಆನಂದ್, ನಂಜುಂಡಿ, ಪ್ರಮೋದ್, ನವೀನ್, ರವಿಚಂದ್ರ, ಸಂತೋಷ್, ಸಂಗೀತ, ಕಾಂತಿಲಾಲ್ ಜೈನ್ ಹಾಗೂ ಸಿಬ್ಬಂದಿ ಈ ವೇಳೆ ಹಾಜರಿದ್ದರು.



ಮೈಸೂರಿನ ಅನಂತಗೀತ ವಿದ್ಯಾಲಯದಲ್ಲಿ ವಿಶ್ವ ಮಹಿಳಾ ದಿನ ಆಚರಿಸಲಾಯಿತು. ಸಂಸ್ಥೆಯ ಅಧ್ಯಕ್ಷ ವೇಣುಗೋಪಾಲ್ ಕಲ್ಲೂರು, ಪ್ರಾಂಶುಪಾಲರಾದ ಶ್ರೀಕಾಂತ್ ಅಮರನಾಥ್, ಉಪ ಪ್ರಾಂಶುಪಾಲರಾದ ಹರದೂರು ಲೋಕೇಶ್, ವೇಣುಗೋಪಾಲ್ ಮತ್ತಿತರರು ಹಾಜರಿದ್ದರು.

ಕಾನೂನು-ಸುವ್ಯವಸ್ಥೆ ಹೊಣೆ ಹೊತ್ತ ಸಾಹಸಿ ಮಹಿಳೆಯರ ಸಂಭ್ರಮಾಚರಣೆ

ಪರಸ್ಪರ ಶುಭಾಶಯ ವಿನಿಮಯ, ನಾನಾ ಮನರಂಜನೆಯಲ್ಲಿ ಪಾಲ್ಗೊಳ್ಳುವ ಸಂತಸದ ಸಮಯಾವಕಾಶ



ಮೈಸೂರು, ಮಾ.8(ಎಂಕೆ)- ಖಾಕಿ ವಸ್ತ್ರತೊಟ್ಟು ಗಸ್ತು ತಿರುಗುತ್ತಾ ರಕ್ಷಣೆ ನೀಡುವ ಮಹಿಳಾ ಪೊಲೀಸ್ ಅಧಿಕಾರಿ, ಸಿಬ್ಬಂದಿ ಹಸಿರು ಸೀರೆಯಲ್ಲಿ ಸಿಂಗಾರಗೊಂಡು ಕಂಗೊಳಿಸಿದರಲ್ಲದೆ ಕೇಕ್ ಕತ್ತರಿಸಿ, ಸಡಗರ-ಸಂಭ್ರಮದಿಂದ 'ಅಂತರರಾಷ್ಟ್ರೀಯ ಮಹಿಳಾ ದಿನ' ಆಚರಿಸಿದರು.

ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮೈಸೂರು ಜಿಲ್ಲಾ ಪೊಲೀಸ್ ವತಿಯಿಂದ ಆಯೋಜಿಸಿದ್ದ 'ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ' ಕಾರ್ಯಕ್ರಮವು ಪರಸ್ಪರ ಶುಭಾಶಯಗಳ ವಿನಿಮಯ, ಮನರಂಜನೆ ಹಾಗೂ ಮಹಿಳಾ ಸಾಧಕರ ವಿಚಾರಗಳನ್ನು ಅರಿಯುವ ವೇದಿಕೆ ನಿರ್ಮಾಣವಾಗಿತ್ತು. ಕಾರ್ಯಕ್ರಮ ಉದ್ಘಾಟಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್, ಮಹಿಳಾ ಪೊಲೀಸ್ ಅಧಿಕಾರಿ, ಸಿಬ್ಬಂದಿಗಳಿಗೆ ಗುಲಾಬಿ ನೀಡಿ, ಮಹಿಳಾ ದಿನಾಚರಣೆಯ ಶುಭಾಶಯ ತಿಳಿಸಿದರಲ್ಲದೆ ಕೇಕ್ ಕತ್ತರಿಸಿ, ಸಿಹಿ ಹಂಚಿದರು. ಇದಕ್ಕೂ ಮುನ್ನ ಮಾತನಾಡಿದ ಅವರು, ಎಂತಹ ಕಠಿಣ ಪರಿಸ್ಥಿತಿ ಎದುರಾದರೂ ಕೆಲಸ ನಿಷ್ಠೆ ಹಾಗೂ ಎದುರಿಸುವ ಸಾಮರ್ಥ್ಯವಿರಬೇಕು ಎಂದು ಹೇಳಿದರು. ನಮ್ಮಿಂದ ಸಾಧ್ಯವೇ ಇಲ್ಲ ಎಂದು ಕೂರಬಾರದು. ಪ್ರತಿಫಲ ದೊರೆಯುವವರೆಗೂ ಪ್ರಯತ್ನ ನಿಲ್ಲಿಸಬಾರದು ಎನ್ನುತ್ತಲೇ ಬೆಳಗಾವಿಯಲ್ಲಿ ನಡೆದ ಘಟನೆಯೊಂದನ್ನು ಸ್ಮರಿಸುತ್ತಾ ಸತತ 48 ಗಂಟೆಗಳ ಕಾಲ ಕರ್ತವ್ಯ ನಿರ್ವಹಿಸಿದ್ದನ್ನು ತಿಳಿಸಿದರು. ಹಾಗೆಯೇ ಪೊಲೀಸರಿಗೆ ಆರೋಗ್ಯ ಬಹಳ ಮುಖ್ಯವಾಗಿದ್ದು, ಬೆಳಗ್ಗೆ ಅಥವಾ ಸಂಜೆ ಕನಿಷ್ಠ 30 ನಿಮಿಷವಾದರೂ ವಾಕಿಂಗ್ ಅಥವಾ ಇನ್ನಿತರೆ ದೈಹಿಕ ವ್ಯಾಯಾಮಗಳನ್ನು ಮಾಡಬೇಕು. ಇದರಿಂದ ದೈಹಿಕ ಹಾಗೂ ಮಾನಸಿಕವಾಗಿ ಸದೃಢರಾಗಲು ಅನುಕೂಲವಾಗುತ್ತದೆ ಎಂದು ಸಲಹೆ ನೀಡಿದರು.

ನಿಮ್ಮನ್ನು ನೀವು ಹಾಗೂ ನೀವು ನಿರ್ವಹಿಸುವ ಕರ್ತವ್ಯವನ್ನು ಪ್ರೀತಿಸಬೇಕು. ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುವ ಅವಕಾಶ ಎಲ್ಲರಿಗೂ ದೊರೆಯುವುದಿಲ್ಲ. ಪೊಲೀಸ್ ಇಲಾಖೆಗೆ ಕೆಟ್ಟ ಹೆಸರು ಬರದಂತೆ ಕಾರ್ಯ ನಿರ್ವಹಿಸಿ. ಕೆಲಸದಲ್ಲೇ ತೃಪ್ತಿ ಕಾಣುವಂತೆ ಕಿವಿಮಾತು ಹೇಳಿದರು.

ಕ್ಯಾನ್ಸರ್ ಬಗ್ಗೆ ಎಚ್ಚರವಿರಲಿ: ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕ್ಲಿಯರ್ ಮೆಡಿ ರೇಡಿಯಂಟ್ ಆಸ್ಪತ್ರೆಯ ಸ್ತ್ರೀರೋಗ ತಜ್ಞೆ ಡಾ. ಅನಿತಾ ಶೇಷಾದ್ರಿ ಮಾತನಾಡಿ, ಮಹಿಳೆಯರು ಗರ್ಭಕಂಠದ ಕ್ಯಾನ್ಸರ್ ಬಗ್ಗೆ ಎಚ್ಚರ ವಹಿಸುವುದು ಮುಖ್ಯವಾಗಿದೆ. ಇತ್ತೀಚಿನ ದಿನಗಳಲ್ಲಿ ಗರ್ಭಕಂಠದ ಕ್ಯಾನ್ಸರ್‌ಗೆ ತುತ್ತಾಗುವವರ ಸಂಖ್ಯೆ ಹೆಚ್ಚಾಗುತ್ತಿದ್ದು, ಆರೋಗ್ಯದ ಕಡೆಗೆ ಗಮನಹರಿಸುವುದು ಮುಖ್ಯವಾಗಿದೆ ಎಂದು ತಿಳಿಸಿಕೊಟ್ಟರು. ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕಿ ಬಿ.ಎನ್.ನಂದಿನಿ, ಆಡಳಿತಾಧಿಕಾರಿ ಲಕ್ಷ್ಮಿ ಮತ್ತಿತರರಿದ್ದರು.

ಆರೋಗ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಮಹಿಳೆಯರಿಗೆ ಅಭಿನಂದನೆ

ಮೈಸೂರು, ಮಾ. 8-ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ನಗರದ ಮಣಿಪಾಲ್ ಆಸ್ಪತ್ರೆಯು ಪ್ರಮುಖ ಆರೋಗ್ಯ ಸಮಸ್ಯೆಗಳನ್ನು ಎದುರಿಸುವ ನಿಟ್ಟಿನಲ್ಲಿ ಗಣನೀಯ ಪಾತ್ರ ವಹಿಸಿರುವವರನ್ನು ಗುರುತಿಸಿ ಅಭಿನಂದಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಇದು ಇತರ ಮಹಿಳೆಯರು ಸಹಾ ಆರೋಗ್ಯ ಸಮಸ್ಯೆಯನ್ನು ಧೈರ್ಯವಾಗಿ ಎದುರಿಸುವಂತೆ ಮಾಡುವ ಉದ್ದೇಶವಾಗಿದೆ. ಹೀಗಾಗಿ ಆಸ್ಪತ್ರೆ ಇಮೇಲ್-faraz.m@ manipalhospitals. com ಅಥವಾ 88846 55366 ಎಂಬ ವಾಟ್ಸಪ್ ಗ್ರೂಪ್ ರಚಿಸಿದ್ದು ಅಂತಹ ಮಹಿಳೆಯರು ತಮ್ಮ ಮಾಹಿತಿ ಇದರ ಮೂಲಕ ನೀಡಬಹುದಾಗಿದೆ. ಸಮಾಜದಲ್ಲಿ ಆರೋಗ್ಯ ಸಮಸ್ಯೆಗಳನ್ನು ಎದುರಿಸುವ ನಿಟ್ಟಿನಲ್ಲಿ ಪ್ರಭಾವ ಬೀರಿದವರನ್ನು ಪ್ರೋತ್ಸಾಹಿಸುವ ಮೂಲಕ ಇತರರಿಗೆ ಮನೋಸ್ಥೈರ್ಯ ಈ ಮೂಲಕ ತುಂಬಲಾಗುವುದು. ಹೀಗಾಗಿ ಮಾ.10 ರೊಳಗೆ ಮಾಹಿತಿ ತಲುಪಿಸುವಂತೆ ಕೋರಲಾಗಿದೆ.



ಮೈಸೂರಿನ ಪೇರೆಂಟ್ಸ್ ಅಸೋಸಿಯೇಷನ್ ಆಫ್ ಡೆಫ್ ಚಿಲ್ಡ್ರನ್ ನಡೆಸುತ್ತಿರುವ ಇನ್‌ಸ್ಟಿಟ್ಯೂಟ್ ಆಫ್ ಮದರ್ ಅಂಡ್ ಡೆಫ್ ಚೈಲ್ಡ್ ಶಾಲೆಯಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನ ಆಚರಿಸಲಾಯಿತು. ಈ ವೇಳೆ ಶ್ರೀಮತಿ ಸುಮಾ ಕೃಷ್ಣಮೂರ್ತಿ, ಶ್ರವಣದೋಷ ಮಕ್ಕಳು, ತಾಯಂದಿರು ಹಾಗೂ ಶಿಕ್ಷಕಿಯರು ಪಾಲ್ಗೊಂಡಿದ್ದರು.

ಕಾಂಗ್ರೆಸ್ ಗೆಲ್ಲಿಸಿದರೆ ಮಾಧವಮಂತ್ರಿ ಅಣೆಕಟ್ಟೆ ವರ್ಷದಲ್ಲಿ ಪೂರ್ಣಗೊಳಿಸುವೆ

ತಿ.ನರಸೀಪುರ ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರ ಸಭೆಯಲ್ಲಿ ಮಾಜಿ ಸಚಿವ ಡಾ.ಹೆಚ್‌ಸಿಎಂ ಭರವಸೆ

ತಿ.ನರಸೀಪುರ, ಮಾ.8– ಸದ್ಯದಲ್ಲೇ ಬರಲಿರುವ ವಿಧಾನಸಭಾ ಚುನಾವಣೆಯಲ್ಲಿ ನರಸೀಪುರ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲ್ಲಿಸಿದಲ್ಲಿ ಮುಂದಿನ ಒಂದೇ ವರ್ಷದೊಳಗೆ ನೆನೆಗುದಿಗೆ ಬಿದ್ದಿರುವ ಮಾಧವಮಂತ್ರಿ ಅಣೆಕಟ್ಟೆಯನ್ನು ಪೂರ್ಣಗೊಳಿಸುತ್ತೇನೆ. ತಲಕಾಡು ಹೋಬಳಿಯ ಜನರು ನಮ್ಮ ಕೈಗೆ ಅಧಿಕಾರ ಕೊಡಿ, ಅಭಿವೃದ್ಧಿಯನ್ನು ನನ್ನ ಜವಾಬ್ದಾರಿಗೆ ಬಿಡಿ ಎಂದು ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮನವಿ ಮಾಡಿದ್ದಾರೆ.

ತಾಲೂಕಿನ ತಲಕಾಡು ಗ್ರಾಮದಲ್ಲಿರುವ ಗಣ್ಯರ ಅತಿಥಿ ಗೃಹದಲ್ಲಿ ಬುಧವಾರ ನಡೆದ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಖಂಡರ ಸಭೆಯಲ್ಲಿ ಹಲವರ ಅಭಿಪ್ರಾಯ ಆಲಿಸಿ, ಪಕ್ಷದ ಗ್ಯಾರಂಟಿ ಕಾರ್ಡುಗಳನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು, ನಾನು ಸೋಲದೆ ಶಾಸಕನಾಗಿದ್ದರೂ ಕ್ಷೇತ್ರದ ಅನುದಾನವನ್ನು ಹಿಂದಕ್ಕೆ ಪಡೆಯುವ ಧೈರ್ಯವನ್ನ ಸರ್ಕಾರ, ಯಾವ್ದೊಬ್ಬ ಸಚಿವ ಅಥವಾ ಅಧಿಕಾರಿಯೂ ಮಾಡುತ್ತಿರಲಿಲ್ಲ. ಅಷ್ಟೇ ಏಕೆ ಕುಮಾರಸ್ವಾಮಿ ನೇತೃತ್ವದ ಸಮ್ಮಿಶ್ರ ಸರ್ಕಾರವನ್ನು ಕೆಡವಲು ಅವಕಾಶ ನೀಡುತ್ತಿರಲಿಲ್ಲ ಎಂದರು.

ಮುಂದಿನ ಹದಿನೈದು ದಿನದೊಳಗೆ ವಿಧಾನಸಭಾ ಚುನಾವಣೆಯ ಅಧಿಸೂಚನೆ ಪ್ರಕಟಗೊಳ್ಳಲಿದೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೆ ಬರುವುದು ಖಚಿತವಾಗಿದೆ. ಬಡವರು ಮತ್ತು ಮಧ್ಯಮ ವರ್ಗದ ಜನರ ಬದುಕನ್ನು ಆರ್ಥಿಕವಾಗಿ ಸಬಲೀಕರಣಗೊಳಿಸುವ ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಣಾಳಿಕೆಯ ಗ್ಯಾರಂಟಿ ಕಾಡುಗಳನ್ನು ಪ್ರತಿಯೊಂದು ಕುಟುಂಬಕ್ಕೂ ಕಾರ್ಯಕರ್ತರು ಹಾಗೂ ಮುಖಂಡರು ನೀಡಬೇಕು.



ತಲಕಾಡು ಹೋಬಳಿ ಜನರು ರಾಜಕೀಯವಾಗಿ ಜಾಗೃತರಾಗಿ ಪಕ್ಷವನ್ನು ಬೆಂಬಲಿಸಿದ್ದಲ್ಲಿ, ಅದರ ಅಲೆ ನರಸೀಪುರ ಕ್ಷೇತ್ರದಾದ್ಯಂತ ಪಸರಿಸುವುದರಿಂದ ಈ ಬಾರಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿ ಆಯ್ಕೆ ಮಾಡಬೇಕು ಎಂದು ಡಾ.ಹೆಚ್.ಸಿ.ಮಹದೇವಪ್ಪ ಮನವಿ ಮಾಡಿದರು.

ದಲಿತ ಯುವ ಮುಖಂಡ ಆನಂದ್ ಮಾತನಾಡಿ, ಪಕ್ಷದ ಸಂಘಟನೆಗಾಗಿ ನೀವು(ಮಹದೇವಪ್ಪ) ಸಭೆ ಮಾಡ್ತಾ ಇದ್ದೀರಿ. ನಿಮ್ಮದೇ ಪಕ್ಷದಲ್ಲಿರುವ ಜಿ.ಪಂ ಮಾಜಿ ಸದಸ್ಯ ಮಂಜುನಾಥನ್ ನಾಳೆ ಬಂದು ತಲಕಾಡಿನಾದ್ಯಂತ ಅಪಪ್ರಚಾರ ಮಾಡುತ್ತಾರೆ. ಚುನಾವಣೆ ಬಳಿಕ ಅಪ್ಪ ಮಗ ಕೈಗೆ ಸಿಗಲ್ಲ, ಫೋನು ರಿಸೀವ್ ಮಾಡಲ್ಲ. ಕಾಣದಂತೆಯೇ ಮರೆಯಾಗುತ್ತಾರೆ ಎಂದು ಚಾಡಿ ಹೇಳುತ್ತಾರೆ. ಮುಂದಿನ ದಿನಗಳಲ್ಲಿ ಹಿರಿಯರ ಜೊತೆ ಯುವಕರಿಗೂ ಆದ್ಯತೆ ಕೊಟ್ಟು, ಸದಾ ಸಾಮಾಜಿಕ ಜಾಲತಾಣವನ್ನು ಚುರುಕುಗೊಳಿಸಬೇಕು ಎಂದು ಸಲಹೆ ನೀಡಿದರು.

ಹಿರಿಯ ಮುಖಂಡ ಬಸವಣ್ಣ ಮಾತನಾಡಿ, ಕಾಂಗ್ರೆಸ್‌ನಲ್ಲಿಯೇ ಇದ್ದೇನೆ. ಅಪ್ಪ ಮಗ ಇಬ್ಬರಿಗಷ್ಟೇ ನನ್ನ ವಿರೋಧ ಅನ್ನುತ್ತಿರುವ ಮಂಜುನಾಥನ್ ಅವರಿಗೆ ವಿರೋಧ ಮಾಡುವುದೇ ಆದರೆ ನೇರವಾಗಿ ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಗೊಳ್ಳಿ ಅಂತಾನೇ ಸಲಹೆ ನೀಡಿದ್ದೇನೆ. ಇದ್ದರೂ ಅವರು ಪಕ್ಷದಲ್ಲಿಯೇ ಇದ್ದುಕೊಂಡು ಅಪಪ್ರಚಾರ ಮಾಡುತ್ತಿರುವುದು ನೈತಿಕ ರಾಜಕಾರಣವಲ್ಲ ಎಂದು ಆರೋಪಿಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು ಮಾತನಾಡಿದರು. ಗ್ರಾಪಂ ಅಧ್ಯಕ್ಷ ಜಿ.ಕೆಂಪಯ್ಯ, ತಾಪಂ ಮಾಜಿ ಅಧ್ಯಕ್ಷ ಎಂ.ಮಲ್ಲಿಕಾರ್ಜುನಸ್ವಾಮಿ, ಮಾಜಿ ಉಪಾಧ್ಯಕ್ಷ ಪ್ರಸನ್ನ, ಮಾಜಿ ಸದಸ್ಯರಾದ ನರಸಿಂಹ ಮಾದನಾಯಕ, ಕುಕ್ಕೂರು ಗಣೇಶ, ಗ್ರಾಪಂ ಸದಸ್ಯರಾದ ನಾಗೇಂದ್ರ ಕುಮಾರ್, ಪಾರ್ವತಮ್ಮ, ಮಾಜಿ ಸದಸ್ಯ ಎಂ.ಕೆ.ಗಣೇಶ, ಮಾಜಿ ಅಧ್ಯಕ್ಷರಾದ ಮಲ್ಲಣ್ಣಿ ಅಕ್ಕೂರು ಗುರುಮೂರ್ತಿ, ಕಾರ್ಮಿಕ ಕಾಂಗ್ರೆಸ್ ಅಧ್ಯಕ್ಷೆ ಜೆ.ಭಾಗ್ಯರತಿ, ಮುಖಂಡರಾದ ವಿಜಯಕುಮಾರ್, ಕಾಳಿ ಹುಂಡಿ ಮಹೇಂದ್ರ, ಕುಕ್ಕೂರು ಶಂಭುಲಿಂಗ, ವಿಜಯಪುರ ಸಿದ್ದರಾಜು, ಮೇಗಡಹಳ್ಳಿ ಶಿವಮೂರ್ತಿ, ವಸಂತ ಕುಮಾರ್, ರಘೂ, ಮಣಿ, ಕವಾಲಿ, ದಿವಾಕರ, ಸಿ. ಮಂಜುನಾಥ, ಮಾದಯ್ಯ, ನಾಗಯ್ಯ, ಹೂವಯ್ಯ, ಅಬ್ದುಲ್ ಸಾಧಿಕ್ ಹಾಗೂ ಇನ್ನಿತರರು ಹಾಜರಿದ್ದರು.

ತಿರುಗಿ ನೋಡುವಷ್ಟರಲ್ಲಿ ಬೆನ್ನಿಗೆ ಚೂರಿ ಹಾಕಿದ್ದರು

ತಲಕಾಡು ಹೋಬಳಿಯಲ್ಲಿ ಪಕ್ಷದ ಸಂಘಟನೆ ಹಾಗೂ ಸರ್ಕಾರದ ಸೌಲಭ್ಯಗಳನ್ನು ತಲುಪಿಸಲಿಕ್ಕೆ ಜವಾಬ್ದಾರಿ ನೀಡಿದ್ದವರನ್ನ ಅತಿಯಾಗಿ ನಂಬಿಕೊಂಡಿದ್ದೆ. ಆದರೆ ಅವರು ಹಾಕೊಂಡಿರೋ ಬಟ್ಟೆ ಕೆಂಪಾಗಿದೆ ಎಂದು ಹಿಂದಕ್ಕೆ ತಿರುಗಿ ನೋಡುವಷ್ಟರಲ್ಲಿ ಬೆನ್ನಿಗೆ ಚೂರಿ ಹಾಕಿ ಬಿಟ್ಟಿದ್ದರು. ಪುತ್ರ ಸುನಿಲ್ ಬೋಸ್ ಕೂಡ ಕಾರ್ಯಕರ್ತರು ಹಾಗೂ ಜನರ ಕಷ್ಟ ಸುಖಗಳಿಗೆ ಸ್ಪಂದಿಸುವ ಗುಣವಿದೆ. ಜನಸೇವೆ ಮಾಡಬೇಕೆಂಬ ತುಡಿತವೂ ಇದೆ. ಪಕ್ಷದ ಹೈಕಮಾಂಡ್ ಅವಕಾಶ ಕಲ್ಪಿಸಿ ಕೊಟ್ಟರೆ ಆತನನ್ನು ತಲಕಾಡು ಭಾಗದ ಜನರು ಕೈ ಹಿಡಿಯಬೇಕು.

– ಡಾ.ಹೆಚ್.ಸಿ. ಮಹದೇವಪ್ಪ

ನಾಗರಹೊಳೆಯಲ್ಲಿ ಹೆಣ್ಣು ಚಿರತೆ ಶವ ಪತ್ತೆ

ಕಾದಾಟದಲ್ಲಿ ಗಾಯಗೊಂಡು ಸಾವನ್ನಪ್ಪಿರುವ ಶಂಕೆ




ಹುಣಸೂರು, ಮಾ.8– ನಾಗರಹೊಳೆ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದ ವೀರನಹೊಸಹಳ್ಳಿ ವಲಯದಲ್ಲಿ ಸುಮಾರು ಮೂರು ವರ್ಷದ ಹೆಣ್ಣು ಚಿರತೆ ಶವ ಪತ್ತೆಯಾಗಿದೆ. ವೀರನಹೊಸಹಳ್ಳಿ ವಲಯದ ಅಗಸನಹುಂಡಿ ಶಾಖೆಯ ಸೊಳ್ಳೆಪುರ ಬಿ.ಗಸ್ತಿನ ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿ ಮಂಗಳವಾರ ಚಿರತೆ ಶವ ಪತ್ತೆಯಾಗಿದ್ದು, ಗಸ್ತಿನಲ್ಲಿದ್ದ ಸಿಬ್ಬಂದಿಗಳ ಮಾಹಿತಿ ಮೇರೆಗೆ ಸ್ಥಳಕ್ಕೆ ನಾಗರಹೊಳೆ ಹುಲಿ ಯೋಜನೆ ಮುಖ್ಯಸ್ಥ ಹರ್ಷಕುಮಾರ್ ನರಗುಂದ, ಎಸಿಎಫ್ ದಯಾನಂದ್, ಆರ್‌ಎಫ್‌ಓ ಗಣರಾಜ್ ಪಟಗಾರ್ ಭೇಟಿ ನೀಡಿ ಪರಿಶೀಲಿಸಿದರು.

ರಾಷ್ಟ್ರೀಯ ಹುಲಿಸಂರಕ್ಷಣಾ ಪ್ರಾಧಿಕಾರದ ಸದಸ್ಯೆ ಕೃತಿಕಾ ಆಲನಹಳ್ಳಿ, ಮುಖ್ಯ ವನ್ಯಜೀವಿ ಪರಿಪಾಲಕ ಲೋಕೇಶ್‌ರ ಸಮ್ಮುಖದಲ್ಲಿ ನಾಗರಹೊಳೆ ಉದ್ಯಾನದ ಪಶುವೈದ್ಯ ಎಚ್.ರಮೇಶ್ ಮರಣೋತ್ತರ ಪರೀಕ್ಷೆ ನಡೆಸಿದ್ದು, ಆಂತರಿಕ ಕಾದಾಟದಿಂದ ಗಾಯಗೊಂಡು ಚಿರತೆ ಸಾವನ್ನಪ್ಪಿರಬಹುದೆಂದು ವೈದ್ಯರು ಅಭಿಪ್ರಾಯ ಪಟ್ಟಿದ್ದಾರೆ ಎಂದು ಡಿಸಿಎಫ್ ಹರ್ಷಕುಮಾರ್ ಚಿಕ್ಕನರಗುಂದ ತಿಳಿಸಿದರು.

ಈ ವೇಳೆ ಡಿಆರ್‌ಎಫ್‌ಓ ಸಚ್ಚಿನ್, ಗಸ್ತು ಅರಣ್ಯ ಪಾಲಕ ವೆಂಕಟೇಶ್ ಹಾಗೂ ವಲಯ ಸಿಬ್ಬಂದಿ ಇದ್ದರು. ಕಳೆಬರಹವನ್ನು ಸ್ಥಳದಲ್ಲೇ ಸುಟ್ಟು ಹಾಕಲಾಯಿತು.

ನಾಗರಹೊಳೆಯಲ್ಲಿ ಬೆಂಕಿ

10 ಎಕರೆಗೂ ಹೆಚ್ಚು ಪ್ರದೇಶ ನಾಶ



ಹುಣಸೂರು, ಮಾ.8– ನಾಗರಹೊಳೆ ಉದ್ಯಾನವನದ ಆನೆಚೌಕೂರು ವಲಯದಲ್ಲಿ ಬೆಂಕಿ ಬಿದ್ದಿದ್ದು, ಸುಮಾರು ಹತ್ತು ಎಕರೆಯಷ್ಟು ಪ್ರದೇಶದ ನೆಲಹುಲ್ಲು, ಗಿಡಗಂಟೆಗಳು ಬೆಂಕಿಗಾಹುತಿಯಾಗಿದೆ. ವಲಯದ ಮರಪಾಲದ ಬಳಿ ಮಧ್ಯಾಹ್ನದ ಸಮಯದಲ್ಲಿ ಬೆಂಕಿ ಕಾಣಿಸಿಕೊಳ್ಳುತ್ತಿದ್ದಂತೆ ಜಾಗೃತರಾದ ಆರ್.ಎಫ್.ಓ. ದಿಲೀಪ್ ಮಾರ್ಗದರ್ಶನದಲ್ಲಿ 150ಕ್ಕೂ ಹೆಚ್ಚು ಫೈರ್ ವಾರ್ಸ್ ತಂಡವು ಬೆಂಕಿಯು ಇತರೆಡೆಗೆ ಹರಡದಂತೆ ನಂದಿಸುವಲ್ಲಿ ಸಂಪೂರ್ಣ ಯಶಸ್ವಿಯಾಗಿದ್ದು, ಈ ವೇಳೆ ಸ್ಥಳದಲ್ಲಿ ಡಿಸಿಎಫ್ ಹರ್ಷಕುಮಾರ್ ಚಿಕ್ಕನರಗುಂದ, ಎಸಿಎಫ್ ಡಿ.ಎಸ್.ದಯಾನಂದ್ ಖುದ್ದು ಹಾಜರಿದ್ದರು. ರಾತ್ರಿವರೆಗೂ ಕಾರ್ಯಾಚರಣೆ ನಡೆಸಿ ಬೆಂಕಿಯನ್ನು ಹತೋಟಿಗೆ ತರಲಾಯಿತು. ಮರುದಿನ ಬೆಳಗ್ಗೆಯೂ ಮತ್ತೊಮ್ಮೆ ಪರಿಶೀಲಿಸಿ ಬೆಂಕಿ ಇಲ್ಲದ್ದನ್ನು ಖಚಿತಪಡಿಸಿಕೊಳ್ಳಲಾಯಿತು.

ಮಾಹಿತಿ ನೀಡಿ: ಕಾಡಿನಲ್ಲಿ ಬೆಂಕಿ ತಂತಾನೆ ಹತ್ತಿಕೊಳ್ಳುವುದಿಲ್ಲ, ಕಾಡಿಗೆ ಬೆಂಕಿ ಹಚ್ಚುವ, ಅತಿಕ್ರಮ ಪ್ರವೇಶ ಮಾಡುವ ಕಿಡಿಗೇಡಿಗಳ ಬಗ್ಗೆ ಸಾರ್ವಜನಿಕರು ಅರಣ್ಯ ಇಲಾಖೆಗೆ ಮಾಹಿತಿ ನೀಡುವಂತೆ (082222 252041)ಡಿಸಿಎಫ್ ಹರ್ಷಕುಮಾರ್ ಚಿಕ್ಕನರಗುಂದ ಮನವಿ ಮಾಡಿದ್ದಾರೆ.

ಬಿಜೆಪಿಗೆ ಸಾಮಾಜಿಕ ನ್ಯಾಯದ ಮೇಲೆ ನಂಬಿಕೆ ಇಲ್ಲ...

ಚುನಾವಣಾ ಪ್ರಚಾರ ಸಭೆಯಲ್ಲಿ ಮಾಜಿ ಸಂಸದ ಧ್ರುವನಾರಾಯಣ್ ವಾಗ್ದಾಳಿ

ನಂಜನಗೂಡು, ಮಾ.8– ಕಾಂಗ್ರೆಸ್ ಪಕ್ಷ ಎಲ್ಲಾ ಸಮುದಾಯಗಳಿಗೂ ಸಾಮಾಜಿಕ ನ್ಯಾಯ ಒದಗಿಸುತ್ತಿದೆ. ಆದರೆ ಬಿಜೆಪಿ ಪಕ್ಷದವರಿಗೆ ಸಾಮಾಜಿಕ ನ್ಯಾಯದ ಪರಿಕಲ್ಪನೆಯಲ್ಲಿ ನಂಬಿಕೆ ಇಲ್ಲದ ಕಾರಣ ಅಲ್ಪಸಂಖ್ಯಾತರಿಗೆ ಒಂದು ಟಿಕೇಟ್ ನೀಡಿಲ್ಲ, ಮಂತ್ರಿಯನ್ನೂ ಮಾಡಿಲ್ಲ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಆರೋಪಿಸಿದರು.



ತಾಲೂಕಿನ ದೊಡ್ಡಕವಲಂದೆ, ಗಟ್ಟವಾಡಿ, ಗಟ್ಟವಾಡಿಪುರ, ನೇರಳೆ, ಹಂಪಾಪುರ, ಹಳೇಪುರ, ಹರಗನಪುರ ಗ್ರಾಮಗಳಲ್ಲಿ ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಚಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕಾಂಗ್ರೆಸ್ ಸರ್ಕಾರದಲ್ಲಿ 6 ಅಲ್ಪಸಂಖ್ಯಾತ ಮಂತ್ರಿಗಳಿದ್ದರು, ಆದರೆ ಬಿಜೆಪಿ ಪಕ್ಷದಲ್ಲಿ ಒಬ್ಬ ಮುಸ್ಲಿಮರಿಗೆ, ಕ್ರಿಶ್ಚಿಯನ್ನರಿಗೆ ಟಿಕೇಟ್ ನೀಡಿಲ್ಲ, ಸಿದ್ದರಾಮಯ್ಯನವರು ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ 3600 ಕೋಟಿ ಅನುದಾನ ಮೀಸಲಿಟ್ಟಿದ್ದರು. ಬಿಜೆಪಿ ಸರ್ಕಾರ ಅದನ್ನು 1100 ಕೋಟಿಗೆ ಇಳಿಸಿದೆ. ದಲಿತರ ಅನುದಾನವನ್ನೂ ಸಹ ಕಡಿಮೆ ಮಾಡಿದ್ದಾರೆ. ಕಳೆದ 4 ವರ್ಷದಲ್ಲಿ ಅವರು ಕೊಟ್ಟ ಆಶ್ವಾಸನೆ ಈಡೇರಿಸಿಲ್ಲ. ಒಳ್ಳೆ ಆಡಳಿತ ನೀಡುವಲ್ಲಿ ವಿಫಲರಾಗಿದ್ದಾರೆ ಎಂದು ಆರೋಪಿಸಿದರು.

ಕಾಂಗ್ರೆಸ್ ಪಕ್ಷ ನುಡಿದಂತೆ ನಡೆಯುತ್ತದೆ: ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ 200 ಯುನಿಟ್ ವಿದ್ಯುತ್ ಉಚಿತ, ಗೃಹಲಕ್ಷ್ಮಿ ಯೋಜನೆಯಲ್ಲಿ 2 ಸಾವಿರ, 10 ಕೆಜಿ ಅಕ್ಕಿ ನೀಡುವುದಾಗಿ ಹೇಳಿದೆ. ಇದನ್ನು ಬಿಜೆಪಿ ಪಕ್ಷದವರು ಎಲ್ಲಿಂದ ಕೊಡುತ್ತಾರೆಂದು ಹೀಯಾಳಿಸುತ್ತಾರೆ. 13 ಬಜೆಟ್‌ಗಳನ್ನು ಮಂಡಿಸಿ ಅನುಭವವಿರುವ ಸಿದ್ದರಾಮಯ್ಯ ಅವರು ಶೇ.40 ಕಮಿಷನ್‌ಗೆ 1 ಲಕ್ಷ 20 ಸಾವಿರ ಕೋಟಿ ತಗಲುತ್ತದೆ. ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯ ಘೋಷಣೆಗಳಿಗೆ 30 ಸಾವಿರ ಲಕ್ಷ ಕೋಟಿಗಳಷ್ಟೇ ಸಾಕು ಶೇ.40ರಷ್ಟು ಕಮಿಷನ್ ತೆಗೆದುಹಾಕಿದಲ್ಲಿ ಇನ್ನೂ ಹಲವಾರು ಯೋಜನೆಗಳನ್ನು ಜಾರಿಗೊಳಿಸಬಹುದೆಂದು ಹೇಳಿಕೆ ನೀಡಿದ್ದಾರೆ. ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಲ್ಲಿ ನಾವು ನುಡಿದಂತೆ ನಡೆದುಕೊಳ್ಳುತ್ತೇವೆ ಅದನ್ನು ಕಾಂಗ್ರೆಸ್ ಸರ್ಕಾರ ಸಾಬೀತುಪಡಿಸಿದೆ ಎಂದು ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಮಾತನಾಡಿದರು. ಇದಕ್ಕೂ ಮುನ್ನ ಶ್ರೀಕಂಠೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸುವ ಮೂಲಕ ಚುನಾವಣಾ ಪ್ರಚಾರಕ್ಕೆ ಚಾಲನೆ ನೀಡಲಾಯಿತು.

ಸಮಾರಂಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕುರಹಟ್ಟಿ ಮಹೇಶ್, ಸಿ.ಎಂ. ಶಂಕರ್, ಶ್ರೀಕಂಠನಾಯಕ, ತಾಪಂ ಮಾಜಿ ಅಧ್ಯಕ್ಷ ನಾಗೇಶ್‌ರಾಜ್, ಎಪಿಎಂಸಿ ಮಾಜಿ ಅಧ್ಯಕ್ಷ ಮುದ್ದುಮಾದಶೆಟ್ಟಿ, ಮುಖಂಡರಾದ ಕರಳಪುರ ನಾಗರಾಜು, ಕನಕನಗರ ಮಹದೇವು, ಎಂ.ರಾಜು, ಕುಳ್ಳಯ್ಯ, ನಾಗರಾಜಯ್ಯ, ಪರಶಿವಮೂರ್ತಿ, ನಾಗೇಶ್, ಶಿವಪ್ಪದೇವರು, ಪ್ರದೀಪ್, ಜಿಪಂ ಮಾಜಿ ಸದಸ್ಯರಾದ ಲತಾ ಸಿದ್ದಶೆಟ್ಟಿ, ಎನ್. ಮಹದೇವು, ಕಾಂಗ್ರೆಸ್ ಉಸ್ತುವಾರಿ ರವಿಕುಮಾರ್ ಸೇರಿದಂತೆ ಹಲವಾರು ಪ್ರಮುಖರು ಇದ್ದರು.

ಹುಣಸೂರು ಸರ್ವ ಜನ ರಕ್ಷಣಾ ಸಂಘದ ನೂತನ ಪದಾಧಿಕಾರಿಗಳು

ಹುಣಸೂರು, ಮಾ.8(ಕೆಕೆ)– ನಗರದ ಬಜಾರ್ ರಸ್ತೆಯಲ್ಲಿರುವ ಸರ್ವ ಜನ ರಕ್ಷಣಾ ಸಂಘದ ಕಚೇರಿಯಲ್ಲಿ ಅಬ್ಬಾಸ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು ಎಂದು ಸಂಘದ ಪ್ರಕಟಣೆ ತಿಳಿಸಿದೆ.

ಸಂಘದ ಗೌರವ ಅಧ್ಯಕ್ಷರಾಗಿ ಹೋಂ ಚೆರ್ಚ್‌ನ ಪಾದರ್ ಕ್ರಿಸ್ತದಾಸ್, ಅಧ್ಯಕ್ಷರಾಗಿ ಹೆಚ್.ಕೆ.ಪ್ರಾಣೇಶ ಶೆಟ್ಟಿ, ಉಪಾಧ್ಯಕ್ಷರಾಗಿ ಸೈಯಾದ್ ಅಬ್ಬಾಸ್, ಕಾರ್ಯದರ್ಶಿಯಾಗಿ ಮಲ್ಲೇಶ್, ಖಜಾಂಚಿಯಾಗಿ ಕೆ.ಸಿ.ಮಹದೇವಪ್ಪ, ನಿರ್ದೇಶಕರಾಗಿ ಚಂದ್ರಶೇಖರಯ್ಯ, ಸೋಮಯ್ಯ, ಡಿ.ರಾಜು, ನೀಲಕಂಠರಾವ್, ವಿ.ನಾಗೇಂದ್ರ, ನಿಲವಾಗಿಲು ಸ್ವಾಮಿ, ಕಟ್ಟೆ ಮಳಲವಾಡಿಯ ಮಹಿಳಾ ಅಧ್ಯಕ್ಷೆ ರುಕ್ಸಾನಾ ಭಾನು ಹಾಗೂ 30 ಮಂದಿ ಸದಸ್ಯರನ್ನು ಅಯ್ಕೆ ಮಾದಲಾಗಿದೆ.

ಆಯಾ ಗ್ರಾಮಗಳಲ್ಲೇ ಪಡಿತರ ಪಡೆಯಲು ಪಡಿತರ ಉಪ ಕೇಂದ್ರಗಳು ಆರಂಭ



ಪಿರಿಯಾಪಟ್ಟಣ, ಮಾ.8– ಆಹಾರ ಪಡಿತರ ಪಡೆಯಲು ಸಾರ್ವಜನಿಕರು ಅಲೆಯುವುದನ್ನು ತಪ್ಪಿಸುವ ಉದ್ದೇಶದಿಂದ ಆಯಾ ಗ್ರಾಮಗಳಲ್ಲೇ ಪಡಿತರ ಉಪ ಕೇಂದ್ರಗಳನ್ನು ತೆರೆಯಲಾಗುತ್ತಿದೆ ಎಂದು ಶಾಸಕ ಕೆ. ಮಹದೇವ್ ತಿಳಿಸಿದರು.

ಪಿರಿಯಾಪಟ್ಟಣ ತಾಲೂಕಿನ ಅತ್ತಿಗೋಡು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಾದೇಶ್ವರ ಮಠದ ಗ್ರಾಮದಲ್ಲಿ ಆಹಾರ ಪಡಿತರ ಉಪ ಕೇಂದ್ರವನ್ನು ಪಡಿತದಾರರಿಗೆ ಅಕ್ಕಿ ನೀಡುವ ಮೂಲಕ ಚಾಲನೆ ನೀಡಿ ಮಾತನಾಡಿ ನಿಮ್ಮ ಗ್ರಾಮ ಅಭಿವೃದ್ಧಿಗೆ 1 ಕೋಟಿಗೂ ಹೆಚ್ಚು ಅನುದಾನ ನೀಡಿದ್ದೇನೆ. ತಾಲೂಕಿನ ನನ್ನ ಎಲ್ಲಾ ಜನರು ಆರೋಗ್ಯದಿಂದಿರಲು ಪ್ರತಿ ಗ್ರಾಮಗಳಿಗೂ ಶುದ್ಧ ಕುಡಿಯುವ ನೀರು ಒದಗಿಸಲು 240 ಕೋಟಿ ರೂ. ಅನುದಾನ ಮಂಜೂರು ಮಾಡಿಸಿದ್ದೇನೆ ಎಂದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಸದಸ್ಯರಾದ ರುದ್ರೇಶ್, ಹರೀಶ್, ದಿನೇಶ್, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಆಹಾರ ಶಿರಸ್ತೇದಾರ್ ಸಣ್ಣ ಸ್ವಾಮಿ, ಆಹಾರ ನಿರೀಕ್ಷಕ ಮಂಜುನಾಥ್, ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯ ಶೆಟ್ಟಿ, ತಾಪಂ ಮಾಜಿ ಸದಸ್ಯ ಮಲ್ಲಿಕಾರ್ಜುನ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮನು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಸುರೇಶ್, ಕಾರ್ಯದರ್ಶಿ ರಾಜೇಂದ್ರ, ಮುಖಂಡರಾದ ಸ್ವಾಮಿ, ವಿದ್ಯಾಶಂಕರ್, ಶಿವಣ್ಣಗೌಡ, ಈರೇಗೌಡ, ಶಿರಾಲು ಶಟ್ರು, ಹಾಜರಿದ್ದರು.

ನಂಜನಗೂಡು ತಾಲೂಕು ಹೆಡತಲೆ ಗ್ರಾಮದಲ್ಲಿ ಶ್ರೀ ಆದಿಶಕ್ತಿ ಭಂಗಿ ಮಾರಮ್ಮನ ಜಾತ್ರೆ ಪ್ರಯುಕ್ತ ಶ್ರೀ ಬಾಣಂತಿ ಬಾರಮ್ಮ ದೇವಸ್ಥಾನದ ಮುಂಭಾಗ ತಣ್ಣೀರಿನ ಸ್ನಾನ ಮಾಡಿ ಒದ್ದೆ ಬಟ್ಟೆಯಿಂದ ದೇವಸ್ಥಾನದ ಮುಂಭಾಗ ಸಾವಿರಾರು ಮಹಿಳೆಯರಿಂದ ಮಡೆ ಉತ್ಸವ ನಡೆಯಿತು. ನಂತರ ಬೆಳಿಗ್ಗೆಯಿಂದ ಉಪವಾಸವಿದ್ದು, ಮಹಿಳಾ ಭಕ್ತರು ಊರಿನ ಹೊರ ಭಾಗದಿಂದ ಬಾಯಿ ಬೀಗ ಹಾಕಿಸಿಕೊಂಡು ರಥದ ಬೀದಿಯಲ್ಲಿ ಸಾಗಿ ಭಂಗಿ ಮಾರಮ್ಮನ ದೇವಿ ಪೂಜೆ ಸಲ್ಲಿಸಿದರು.



ಅಶ್ವಥ್ ನಾರಾಯಣ್, ಸಿ.ಟಿ.ರವಿ ವಿರುದ್ಧ ನಾಳೆ ಬೆಂಗಳೂರಲ್ಲಿ ಪ್ರತಿಭಟನೆ



ತಿ.ನರಸೀಪುರ ಮಾ.8– ಮಾಜಿ ಸಿಎಂ ಸಿದ್ದರಾಮಯ್ಯ ಅವರಿಗೆ ಬಹಿರಂಗವಾಗಿ ಕೊಲೆ ಬೆದರಿಕೆ ಹಾಕಿರುವ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವಥ್ ನಾರಾಯಣ್ ಬಂಧಿಸಲು ಹಾಗೂ ಸಿದ್ದರಾಮಯ್ಯ ಅವರ ಬಗ್ಗೆ ತುಚ್ಛ ಮಾತುಗಳನ್ನು ಆಡುತ್ತಿರುವ ಶಾಸಕ ಸಿ.ಟಿ.ರವಿ ಮೇಲೆ ಕಾನೂನು ಕ್ರಮ ಜರುಗಿಸುವಂತೆ ಆಗ್ರಹಿಸಿ ಮಾ.10 ರಂದು ಬೆಳಗ್ಗೆ 10.30 ಗಂಟೆಗೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟದಿಂದ ಬೃಹತ್ ಪ್ರತಿಭಟನಾ ಧರಣಿ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಪ್ರಧಾನ ಸಂಚಾಲಕ ಬನ್ನಹಳ್ಳಿ ಸೋಮಣ್ಣ ಹೇಳಿದರು.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಬುಧವಾರ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಸಂವಿಧಾನ ಮತ್ತು ಸಾಮಾಜಿಕ ನ್ಯಾಯದ ಪರವಾಗಿ ಇರುವ ಜನ ನಾಯಕರನ್ನು ಅಪಮಾನಿಸುವ, ಹೀಯಾಳಿಸುವ ಕಾರ್ಯ ಸೂಚಿಯನ್ನು ಬಿಜೆಪಿ ಪರಿವಾರ ರೂಪಿಸಿಕೊಂಡು ಅದನ್ನು ಸಿದ್ದರಾಮಯ್ಯ ಅವರ ಮೇಲೆ ಪ್ರಾಯೋಗಿಕವಾಗಿ ನಡೆಸಲಾಗಿದೆ. ಹಾಗಾಗಿ ಸಚಿವ ಅಶ್ವಥ್ ನಾರಾಯಣ ಕೊಲೆ ಬೆದರಿಕೆ ಹಾಕಿದ್ದರೆ, ಸಿ.ಟಿ.ರವಿ ಬಹಳ ತುಚ್ಛವಾಗಿ ಮಾತನಾಡುತ್ತಿದ್ದಾರೆ. ಇಂತಹ ಧೋರಣೆಯ ವಿರುದ್ಧ ದಲಿತ, ಹಿಂದುಳಿದ, ಅಲ್ಪಸಂಖ್ಯಾತ ಮತ್ತು ಜನಪರ ಸಂಘಟನೆಗಳು ಜಾಗೃತರಾಗಿ ಮಹಾ ಒಕ್ಕೂಟದ ಮೂಲಕ ಹೋರಾಟಕ್ಕೆ ಅಣಿಯಾಗಿದ್ದೇವೆ ಎಂದರು.

ಗೌತಮ ಬುದ್ಧ, ಬಸವಣ್ಣ, ಕನಕದಾಸರು, ಅಂಬೇಡ್ಕರ್ ಹಾಗೂ ಕುವೆಂಪು ಅವರ ನೆಲದಲ್ಲಿ ದ್ವೇಷ ಬಿತ್ತುವುದನ್ನು ತೀವ್ರವಾಗಿ ಖಂಡಿಸಬೇಕಾಗಿದೆ. ಬಿಜೆಪಿ ಪರಿವಾರದ ಇಂತಹ ಕುತಂತ್ರಗಳನ್ನ ವಿರೋಧಿಸಿ, ನಾಡಿನ ದಲಿತ ಮತ್ತು ಹಿಂದುಳಿದ ವರ್ಗಗಳ ಜನರು ಸಂಘಟಿತ ಹೋರಾಟವನ್ನು ಹಮ್ಮಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಹಾಗಾಗಿ ಮಾ.10 ರಂದು ಬೆಂಗಳೂರಿನಲ್ಲಿ ನಡೆಯಲಿರುವ ಬೃಹತ್ ಪ್ರತಿಭಟನ ಧರಣಿ ಸತ್ಯಾಗ್ರಹವನ್ನು ಬೆಂಬಲಿಸಿ, ವಹಿಸಬೇಕು ಎಂದು ಬನ್ನಹಳ್ಳಿ ಸೋಮಣ್ಣ ಮನವಿ ಮಾಡಿದರು.

ತಾಲೂಕು ಕುರುಬರ ಸಂಘದ ಅಧ್ಯಕ್ಷ ಮನ್ನೇಹುಂಡಿ ಮಹೇಶ್ ಮಾತನಾಡಿ, ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಸರ್ಕಾರವಾಗಲಿ, ಕಾನೂನು ಸುವ್ಯವಸ್ಥೆಯನ್ನ ಕಾಪಾಡುವ ಹೊಣೆ ಹೊತ್ತಿರುವ ಪೊಲೀಸ್ ಇಲಾಖೆ ಸಂಪೂರ್ಣವಾಗಿ ನಿಷ್ಕ್ರಿಯವಾಗಿದೆ. ಜವಾಬ್ದಾರಿಯುತ ಸಚಿವನೋರ್ವ ಸಾರ್ವಜನಿಕವಾಗಿ ಮಾಜಿ ಸಿಎಂ, ವಿಪಕ್ಷ ನಾಯಕ ಸಿದ್ದರಾಮಯ್ಯ ಅವರನ್ನು ಹೊಡೆದು ಹಾಕಿ ಎಂದು ಕರೆ ನೀಡಿದ್ದರೂ ಮಂಡ್ಯ ಜಿಲ್ಲೆಯ ಪೊಲೀಸ್ ಅಧಿಕಾರಿಗಳು ಯಾವುದೇ ಕಾನೂನು ಕ್ರಮವನ್ನು ಜರುಗಿಸಿಲ್ಲ. ಮಂಡ್ಯ ಪೊಲೀಸ್ ಅಧಿಕಾರಿಗಳಿಗೆ ಕಾನೂನಿನ ಮೇಲೆ ನಿಜವಾದ ಗೌರವವಿದ್ದಲಿ ಕೂಡಲೇ ಅಶ್ವತ್ ನಾರಾಯಣ್ ಅವರ ವಿರುದ್ಧ ಸ್ವಯಂ ಪ್ರೇರಿತ ದೂರು ದಾಖಲಿಸಿ ತನಿಕೆಯನ್ನ ಆರಂಭಿಸಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಪುರಸಭೆ ಅಧ್ಯಕ್ಷ ಟಿ.ಎಂ. ನಂಜುಂಡಸ್ವಾಮಿ, ಮಾಜಿ ಅಧ್ಯಕ್ಷ ಎನ್.ಸೋಮಣ್ಣ, ತಾಪಂ ಮಾಜಿ ಸದಸ್ಯ ಎಂ.ರಮೇಶ್, ಸಂಘದ ಪ್ರಧಾನ ಕಾರ್ಯದರ್ಶಿ ಬಸವರಾಜು, ಮುಖಂಡರಾದ ಸಂತೃಪ್ತಿ ಕುಮಾರ್, ವಾಟಾಳು ನಾಗರಾಜು, ಬನ್ನಹಳ್ಳಿ ಬಸವರಾಜು ಹಾಗೂ ಇನ್ನಿತರರು ಹಾಜರಿದ್ದರು.

ಕ್ಷೇತ್ರದ ಅಭಿವೃದ್ಧಿಯೇ ನನ್ನ ಗುರಿ: ಹರ್ಷವರ್ಧನ್



ಮಲ್ಕುಂಡಿ, ಮಾ.8– ಕ್ಷೇತ್ರದ ಅಭಿವೃದ್ಧಿಗಾಗಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದೇನೆ. ಕ್ಷೇತ್ರದ ಅಭಿವೃದ್ಧಿಯೇ ನನ್ನ ಗುರಿಯಾಗಿದೆ ಎಂದು ಶಾಸಕ ಬಿ. ಹರ್ಷವರ್ಧನ್ ಹೇಳಿದರು.

ನಂಜನಗೂಡು ತಾಲೂಕಿನ ಲಕ್ಷ್ಮಣಪುರ ಗ್ರಾಮದಲ್ಲಿ 10 ಲಕ್ಷ ರೂ. ವೆಚ್ಚದ ಬಸವ ಭವನ ನಿರ್ಮಾಣ ಹಾಗೂ 15 ಲಕ್ಷ ರೂ. ವೆಚ್ಚದ ಶಾಲೆ ಕಾಂಪೌಂಡ್ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ನಾನು ಕಳೆದ ಚುನಾವಣೆ ಸಂದರ್ಭದಲ್ಲಿ ಗ್ರಾಮಗಳಿಗೆ ಭೇಟಿ ನೀಡಿದಾಗ ಗ್ರಾಮಸ್ಥರು ಹಲವು ಬೇಡಿಕೆಗಳನ್ನು ಮುಂದಿಟ್ಟಾಗ ಇದನ್ನು ಅರಿತು 5 ವರ್ಷಗಳಿಂದ ಪ್ರತಿ ಇಲಾಖೆಯಿಂದ ಸುಮಾರು 700 ಕೋಟಿ ರೂ. ಅನುದಾನ ತಂದು ಪ್ರತಿ ಗ್ರಾಮಗಳನ್ನು ಹಂತ–ಹಂತವಾಗಿ ಅಭಿವೃದ್ಧಿ ಪಡಿಸಿದ್ದೇನೆ. ಇದು ಕ್ಷೇತ್ರದ ಜನತೆಗೆ ತಿಳಿದಿದೆ. ಇನ್ನೂ ಹೆಚ್ಚಿನ ಅಭಿವೃದ್ಧಿ ಪಡಿಸುವ ಸಲುವಾಗಿ ಮುಂದಿನ ಚುನಾವಣೆಯಲ್ಲಿ ಮತ್ತೊಮ್ಮೆ ಅಶೀರ್ವದಿಸಿ ಎಂದು ಹೇಳಿದರು.

ಬಿಜೆಪಿ ತಾಲೂಕು ಅಧ್ಯಕ್ಷ ಪಿ ಮಹೇಶ್, ಜಿಪಂ ಮಾಜಿ ಸದಸ್ಯ ಎಸ್.ಎಂ.ಕೆಂಪಣ್ಣ, ಗ್ರಾಪಂ ಅಧ್ಯಕ್ಷ ಸ್ವಾಮಿ, ಉಪಾಧ್ಯಕ್ಷೆ ವನಜಾಕ್ಷಮ್ಮ, ಗ್ರಾಪಂ ಮಾಜಿ ಅಧ್ಯಕ್ಷ ಕುಮಾರ್, ರಾಜಪ್ಪ, ಶಿವನಂಜಪ್ಪ, ಕಸುವಿನಹಳ್ಳಿ ನವೀನ, ಇಂಜಿನಿಯರ್ ಕಾವ್ಯ ಸೇರಿದಂತೆ ಪ್ರಮುಖರು ಹಾಜರಿದ್ದರು

ಹುಣಸೂರಲ್ಲಿ ಹೃದಯಾಘಾತದಿಂದ ಪೇದೆ ಸಾವು

ಹುಣಸೂರು, ಮಾ.8– ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆಯ ಮುಖ್ಯಪೇದೆ ಅರವಿಂದ ಹೃದಯಾಘಾತದಿಂದ ನಿಧನರಾಗಿದ್ದಾರೆ.



ಮೂಲತಃ ಕೆ.ಆರ್.ನಗರ ತಾಲೂಕಿನ ಸಿದ್ದನಕೊಪ್ಪಲು ಗ್ರಾಮದ ಎಸ್.ಅರವಿಂದ(48) ಮೃತಪಟ್ಟವರು. ಪತ್ನಿ, ಇಬ್ಬರು ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸಾಲಿಗ್ರಾಮ ಠಾಣೆಯಿಂದ ಇತ್ತೀಚೆಗಷ್ಟೆ ಹುಣಸೂರು ಗ್ರಾಮಾಂತರ ಠಾಣೆಗೆ ವರ್ಗಾವಣೆಗೊಂಡಿದ್ದರು. ಮಂಗಳವಾರ ತುರ್ತು ವಾಹನ 112 ರಲ್ಲಿ ಹಗಲು ಕರ್ತವ್ಯ ನಿರ್ವಹಿಸಿ ಮನೆಗೆ ತೆರಳುತ್ತಿದ್ದ ವೇಳೆ ಎದೆ ನೋವು ಕಾಣಿಸಿಕೊಂಡಿದೆ. ತಕ್ಷಣವೇ ನಗರದ ಅಪೋಲೋ ಡೇಕೇರ್ ಸೆಂಟರ್‌ನಲ್ಲಿ ಚಿಕಿತ್ಸೆ ನೀಡಿದರೂ ಫಲಕಾರಿಯಾಗದೆ ನಿಧನರಾದರು. ಡಿವೈಎಸ್‌ಪಿ ಮಹೇಶ್, ಇನ್ಸ್‌ಪೆಕ್ಟರ್‌ಗಳಾದ ಸೋಮಶೇಖರ್, ದೇವೇಂದ್ರ ಹಾಗೂ ಸಹೋದ್ಯೋಗಿಗಳು ಭೇಟಿ ನೀಡಿ ಅಂತಿಮ ದರ್ಶನ ಪಡೆದರು. ಬುಧವಾರ ಮಧ್ಯಾಹ್ನ 12ಕ್ಕೆ ಸ್ವಗ್ರಾಮ ಕೆ.ಆರ್. ನಗರ ತಾಲೂಕಿನ ಸಿದ್ದನಕೊಪ್ಪಲಿನಲ್ಲಿ ಅಂತ್ಯಕ್ರಿಯೆ ನಡೆಸಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಮುಡಾ ಗುಂಪು ಮನೆ ಯೋಜನೆ ನೆನೆಗುದಿಗೆ

ಸರ್ಕಾರದ ಮಾರ್ಗಸೂಚಿ ಪಾಲಿಸಿಲ್ಲ ಎಂಬ ಕಾರಣಕ್ಕೆ ಇನ್ನೂ ಅನುಮೋದನೆ ಸಿಕ್ಕಿಲ್ಲ



ಮೈಸೂರು, ಮಾ.8(ಎಂಕೆ)–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ) ಬಡವರಿಗೆ ಸೂರು ಕಲ್ಪಿಸುವ 'ಗುಂಪು ಮನೆ ಯೋಜನೆ'ಯ ಸದ್ದೇ ಇಲ್ಲದಂತಾಗಿದೆ. ಮೈಸೂರಿನ ವಿಜಯನಗರ ಹಾಗೂ ದಟ್ಟಗಳ್ಳಿಯಲ್ಲಿ ಅಂದಾಜು 342 ಕೋಟಿ ರೂ. ವೆಚ್ಚದಲ್ಲಿ 2 ಬೆಡ್ ರೂಂಗಳ (ಅಪಾರ್ಟ್‌ಮೆಂಟ್ ಮಾದರಿ) 952 ಮನೆ ನಿರ್ಮಿಸುವುದಾಗಿ ರಾಜ್ಯ ಸರ್ಕಾರಕ್ಕೆ 2021ರ ಡಿ.24 ರಂದು ಪ್ರಸ್ತಾವನೆ ಸಲ್ಲಿಸಿತ್ತು. ವರ್ಷ ಕಳೆದರೂ ಅನುಮೋದನೆ ಸಿಕ್ಕಿಲ್ಲ. ಎಷ್ಟು ಮಹಡಿ ನಿರ್ಮಿಸಬೇಕು, ರಸ್ತೆಗೆ ಬಿಟ್ಟಿರುವ ಜಾಗದ ಕುರಿತು ತಕರಾರಿರುವ ಕಾರಣ ಮುಂದಿಟ್ಟುಕೊಂಡು ಅನುಮತಿ ನೀಡಿಲ್ಲ.

45,000 ಮಂದಿ ಪ್ರತಿಕ್ರಿಯೆ: 'ಗುಂಪು ಮನೆ ಯೋಜನೆ' ಕುರಿತು ಮೈಸೂರು ನಗರದೆಲ್ಲೆಡೆ ಪ್ರಚಾರ ವಾಹನಗಳ ಮೂಲಕ ನಡೆಸಿದ ಸಾರ್ವಜನಿಕರ ಪ್ರತಿಕ್ರಿಯೆ ಸಂಗ್ರಹದಲ್ಲಿ ಸುಮಾರು 45 ಸಾವಿರ ಮಂದಿ ಅರ್ಜಿ ಸಲ್ಲಿಸಿದ್ದರು. ಗುಂಪು ಮನೆ ಯೋಜನೆ ಕುರಿತು ಸಂತಸ ವ್ಯಕ್ತಪಡಿಸಿ, ಸ್ವಂತ ಸೂರು ಹೊಂದುವ ಆಸೆಯನ್ನು ಹೊಂದಿದ್ದರು. ಮನೆ ಕಟ್ಟಲು ಜಾಗ ಖರೀದಿಸಬೇಕಿಲ್ಲ. ಎಲ್ಲಾ ಮೂಲ ಸೌಲಭ್ಯಗಳನ್ನು ಒಳಗೊಂಡ ಮನೆ ನೀಡುವುದಾಗಿ ಆಶ್ವಾಸನೆ ನೀಡಿದ್ದ ಮುಡಾದ ಮಹತ್ವಾಕಾಂಕ್ಷೆ ಯೋಜನೆ ಸರ್ಕಾರದ ಮಾರ್ಗ ಸೂಚಿ ಪಾಲಿಸದ ಕಾರಣಕ್ಕೆ ನೆನೆಗುದಿಗೆ ಬಿದ್ದಿದೆ.

ಆರಂಭದಲ್ಲೇ ತಕರಾರು: ವಿಜಯನಗರ, ದಟ್ಟಗಳ್ಳಿ, ಸಾತಗಳ್ಳಿ ಹಾಗೂ ಗೋಕುಲಂನಲ್ಲಿ ಸ್ಥಳ ಗುರ್ತಿಸಿ, ಗುಂಪು ಮನೆ ನಿರ್ಮಾಣಕ್ಕೆ ಲೆಕ್ಕಾಚಾರದ ಪ್ರಕ್ರಿಯೆ ಶುರುವಾದಂತೆ ತಕರಾರುಗಳು ಕೇಳಲಾರಂಭಿಸಿದವು. ಗೋಕುಲಂನಲ್ಲಿ ಗುಂಪು ಮನೆ ನಿರ್ಮಾಣ ಮಾಡದಂತೆ ಸ್ಥಳಿಯ ನಿವಾಸಿಗಳು ಆಗ್ರಹಿಸಿದರಿಂದಾಗಿ ಅಲ್ಲಿ ಕೈ ಬಿಡಲಾಯಿತು. ಹಾಗೆಯೇ ಚರಂಡಿ ಹಾದು ಹೋಗಿದೆ ಎಂದು ಜಿಲ್ಲಾಧಿಕಾರಿಗಳು ಅನುಮತಿ ನೀಡದೆ ಸಾತಗಳ್ಳಿಯನ್ನು ಕೈ ಬಿಡಲಾಗಿದೆ. ಇನ್ನೂ ಉಳಿದ ಸ್ಥಳಗಳಲ್ಲಿ ಗುಂಪು ಮನೆ ನಿರ್ಮಾಣಕ್ಕೆ ಸರ್ಕಾರದಿಂದ ಅನುಮೋದನೆ ದೊರಕದಿದ್ದರೆ ಸಂಪೂರ್ಣವಾಗಿ ಯೋಜನೆಯನ್ನೇ ಕೈ ಬಿಡಬೇಕಾಗುತ್ತದೆ.

550 ಕೋಟಿ ರೂ. ಆದಾಯ ನಿರೀಕ್ಷೆ: ಈ ಯೋಜನೆಗೆ ಅಂದಾಜು 342 ಕೋಟಿ ರೂ. ಬೇಕಾಗಿದೆ. ಮನೆಗಳನ್ನು ನಿರ್ಮಿಸಿ ಹಂಚಿಕೆ ಮಾಡಿದ ನಂತರ ಮುಡಾಕ್ಕೆ 550 ಕೋಟಿ ರೂ. ಆದಾಯ ಬರುವ ನಿರೀಕ್ಷೆ ಇದೆ. 2 ಬಿಎಚ್‌ಕೆ(5.34 ಚದರ) ಮನೆಗೆ 29 ಲಕ್ಷ ರೂ. ಹಾಗೂ 2 ಬಿಎಚ್‌ಕೆ (5.64 ಚದರ) ಮನೆಗೆ 33 ಲಕ್ಷ ರೂ. ಡಿಮ್ಯಾಂಡ್ ಸಮೀಕ್ಷೆ ಮಾಡಲಾಗಿದೆ.

ಅನಗತ್ಯ ಖರ್ಚು: ಗುಂಪು ಮನೆ ಯೋಜನೆಯ ನೆಪದಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಅನಗತ್ಯವಾಗಿ ಲಕ್ಷಾಂತರ ರೂ. ಹಣ ಖರ್ಚು ಮಾಡಿದೆ ಎಂದು ಹಲವರು ದೂರಿದ್ದಾರೆ. ಪ್ರಚಾರ ಗಿಟ್ಟಿಸುವ ನಿಟ್ಟಿನಲ್ಲಿ ಮುಡಾ ಎದುರು ಸುಮಾರು 5 ಲಕ್ಷ ರೂ.ವೆಚ್ಚದಲ್ಲಿ ಗುಂಪು ಮನೆಗಳ ಮಾದರಿ ನಿರ್ಮಾಣ, ನಗರದೆಲ್ಲೆಡೆ ವಾಹನಗಳ ಮೂಲಕ ಪ್ರಚಾರ ಮತ್ತು ಅಭಿಪ್ರಾಯ ಸಂಗ್ರಹ, ಕರಪತ್ರಗಳ ಹಂಚಿಕೆ ಮಾಡುವ ಮೂಲಕ ಅನಗತ್ಯವಾಗಿ ಸಾರ್ವಜನಿಕರ ತೆರಿಗೆ ಹಣವನ್ನು ದುಂದುವೆಚ್ಚ ಮಾಡಿದ್ದಾರೆ. ಸಾಕಾರಗೊಳ್ಳದ ಯೋಜನೆ ಇಟ್ಟುಕೊಂಡು ಪ್ರಚಾರಕ್ಕೆ ಬಿದ್ದರು ಎಂದು ಲೇವಡಿ ಮಾಡಿದ್ದಾರೆ.

ಒಂದಕ್ಕೆ ಮಾತ್ರ ಅನುಮೋದನೆ ದೊರೆಯುವ ಸಾಧ್ಯತೆ...!


ಯೋಜನೆ ಅನುಮೋದನೆಗೆ ಕೆಲ ತಾಂತ್ರಿಕ ಕಾರಣಗಳು ಅಡ್ಡಿಯಾಗಿವೆ. ಎಷ್ಟು ಮಹಡಿ ನಿರ್ಮಿಸಬೇಕು, ಸುದೀರ್ಘ ಬಾಳಿಕೆ ಕುರಿತು ಕೆಲ ಆಕ್ಷೇಪಗಳು ವ್ಯಕ್ತವಾಗಿವೆ. ರಸ್ತೆಗೆ ಬಿಟ್ಟಿರುವ ಜಾಗದ ಕುರಿತು ತಕರಾರು ಎತ್ತಲಾಗಿದೆ. ಈ ಕಾರಣದಿಂದಲೇ ಸರ್ಕಾರದಿಂದ ಒಪ್ಪಿಗೆ ಸಿಗುವುದು ತಡವಾಗಿದೆ. ವಿಜಯನಗರ, ದಟ್ಟಗಳ್ಳಿ ಬಡಾವಣೆಯಲ್ಲಿ ಉದ್ದೇಶಿಸಿರುವ ಗುಂಪು ವಸತಿ ಯೋಜನೆಗಳಲ್ಲಿ ಒಂದಕ್ಕೆ ಮಾತ್ರ ಅನುಮತಿ ದೊರೆಯುವ ಸಾಧ್ಯತೆ ಇದ್ದು, ಅನುಮೋದನೆ ದೊರೆತ ಕೂಡಲೇ ನಿರ್ಮಾಣ ಕಾರ್ಯ ಕೈಗೊಳ್ಳಲಾಗುವುದು.



–ಯಶಸ್ವಿ ಎಸ್.ಸೋಮಶೇಖರ್, ಮುಡಾ ಅಧ್ಯಕ್ಷ

ಭ್ರಷ್ಟ ಶಾಸಕನ ಮೆರವಣಿಗೆಗೆ ಎಸ್‌ಪಿ ಲಾಠಿ ಹಿಡಿದು ಸೆಕ್ಯೂರಿಟಿ ಕೊಡ್ತಾರೆ...!

ಮಾಡಾಳ್ ವಿರೂಪಾಕ್ಷಪ್ಪ ಪ್ರಕರಣ ಸಂಬಂಧ ವಿಧಾನಪರಿಷತ್ ಸದಸ್ಯ ವಿಶ್ವನಾಥ್ ವಾಗ್ದಾಳಿ



ಬೆಂಗಳೂರು, ಮಾ.8 (ಕೆಎಂಶಿ)– ಮಾಡಾಳ್ ವಿರೂಪಾಕ್ಷಪ್ಪ ಬೆಂಗಳೂರಿನಲ್ಲಿ ಇಲ್ಲದಿದ್ದರೂ ಪೊಲೀಸರು ಇಲ್ಲೇ ಹುಡುಕುತ್ತಿದ್ದಾರೆ. ಮೋದಿ ಡಿಜಿಟಲ್ ಇಂಡಿಯಾ ಅಂತಾರೆ, ಫೋನ್ ಪೇ ಎಲ್ಲಾ ಅಂತಾರೆ, ಹಾಗಿದ್ದರೆ ಮನೆಯಲ್ಲಿ ಇಷ್ಟು ಹಣ ಎಲ್ಲಿಂದ ಬಂತು, ರಾಜ್ಯದಲ್ಲಿ ಭ್ರಷ್ಟಾಚಾರ ಹೆಚ್ಚಾಗಿದೆ ಎಂದು ಎಂಎಲ್ಸಿ ಎಚ್.ವಿಶ್ವನಾಥ್ ಸ್ವಪಕ್ಷದ ವಿರುದ್ಧವೇ ಗುಡುಗಿದರು. ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಇವರು, ಬಿಜೆಪಿಯಲ್ಲಿ ನಾಚಿಕೆಪಡುವಂತಹ ಕೆಲಸವಾಗಿದೆ. ಪಕ್ಷ ನಿಮಗೆ ತಾಯಿ ಇದ್ದ ಹಾಗೇ, ಅದಕ್ಕೆ ಮೋಸ ಮಾಡಬೇಡಿ ಎಂದರು.

ಮಾಡಾಳ್ ಪ್ರಕರಣದಲ್ಲಿ ಗೊತ್ತಾಗುತ್ತೆ ಯಾವ ರೀತಿ ಭ್ರಷ್ಟಾಚಾರ ನಡೆಯುತ್ತಿದೆ ಎಂಬುದು. ಸರ್ಕಾರದ ಹಿರಿಯ ವಕೀಲರು ಕೋರ್ಟ್‌ಗೆ ಬರಲೇ ಇಲ್ಲ. ರಾಜ್ಯದ ವಿಷಯ ಪ್ರಮುಖವೇ ಹೊರತು ಪಾರ್ಟಿ ಅಲ್ಲ. ಬಿಜೆಪಿ ಶಾಸಕರ ಮನೆಯಲ್ಲಿ ಇಷ್ಟೊಂದು ಹಣ ಎಲ್ಲಿಂದ ಬಂದಿದೆ. ಇದಕ್ಕೆ ಈಗ ಸಮಜಾಯಿಷಿ ನೀಡುತ್ತಿದ್ದಾರೆ, ಇದನ್ನು ಒಪ್ಪಿಕೊಳ್ಳಲು ಆಗಲ್ಲ. ಸರ್ಕಾರ ಕೂಡ ಒಪ್ಪಿಕೊಳ್ಳಬಾರದು ಎಂದರು ಮಾಡಾಳ್ ವಿರೂಪಾಕ್ಷಪ್ಪ ಅವರೇ ನಿಮ್ಮ ತಪ್ಪುಗಳನ್ನು ಒಪ್ಪಿಕೊಳ್ಳಿ, ಇವರೆಲ್ಲ ಮೋದಿ ವಿರೋಧಿಗಳು. ಇಷ್ಟೆಲ್ಲ ಭ್ರಷ್ಟಾಚಾರವಾಗುತ್ತಿದ್ದರೂ ಮುಖ್ಯಮಂತ್ರಿಯವರು ಏನು ಮಾಡುತ್ತಿದ್ದಾರೆ. ಭ್ರಷ್ಟಾಚಾರದ ವಿಚಾರವಾಗಿ ನನಗೂ, ಕುಮಾರಸ್ವಾಮಿಗೂ ಜಗಳವಾಗಿತ್ತು. ನಾನೂ ಐವತ್ತು ವರ್ಷದಿಂದ ರಾಜಕಾರಣ, ಆಡಳಿತದ ಭಾಗವಾಗಿದ್ದೇನೆ. ಬಿಜೆಪಿ ಶಾಸಕರ ಮನೆಯಲ್ಲಿ ಈ ಪ್ರಮಾಣದ ಹಣ ಸಿಕ್ಕಿರೋದು ಇದೇ ಮೊದಲು. ನಾನು ಅಡಿಕೆ ಬೆಳೆಗಾರ,ನಮ್ಮ ಮನೆಯಲ್ಲಿ ಹಣ ಇರುತ್ತೆ ಅಂತೆಲ್ಲಾ ವಿರೂ ಪಾಕ್ಷಪ್ಪ ಸಮಜಾಯಿಷಿ ಕೊಟ್ಟಿದ್ದಾರೆ, ಇದನ್ನು ಯಾರೂ ಒಪ್ಪುವುದಕ್ಕೆ ಸಾಧ್ಯವಿಲ್ಲ.

ಒಬ್ಬ ಅಪರಾಧಿ ಎಲ್ಲಿದ್ದಾನೆ ಅಂತ ಪೊಲೀಸರಿಗೆ ಗೊತ್ತಿರಲ್ವಾ. ಭ್ರಷ್ಟ ಶಾಸಕ ನನ್ನ ಮೆರವಣಿಗೆ ಮಾಡ್ತಾರೆ, ಅದಕ್ಕೆ ಪೊಲೀಸರು ಹೇಗೆ ಅವಕಾಶ ನೀಡಿದರು. ಎಸ್‌ಪಿ ಹಿಂದೆ ನಿಂತುಕೊಂಡು ಲಾಠಿ ಹಿಡಿದು ಸೆಕ್ಯುರಿಟಿ ಕೊಡ್ತಿದ್ದಾರೆ. ಥೂ, ಥೂ ಇದೆಲ್ಲಾ ಆಗಬಾರದು. ತಪ್ಪು ಮಾಡಿದ್ದನ್ನು ಒಪ್ಪಿ ಕೊಳ್ಳಿ, ರಾಜ್ಯದ ಮಾನ ಹರಾಜು ಹಾಕ ಬೇಡಿ. ಬಿಜೆಪಿ ನಿಮ್ಮ ತಾಯಿ ಇದ್ದ ಹಾಗೆ. ಇಷ್ಟು ಹೊತ್ತಿಗೆ ಶಾಸಕ ಸ್ಥಾನಕ್ಕೆ ರಾಜೀನಾಮೆ ಪಡೆಯಬೇಕಿತ್ತು. ಅವರು ಬೆಂಗಳೂರಿಗೆ ಬಂದು ತಮ್ಮ ನಿಗಮ ಮಂಡಳಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೋಗುತ್ತಾರೆ. ಆದರೆ ಪೊಲೀಸರಿಗೆ ಅವರು ಸಿಕ್ಕಿಲ್ಲ ಅಂದರೆ ಏನರ್ಥ.

ನಿಗಮ ಮಂಡಳಿಗಳಿಗೆ ಐಎಎಸ್, ಐಪಿಎಸ್‌ಗಳು ಎಂಡಿಗಳಾಗಿ ನೇಮಕ ಆಗುತ್ತಾರೆ. ಅದಕ್ಕೆ ಎಂಡಿ ಆಗಲು 5 ರಿಂದ 10 ಕೋಟಿ ದುಡ್ಡು ಕೊಡ್ತಾರೆ. ಇವತ್ತು ನಿಗಮ ಮಂಡಳಿಗಳಿಗೆ ಸಾವಿರಾರು ಕೋಟಿ ಹಣ ಹೋಗುತ್ತದೆ. ಅವರು ಲೆಕ್ಕಾ ಕೊಟ್ಟಿದ್ದಾರಾ, ವರದಿ ಕೊಟ್ಟಿದ್ದಾರಾ. ನಿಗಮ ಮಂಡಳಿಗಳಲ್ಲಿ ಯಾರಿಗೂ ಜವಾಬ್ದಾರಿ ಇಲ್ಲ. ಹೇಳೋರಿಲ್ಲ, ಕೇಳೋರಿಲ್ಲ. ಇವೆಲ್ಲಾ ತನಿಖೆಯಾಗಬೇಕು ಎಂದರು.

ಬೆಲೆ ಕುಸಿತ ಹಿನ್ನೆಲೆ; ರೈತರಿಂದ ಈರುಳ್ಳಿ ಖರೀದಿಸಲು ಕೇಂದ್ರ ನಿರ್ದೇಶನ

ನವದೆಹಲಿ: ಈರುಳ್ಳಿ ಬೆಲೆ ಕುಸಿತದ ಹಿನ್ನಲೆಯಲ್ಲಿ ರೈತರಿಂದಲೇ ನೇರವಾಗಿ ಈರುಳ್ಳಿ ಖರೀದಿ ಮಾಡುವಂತೆ ಕೇಂದ್ರಸರ್ಕಾರ ಏಜೆನ್ಸಿಗಳಿಗೆ ಬುಧವಾರ ಸೂಚಿಸಿದೆ



ಮಂಡಿಗಳಲ್ಲಿ ಈರುಳ್ಳಿ ಬೆಲೆ ಕುಸಿತದ ವರದಿಗಳ ನಡುವೆಯೇ ತಕ್ಷಣದ ಕ್ರಮಗಳನ್ನು ತೆಗೆದುಕೊಳ್ಳುವಂತೆ ಸರ್ಕಾರ ತನ್ನ ಖರೀದಿ ಏಜೆನ್ಸಿಗಳಿಗೆ ಸೂಚಿಸಿದ್ದು, ಏಕಕಾಲದಲ್ಲಿ ಬಳಕೆ ಕೇಂದ್ರಗಳಿಗೆ ಕಳುಹಿಸಿ ಮಾರಾಟ ಮಾಡುವಂತೆ ಕೇಂದ್ರ ಸರ್ಕಾರದಿಂದ ನಿರ್ದೇಶನ ನೀಡಲಾಗಿದೆ. ರೈತರಿಂದ ಈರುಳ್ಳಿ ಖರೀದಿಸಲು ಭಾರತೀಯ ರಾಷ್ಟ್ರೀಯ ಕೃಷಿ ಸಹಕಾರಿ ಮಾರುಕಟ್ಟೆ ಒಕ್ಕೂಟ (NAFED) ಮತ್ತು ರಾಷ್ಟ್ರೀಯ ಗ್ರಾಹಕ ಸಹಕಾರ ಒಕ್ಕೂಟಕ್ಕೆ ನಿರ್ದೇಶನ ನೀಡಿದೆ.

ಇದೇ ವಿಚಾರವಾಗಿ ಮಂಗಳವಾರ ಸಂಜೆ ಹೇಳಿಕೆ ಬಿಡುಗಡೆ ಮಾಡಿರುವ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯ, ಕಳೆದ ಹತ್ತು ದಿನಗಳಲ್ಲಿ ರೈತರಿಂದ 100 ಕೆ.ಜಿ.ಗೆ 900 ರೂ.ಗೂ ಅಧಿಕ ದರದಲ್ಲಿ ಸುಮಾರು 4,000 ಟನ್ ಈರುಳ್ಳಿಯನ್ನು ನೇರವಾಗಿ ಖರೀದಿಸಿದೆ. ಮೂಲಗಳ ಪ್ರಕಾರ ಭಾರತದ ಅತಿದೊಡ್ಡ ಈರುಳ್ಳಿ ಮಾರುಕಟ್ಟೆ ಲಸಲಗಾಂವ್ ಮಂಡಿಯಲ್ಲಿ ಈರುಳ್ಳಿ ಬೆಲೆ ಕೆಜಿಗೆ 1 ರಿಂದ 2 ರೂ. ಇದೆ ಎಂಬ ವರದಿಗಳಿವೆ. ಸಚಿವಾಲಯದ ಹೇಳಿಕೆಯ ಪ್ರಕಾರ, NAFED 40 ಖರೀದಿ ಕೇಂದ್ರಗಳನ್ನು ತೆರೆದಿದ್ದು, ಅಲ್ಲಿ ರೈತರು ತಮ್ಮ ದಾಸ್ತಾನು ಮಾರಾಟ ಮಾಡಬಹುದು ಮತ್ತು ಆನ್‌ಲೈನ್‌ನಲ್ಲಿ ಪಾವತಿಯನ್ನು ಪಡೆಯಬಹುದು.

ಉಡುಪಿ ಕೃಷ್ಣ ಮಠಕ್ಕೆ ಜಾಗ ಕೊಟ್ಟಿದ್ದು ಮುಸಲ್ಮಾನ ರಾಜರು

ಕಾಂಗ್ರೆಸ್ ಮುಖಂಡ ಮಿಥುನ್ ರೈ ಹೇಳಿಕೆ; ವಿವಾದ



ಉಡುಪಿ: ಉಡುಪಿ ಶ್ರೀಕೃಷ್ಣ ಮಠಕ್ಕೆ ಜಾಗ ಕೊಟ್ಟಿದ್ದು ಮುಸಲ್ಮಾನ ರಾಜರು ಎಂದು ಯುವ ಕಾಂಗ್ರೆಸ್ ಮುಖಂಡ ಮಿಥುನ್ ರೈ ಹೇಳಿಕೆ ಈಗ ವಿವಾದ ಸೃಷ್ಟಿಸಿದೆ.

ಕಾಂಗ್ರೆಸ್ ಮುಖಂಡ ಡಿ.ಕೆ. ಶಿವಕುಮಾರ್ ಆಪ್ತ ಮಿಥುನ್ ರೈ ಕೊಟ್ಟ ಉಡುಪಿ ಕೃಷ್ಣ ಮಠದ ಜಮೀನನ್ನು ಮುಸಲ್ಮಾನ ದೊರೆ ನೀಡಿದ್ದ ಹೇಳಿಕೆ ಭಾರೀ ವಿರೋಧಕ್ಕೆ ಕಾರಣವಾಗಿದೆ. ಮೂಡಬಿದರೆ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿರುವ ಮಿಥುನ್ ರೈ ನಮ್ಮೂರ ಮಸೀದಿ ನೋಡಬನ್ನಿ ಕಾರ್ಯಕ್ರಮದಲ್ಲಿ ಈ ಹೇಳಿಕೆ ನೀಡಿದ್ದಾರೆ. ಈ ಹೇಳಿಕೆಗೆ ಉಡುಪಿ ಶಾಸಕ ರಘುಪತಿ ಭಟ್ ತಿರುಗೇಟು ಕೊಟ್ಟಿದ್ದಾರೆ. ಅಯೋಧ್ಯೆ, ಕಾಶಿ, ಮಥುರಾ ದಲ್ಲಿ ನಿಮ್ಮ ಅಣ್ಣ ತಮ್ಮಂದಿರು ಏನು ಮಾಡಿದ್ದಾರೆ ಎಂದು ಇಡೀ ದೇಶಕ್ಕೆ ಗೊತ್ತಿದೆ. ಸತ್ಯ ತಿಳಿದುಕೊಂಡು ಮಾತನಾಡಿ ಎಂದಿದ್ದಾರೆ.

ಆ ಕಾಲದಲ್ಲಿ ಕೃಷ್ಣ ಮಠಕ್ಕೆ ಮುಸಲ್ಮಾನರು ಕೊಡುಗೆಗಳನ್ನು ನೀಡಿದ್ದಾರೆ ನಿಜ ಅದು ಎಣ್ಣೆ ಬತ್ತಿ ಮತ್ತಿತರ ಪರಿಕರಗಳನ್ನು ಕೊಟ್ಟಿದ್ದಾರೆ ಎಂಬುದು ಬಾಯಿ ಮಾತಿನಲ್ಲಿದೆ. ಹಾಜಿ ಅಬ್ದುಲ್ಲಾ ಸಾಹೇಬ್ ಎಣ್ಣೆಯ ಹರಕೆ ಜನಜನಿತವಾಗಿದೆ. ಆದರೆ ಮುಸಲ್ಮಾನ ದೊರೆಯ ಜಮೀನು ಬಳುವಳಿ ವಿಚಾರ ಚುನಾವಣೆಯವರೆಗೂ ಚರ್ಚೆ ಆಗುವ ಸಾಧ್ಯತೆ ಇದೆ.


ಮಠಕ್ಕೆ ಜಾಗ ನೀಡಿದ್ದು ಮುಸ್ಲಿಂ ರಾಜನಲ್ಲ, ದೊರೆ ರಾಮಭೋಜ



ತುಮಕೂರು: ಉಡುಪಿ ಮಠಕ್ಕೆ ಯಾವ ಮುಸ್ಲಿಂ ದೊರೆಗಳು ಜಾಗ ಕೊಟ್ಟಿಲ್ಲ, ಜಾಗ ನೀಡಿದ್ದು ರಾಮ ಭೋಜ ಎಂಬ ಅರಸ ಎಂದು ಪೇಜಾವರ ಶ್ರೀಗಳು ಸ್ಪಷ್ಟಪಡಿಸಿದ್ದಾರೆ. ಶ್ರೀ ಮಠಕ್ಕೆ ಮುಸ್ಲಿಂ ದೊರೆಗಳು ಜಾಗ ಕೊಟ್ಟಿದ್ದಾರೆ ಎಂದು ಹೇಳಿಕೆ ನೀಡಿದ್ದ ಕಾಂಗ್ರೆಸ್ ಮುಖಂಡ ಮಿಥುನ್ ರೈ ಮಾತಿಗೆ ತುಮಕೂರಿನಲ್ಲಿ ಪ್ರತಿಕ್ರಿಯಿಸಿದ ಅವರು, ರೈ ತಪ್ಪಾಗಿ ಅರ್ಥೈಸಿಕೊಂಡು ಹೇಳಿಕೆ ನೀಡಿದ್ದಾರೆ ಎಂದರು.

ಮಧ್ವಾಚಾರ್ಯರು ಬದರಿ ಯಾತ್ರೆಗೆ ಹೋಗುವ ಸಂದರ್ಭದಲ್ಲಿ ಗಂಗಾ ನದಿಯ ದಡದಲ್ಲಿ ತುರುಕರ ರಾಜ ಎದುರಾದಾಗ ಅರ್ಧ ರಾಜ್ಯ ದಾನ ಮಾಡಿದ್ದರು. ಆದರೆ ಉಡುಪಿಯ ಮಠಕ್ಕೆ ಮುಸ್ಲಿಂ ದೊರೆ ಜಾಗ ನೀಡಿದ್ದಲ್ಲ. ಈ ರೀತಿ ಆಧಾರ ರಹಿತ ಹೇಳಿಕೆಯನ್ನು ಮುಂದುವರಿಸುವುದು ಸೂಕ್ತವಲ್ಲ ಎಂದು ಶ್ರೀಗಳು ಕಿವಿಮಾತು ಹೇಳಿದ್ದಾರೆ. ಮಧ್ವಾಚಾರ್ಯರು ಬದರಿಗೆ ಹೋಗುವಾಗ ಗಂಗಾ ನದಿ ದಾಟಿ ಹೋಗುವ ಪ್ರಸಂಗ ಎದುರಾಗಿತ್ತು. ಅಲ್ಲಿನ ತುರಕರ ದೊರೆ ನದಿಯನ್ನು ದಾಟಿ ಬರದಂತೆ ಸೇನೆ ನಿಯೋಜಿಸಿದ್ದ. ಆದರೆ ಮಧ್ವಾಚಾರ್ಯರು ತಮ್ಮ ಶಿಷ್ಯರೊಂದಿಗೆ ನದಿಯನ್ನು ಈಜಿಕೊಂಡು ದಾಟುವಾಗ ಸೇನೆ ಇವರನ್ನು ತಡೆಯಲು ಬಂತು. ಈಜುತ್ತಲೇ ನಾವು ಬರುವವರೆಗೆ ಅಲ್ಲೇ ಇರಿ, ನಾವು ನಿಶಸ್ತ್ರಧಾರಿಗಳು ಎಂದು ಸೈನಿಕರಿಗೆ ತಿಳಿಸಿದರು. ನಂತರ ದಡ ತಲುಪಿ ನಿರ್ಭೀತರಾಗಿ ಸೈನಿಕರ ಕಡೆ ನಡೆದರು. ಆಚಾರ್ಯರ ತೇಜಸ್ಸು ತುಂಬಿದ ಮಮತೆಯ ಕಣ್ಣುಗಳಿಗೆ ತುರ್ಕರ ದೊರೆ ಕೂಡ ಪ್ರಭಾವಕ್ಕೆ ಒಳಗಾದ. ಮತ್ತು ಅರ್ಧ ರಾಜ್ಯವನ್ನು ದಾನ ಮಾಡಿದ ಎಂದು ಮಧ್ವಾಚಾರ್ಯರ ಉಲ್ಲೇಖವನ್ನು ನೆನಪಿಸಿಕೊಂಡಿದ್ದಾರೆ.

ಬೇಸಿಗೆಯಲ್ಲಿ ವಿದ್ಯುತ್ ಸಮಸ್ಯೆಯಾಗದಂತೆ ಮುನ್ನೆಚ್ಚರಿಕೆ



ಬೆಂಗಳೂರು, ಮಾ.8– ಬೇಸಿಗೆಯಲ್ಲಿ ಬೆಳೆಗಳಿಗೆ ನೀರು ಹರಿಸಲು ವಿದ್ಯುತ್ ಸಮಸ್ಯೆಯಾಗದಂತೆ ರಾಜ್ಯ ಸರ್ಕಾರ ಎಲ್ಲ ಅಗತ್ಯ ಕ್ರಮ ಕೈಗೊಳ್ಳುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು. ಅವರು ಇಂದು ಗೃಹ ಕಚೇರಿ ಕೃಷ್ಣಾದಲ್ಲಿ ತಮ್ಮನ್ನು ಭೇಟಿಯಾದ ರೈತರ ನಿಯೋಗದೊಂದಿಗೆ ಅವರ ವಿವಿಧ ಸಮಸ್ಯೆಗಳ ಕುರಿತು ಚರ್ಚಿಸಿದರು. ವಿದ್ಯುತ್ ಕೊರತೆ ಉಂಟಾದಲ್ಲಿ ಹೊರ ರಾಜ್ಯಗಳಿಂದ ಖರೀದಿ ಪೂರೈಕೆ ಮಾಡುವ ಕುರಿತು ಚಿಂತನೆ ಮಾಡಲಾಗುವುದು. ಅಲ್ಲದೆ ರೈತರ ಪಂಪ್‌ಸೆಟ್‌ಗಳಿಗೆ ನಿರಂತರ ಏಳು ತಾಸು 3 ಫೇಸ್ ವಿದ್ಯುತ್ ಪೂರೈಸುವ ಕುರಿತು ಅಧಿಕಾರಿಗಳಿಗೆ ಸೂಚನೆ ನೀಡುವುದಾಗಿ ಮುಖ್ಯಮಂತ್ರಿಗಳು ತಿಳಿಸಿದರು.

ರಾಜ್ಯದ ವಿವಿಧೆಡೆ ಕೆಐಎಡಿಬಿಯು ಭೂಸ್ವಾಧೀನ ಪಡಿಸಿಕೊಳ್ಳುವ ಸಂದರ್ಭದಲ್ಲಿ ಜಮೀನು ಕಳೆದುಕೊಂಡವರಿಗೆ ಅಲ್ಲಿ ಸ್ಥಾಪನೆಯಾಗುವ ಉದ್ಯಮಗಳಲ್ಲಿ ಉದ್ಯೋಗ ಕೊಡಿಸುವ ಕುರಿತು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಸಮಿತಿ ರಚಿಸಿ, ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಮಂಡ್ಯದ ಮೈಷುಗರ್ ಸಕ್ಕರೆ ಕಾರ್ಖಾನೆಯನ್ನು ಸರ್ಕಾರವೇ ನಡೆಸಲು ನಿರ್ಧರಿಸಿ, ಚಾಲನೆ ಸಹ ನೀಡಲಾಗಿದೆ. ಮುಂದಿನ ಹಣಕಾಸು ವರ್ಷದಲ್ಲಿ ಇನ್ನಷ್ಟು ಸಶಕ್ತಗೊಳಿಸಲಾಗುವುದು ಎಂದು ಅವರು ಭರವಸೆ ನೀಡಿದ್ದಾರೆ. ಕಬ್ಬಿಗೆ ಎಸ್.ಎ.ಪಿ. ನೀಡುವ ಕುರಿತಂತೆ ಹಣಕಾಸು ಇಲಾಖೆಯೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಬಾಗಲಕೋಟೆ ಜಿಲ್ಲೆಯ ಬಾದಾಮಿಯಲ್ಲಿರುವ ಶ್ರೀ ವೀರ ಪುಲಿಕೇಶಿ ಸಹಕಾರಿ ಬ್ಯಾಂಕ್ ರೈತರಿಗೆ ಕಿರುಕುಳ ನೀಡುತ್ತಿರುವುದಾಗಿ ರೈತ ಮುಖಂಡರು ಮುಖ್ಯಮಂತ್ರಿಯವರ ಗಮನ ಸೆಳೆದರು. ಈ ಬ್ಯಾಂಕಿಗೆ ಕೂಡಲೇ ನೋಟೀಸು ನೀಡಲಾಗುವುದು ಎಂದು ತಿಳಿಸಿದರು. ಸಭೆಯಲ್ಲಿ ಸಚಿವರಾದ ಗೋಪಾಲಯ್ಯ, ವಿ. ಸೋಮಣ್ಣ, ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ ಮಂಜುನಾಥ ಪ್ರಸಾದ್, ಕೃಷಿ ಇಲಾಖೆ ಕಾರ್ಯದರ್ಶಿ ಶಿವಯೋಗಿ ಕಳಸದ, ಸಭೆಯಲ್ಲಿ ರೈತ ಮುಖಂಡ ಬಡಗಲಪುರ ನಾಗೇಂದ್ರ ಹಾಗೂ ಮತ್ತಿತರರಿದ್ದರು.





